UNIVERSAL LIBRARY
OU_198401
UNIVERSAL LIBRARY

# ಪರ್ಣಕುಟಿ ಗ್ರಂಥಮಾಲಾ, ಗೋಕರ್ಣ

## ಹೊರಟ ಪುಸ್ತಕಗಳು

**ಪ್ರಪಂಚದ ಕಥೆಗಳು**

ಭಾಗ ೧.

ಹೆಗಡೆ ಬಂಧುಗಳು

ಬೆಲೆ: ೧॥ ಆಣೆ

**ಶ್ರೀನಾಥ**

ಪಂ. ವಿಶ್ವೇಶ್ವರ ಶರ್ಮಾ,

ಗೋಕರ್ಣ.

ಬೆಲೆ ೧॥ ಆಣೆ

## ಹೊರಡಲಿರುವ ಪುಸ್ತಕಗಳು.

| | | |
|---|---|---|
| ೧. | ಅರುಣ: | ವಿವಿಧ ಬಾಲಕರು |
| ೨. | ತಾಯಿ: | ಮ. ಗ. ಶೆಟ್ಟಿ |
| ೩. | ಕಾಂಚನಮೃಗ | ಶ. ಪಂ. ಗೋಕರ್ಣ |
| ೪. | ಅಶಾಂತ | ಎಸ್. ಎಮ್. ಜೋಶಿ ದೇವತೆ |
| ೫. | ವಿಜಯನಗರದ ಸಾಮ್ರಾಜ್ಯ | ರಂ. ಶ್ರೀ. ಮುಗಳಿ |

ಗೋಕರ್ಣ ಕರ್ಣಾಟಕ ಸಂಘದ ಪ್ರಕಟಣೆ, ೨.

II

# ಶ್ರೀನಾಥ

(ಕಾರಂತರ ಹರಕೆಯೊಡನೆ)

II

ಬರಹಗಾರರು:
ಪಂ. ವಿಘ್ನೇಶ್ವರ ಶರ್ಮಾ.

ಪರ್ಣಕುಟಿ ಗ್ರಂಥಮಾಲಾ, ಗೋಕರ್ಣ.

ಜನವರಿ, ೧೯೪೬. ಬೆಲೆ: ೧॥ ಆಣೆ.

**ಸಂಪಾದಕ ಮಂಡಲಿ:—**

ಎನ್. ಡಿ. ಕುಲಕರ್ಣಿ, ಬಿ. ಎ., (ಒನರ್ಸ್)

ವಿ. ಜಿ. ಭಟ್ಟ

ಕೇ. ಜಿ. ಶಾಸ್ತ್ರಿ, ಬಿ. ಎ., (ಒನರ್ಸ್)

ಗೌರೀಶಂಕರ ಕಾಯಕಿಣಿ

ಎಸ್. ಆರ್. ಎಕ್ಕುಂಡಿ, ಬಿ. ಎ., (ಒನರ್ಸ್)

**ಪ್ರಕಾಶಕರು:—**

ಗೌರವಕಾರ್ಯದರ್ಶಿ ಮ. ಗ. ಶೆಟ್ಟಿ, ಕ. ಸಂ. ಗೋಕರ್ಣ

ಈ ಗ್ರಂಥದ ಪುಟ ೧ರಿಂದ ೬೦ರ ವರೆಗೆ ಸ್ಟಾರ್ ಒಫ್ ಕೆನರಾ ಪ್ರೆಸ್ ಕುಮಟಾದಲ್ಲಿ
ಮತ್ತು ಉಳಿದ ಪುಟಗಳು ಶ್ರೀ ಗಣಪತ ರಾಮರಾವ್ ಪೈಸೂರ ಇವರಿಂದ ಕುಮಟಾ
ಶ್ರೀರಾಮಕೃಷ್ಣ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್‌ದಲ್ಲಿ
ಮುದ್ರಿಸಲ್ಪಟ್ಟಿವೆ.

# ಪ್ರಕಾಶಕರ ಅರಿಕೆ.

೧೯೩೯ನೇ ಇಸವಿಯಲ್ಲಿ ಆರಂಭಿಸಲಿದ್ದ ಗ್ರಂಥಮಾಲೆ ೧೯೪೪ರಲ್ಲಿ ಕಾರ್ಯರೂಪಕ್ಕಿಳಿದು ಪರ್ಣಕುಟಿಯ ಗೆಳೆಯರ ನೆರವು ಕರ್ನಾಟಕ ಸಂಘದ ಬೆಂಬಲದಿಂದ ಈಗ ಬೆಳಕು ಕಾಣುತ್ತಿದೆ. 'ಪ್ರಪಂಚದ ಕಥೆ' 'ಶ್ರೀನಾಥ' ಸುಭಿಕ್ಷವಾಗಲೆಂದು ತಾಯ ಹೊಟ್ಟೆಯಲ್ಲಿ ಹನ್ನೆರಡು ವರ್ಷ ಕಳೆದ ಶುಕಮುನಿಯಂತೆ ಪ್ರೆಸ್ಸಿನ ಗರ್ಭದಲ್ಲಿ ಎರಡು ವರ್ಷ ನವೆದಿವೆ. ೧೯೪೫ರ ಸಪ್ಟೆಂಬರ ೧೪ ನೇ ತಾರೀಖಿನ ದಿನ ನನ್ನ ಹೆಸರಿಗೆ ಪಬ್ಲಿಶರ ಮುದ್ರೆಯನ್ನು ಪೇಪರ ಕಂಟ್ರೋಲರರು ಒತ್ತಿದುದರಿಂದ ಈಗ ಹೊರಬಿದ್ದಿವೆ.

ಈ ಮಾಲೆಯ ಪ್ರಾರಂಭ ಮಾಡಿದುದು ಹೆಗಡೆ ಗಣಪತಿಯ ಪೂಜೆಯಿಂದ. 'ವಿಘ್ನಗಳು ಬರದಿರಲಿ' ಎಂದು ಬಯಸಿ, ವಿಘ್ನೇಶ್ವರನ ಕೃಪೆಯನ್ನೂ ಪಡೆದು, ಶಿವರಾಮ ಕಾರಂತರ ಹರಕೆಯನ್ನು ಹೊತ್ತು ಮುಂದಾಗಿದ್ದೇವೆ. ಇದರ ಪೋಷಣೆ, ಬೆಳವಣಿಗೆ ಕನ್ನಡ ಜನದ ಮೇಲಿರುವ ಹೊಣೆ.

ಪ್ರೆಸ್ಸಿನವರನ್ನು ಅಭಿನಂದಿಸುವದು ಉಳಿದ ಪ್ರಕಾಶಕರ ದೃಷ್ಟಿಯಿಂದ ತೋರಿಕೆಯ ಮಾತಿರಬಹುದು. ಆದರೆ ಈ ಮಾಲೆಯ ವಿಷಯದಲ್ಲಿ ಕುಮಟೆಯ ಶ್ರೀರಾಮಕೃಷ್ಣ ಪ್ರಿಂಟಿಂಗ್ ಪ್ರೆಸ್ಸು ಮತ್ತು ಸ್ಟಾರ್ ಆಫ್ ಕೆನರಾ'ಪ್ರೆಸ್ಸು ತೋರಿದ ಸೌಹಾರ್ದತೆ, ಔದಾರ್ಯ ಮಾತನ್ನಳಿದದ್ದು.

ವಿಜಯದಶಮಿ,
೧೯೪೫.

ಮ. ಗ. ಶೆಟ್ಟಿ,
ಪ್ರಕಾಶಕ.

# ಹರಕೆ.

ಗೋಕರ್ಣದ ಕೆಂಬಯರ ಪ್ರಥಮ ಸಾಹಸವಾದ ಈ ಪುಟ್ಟ ಹೊತ್ತಿಗೆಯು ಇಂಥ ಕಷ್ಟಕಾಲದಲ್ಲಿಯೂ ಅಚ್ಚಿನ ಮನೆಯನ್ನು ದಾಟಿ ಬೆಳಕಿಗೆ ಬಂದಿದೆ. ನಾಡ ನುಡಿಗಳಲ್ಲಿ ತಮ್ಮ ಭಾವನೆ ಯೋಚನೆಗಳನ್ನು ಬೆಳಕಿಗೆ ತರಬೇಕೆಂಬ ಅವರ ಹಂಬಲವು ಅವರ ಮುಂದಿನ ಬೆಳವಣಿಗೆಗಳಲ್ಲಿ ಇದಕ್ಕೂ ಯಶಸ್ವಿಯಾಗಿ ಪ್ರಕಾಶಿಸೀತೆಂಬ ಭರವಸೆಯಿಂದ ಈ ನಾಲ್ಕು ಮಾತುಗಳನ್ನು ಬರೆಯುತ್ತಲಿದ್ದೇನೆ. ಅವರು ತಮ್ಮ ನಾಡಿನ ಜೀವನದ ಅನೇಕ ಹಾಸ್ಯದ ಚಿತ್ರಗಳನ್ನು ಸಹಜ ಸ್ಫೂರ್ತಿಯ ಮಾತುಗಳಲ್ಲಿ ಚಿತ್ರಿಸಿ ಉತ್ತರ ಕನ್ನಡ ಜಿಲ್ಲೆಯ ಹೆಸರನ್ನು ಕರ್ಣಾಟಕ ಭೂಪಟದಲ್ಲಿ ನಿಲ್ಲಿಸಿ ನಾಡಿಗೂ ತಮಗೂ ಕೀರ್ತಿಯನ್ನು ಗಳಿಸಲೆಂದು ಬಯಸುವ,

೧—೮—೪೫<br>
ಪುತ್ತೂರು, (ದ. ಕ.) }

**ಶಿವರಾಮ ಕಾರಂತ.**

**

# ಶ್ರೀನಾಥ

## ೧

ಅಂಚೆಯವನು ಲಕೋಟೆಯನ್ನು ಕೊಟ್ಟು ಹೋದ. ಪದ್ಮೆಯು ಕಸೂತಿಯ ಕೆಲಸದ ಮೇಲಿದ್ದವಳು ಕೆಲಸ ಬಿಟ್ಟು ಕವರನ್ನು ಕೈಗೆತ್ತಿಕೊಂಡು ಅದರ ಹೊರಮೈಯನ್ನು ಹಿಂದೆ ಮುಂದೆ ಮಾಡಿ ನೋಡಿದಳು. ಅದೇಕೋ, ಒಡೆದು ನೋಡುವ ಉತ್ಸಾಹ ಅವಳಿಗೆ ಬರಲಿಲ್ಲ; ತಂದೆ ನೋಡಿಕೊಳ್ಳುತ್ತಾನೆ! ಎನ್ನುತ್ತ ಅವಳು ಹಾಗೆಯೇ ಲಕೋಟೆಯನ್ನು ನೆಲದ ಮೇಲಿಟ್ಟು ದಣಿದು ಹೋಗಿದ್ದ ಕಣ್ಣುಗಳನ್ನು ಉಜ್ಜಿಕೊಳ್ಳುತ್ತ ತನ್ನ ಗತ-ಕಾಲವನ್ನು ಚಿಂತಿಸುವುದರಲ್ಲಿ ಮಗ್ನಳಾದಳು.

ಪದ್ಮೆಗೆ ಏಳು ವರ್ಷ ಎನ್ನುವಾಗ ಲಗ್ನವಾಯಿತು. ಆಗ ಅವಳಿಗೆ ಮದುವೆಯೆಂದರೆ ನಾಚಿಕೆ, ಆನಂದ ಎರಡನ್ನೂ ವ್ಯಕ್ತಪಡಿಸುವ ಒಂದು ತರದ ಆಟ ಎನ್ನಿಸಿತ್ತು. ಮುಂದೆ ಒಂದೆರಡು ತಿಂಗಳು ಕಳೆಯುವದರೊಳಗೆ ಗಂಡನಾದ ಹುಡುಗ ಮೈಲೀ ಬೇನೆಯಿಂದ ತೀರಿಕೊಂಡ. ಆಗ ಎಲ್ಲ ಆಪ್ತ-ರಂತೆ ಪದ್ಮೆಯೂ ಒಂದು ಕ್ಷಣ ಅತ್ತಿದ್ದಾಳೆ. "ಇಂಥಲ್ಲಿ ನಗಬೇಕು, ಇಂಥಲ್ಲಿ ಅಳಬೇಕು" ಎಂಬುದನ್ನು ಬೇರೆಯವರಾರೂ ತನಗೆ ಹೇಳಿಕೊಡಬೇಕಾಗಿಲ್ಲ ಎಂಬ ಹೆಮ್ಮೆಯನ್ನು ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಆಕೆ ಅಳವಡಿಸಿಕೊಂಡಿದ್ದಾಳೆ. ನಂತರ ಹಳ್ಳಿಯ ಸಾಲೆಯಲ್ಲಿ ನಾಲ್ಕನೆತ್ತೆಯ ತನಕ ತಂದೆ ವಿಶ್ವನಾಥಯ್ಯ ಅವಳಿಗೆ ಓದಿಸಿದ. ತನ್ನ ಬಾಳಿನ ಅರಿವು ತುಸು ತುಸು ಆಗಹತ್ತಿದಾಗ ತಂಗಿಯ ಮದುವೆ ಬಂತು. ಆ ಮಂಗಲೋತ್ಸವ

ದಲ್ಲಿ ತಾನೆಷ್ಟು ಸಿಂಗರಿಸಿಕೊಂಡರೂ ಒಡನಾಡಿಗಳು ತನ್ನನ್ನು ಹತ್ತಿರ ಸೇರಿಸಿಕೊಳ್ಳದೆ ಇದ್ದುದನ್ನು ನೋಡಿ ಆಕೆಗೆ ಕಳವಳ. ಹಿರಿಯ ಜನವೋ, ತಾನು ಹಾಗೆ ಅಲಂಕರಿಸಿಕೊಂಡದ್ದನ್ನು ತೀರ ಅಸಡ್ಡೆಯಾಗಿ ಕಂಡು ಮೂಗು ಮುರಿಯುತ್ತಿದೆ. ಇವರಂದಂತೂ ಅವಳ ಎದೆಯಲ್ಲಿ ಜ್ವಾಲೆ ಹೊತ್ತಿಸಿದಂತಾಗಿದೆ. ಆಭರಣಗಳನ್ನೆಲ್ಲ ಬಲಾತ್ಕಾರದಿಂದ ಹಿರಿಯರು ತೆಗೆಸಿದ್ದಾಯಿತು. ಆದರೆ ಹಣೆಯ ಕುಂಕುಮವನ್ನು ಅಳಿಸಿಕೊಳ್ಳುವದಕ್ಕೆ ಮಾತ್ರ ಅವಳು ಎಷ್ಟು ಮಾತ್ರಕ್ಕೂ ಒಪ್ಪಲಿಲ್ಲ. 'ಇನ್ನು ಒಂದೆರಡು ವರ್ಷ ಹೋದರೆ ತಾನೇ ಬುದ್ಧಿ ಬರುವದು' ಎಂದು ವಿಶ್ವನಾಥಯ್ಯ ಆಗ ಹೇಗೋ ಸುಮ್ಮಗಿದ್ದ. ಚಿನ್ನದಂತಹ ಮೈಕಾಂತಿಯಿಂದ ಮುದ್ದುಮುದ್ದಾಗಿ ತೊಳಗುವ ಆ ಬಾಲಿಕೆಯನ್ನು ಒಮ್ಮೆಲೆ ವಿರೂಪಗೊಳಿಸಲಿಕ್ಕೆ ಯಾವ ತಂದೆಯ ಕರುಳು ತಾನೇ ಸಾಹಸ ಮಾಡೀತು? ಮುಂದೆ ಅದಾವುದೋ ಪುಸ್ತಕದಲ್ಲಿ "ಗಂಡ ಸತ್ತರೆ ಮಂಗಲಸೂತ್ರ ಕಳೆದಂತಾಯಿತು. ಕುಂಕುಮ ಅಳಿಸಿಕೊಳ್ಳುವ ಪ್ರಮೇಯವೇನೂ ಇಲ್ಲ" ಎಂಬ ವಚನವನ್ನು ಓದಿದಳು. ಸರಿ! ನಿರ್ಧಾರ ಸ್ವಭಾವದ ಆ ಹುಡುಗಿ ತಂದೆ ಅದೆಷ್ಟು ಗದ್ದರಿಸಿದರೂ ಕುಂಕುಮ ಹಚ್ಚಿಕೊಳ್ಳುವದನ್ನು ತಪ್ಪಿಸಲೇ ಇಲ್ಲ. ಹದಿನೆಂಟು ವರ್ಷ ವಯಸ್ಸಾದಾಗ ಅವಳಿಗೆ ವಿಷಮಜ್ವರದ ಉಪಹತಿಯಾಯಿತು. ಆ ಸಮಯಕ್ಕೆ ಹಳ್ಳಿಗೆ ಹೊಸದಾಗ "ಮಲೇರಿಯಾ ಡ್ಯೂಟಿ"ಯ ಮೇಲೆ ಬಂದ ಡಾ॥ ಗೋವರ್ಧನರಾಯರೆಂಬವರು ವಿಶ್ವನಾಥಯ್ಯನ ಮನೆಯಲ್ಲಿಯೇ ಉಳಿದು ಪದ್ಮೆಗೆ ಚಿಕಿತ್ಸೆ ಮಾಡಿದರು. ಹರೆಯದವರೂ, ಸ್ಫುರದ್ರೂಪಿಗಳೂ ಆಗಿದ್ದ ಆ ಡಾಕ್ಟರರ ಆರೈಕೆ ಪದ್ಮೆಯ ಮೈಮನಸ್ಸುಗಳಿಗೆ ಅದೆಷ್ಟೋ ಹಿತಕರವಾಗಿತ್ತು. ಮುಂದೆ ಸ್ವಲ್ಪವೇ ದಿನಗಳಲ್ಲಿ ಅವರು ಆ ಊರು ಬಿಟ್ಟು ಧಾರವಾಡದಲ್ಲಿ ಸ್ವತಂತ್ರವಾಗಿ ಉದ್ಯೋಗ ಪ್ರಾರಂಭಿಸಿದರು, ಅಷ್ಟು ಹೊತ್ತಿಗೆ ಪದ್ಮೆಯ ಅಣ್ಣ ರಾಮನಾಥನು ಅಲ್ಲಿಯೇ ಕೊಲೇಜಿಗೆ ಸೇರಿದ. ಆಮೇಲೆ ಒಂದು ದಿನ ಅಣ್ಣನ ಪತ್ರ ಬಂತು. "ಡಾ॥ ಗೋವರ್ಧನರಾಯರ ಹೆಂಡತಿ ಒಂದು ಗಂಡುಮಗುವನ್ನು ಹೆತ್ತು ಆಸ್ಪತ್ರೆಯಲ್ಲಿಯೇ ತೀರಿಕೊಂಡಳು. ಶಿಶು ಸುಖರೂಪವಾಗಿದೆ" ಯೆಂದು ಆ ಪತ್ರದಲ್ಲಿ ಬರೆದಿತ್ತು. ಪದ್ಮೆಗೆ ಅದನ್ನು ಓದಿದಾಗ ದುಃಖಕ್ಕಿಂತ ಹೆಚ್ಚಾಗಿ ಅದೆಂತಹದೋ ಹುಚ್ಚು ಆಸೆಗಳು ಹೃದಯದಲ್ಲಿ ತಲೆಯೆತ್ತಿಕೊಳ್ಳಬೇಕೇ? ಆ ಆವೇಗದಲ್ಲಿ ಅವಳು ಒಂದು ಕಾಗದದ ಮೇಲೆ ಡಾಕ್ಟರರಿಗೆ — ಎಂದು ಏನೇನೋ ಬರೆದಳು.

ಆದರೆ ಆ ಕಾಗದವನ್ನು ಅವಳ ಆಗಿನ ಸ್ಥಿತಿಯಲ್ಲಿ ಅವರಿಗೆ ಮುಟ್ಟಿಸುವದು ತೀರ ಅಸಂಭವವಾಗಿತ್ತು. ಪದ್ಮೆಯ ದುರ್ದಮ್ಯ ಆಸೆಗಳು ಆಗಿನಿಂದಲೂ ಆಶ್ರಯಹೀನವಾದ ಲತೆಗಳಂತೆ ಕಮರಿಹೋಗಿವೆ.

ಒಂದೊಂದಾಗಿ ಎಲ್ಲ ಸಂಗತಿಗಳೂ ಪದ್ಮೆಯ ಸ್ಮೃತಿಪಟಲದಲ್ಲಿ ಒಂದು ಕ್ಷಣ ಮಿಂಚಿ ಮಾಯವಾಯಿತು. "ತನ್ನಂಥವಳ ನೋವು-ನಗೆಗಳಿಗೆ ಲೋಕವು ಯಾವ ಬೆಲೆಯನ್ನೂ ಕೊಡುತ್ತಿಲ್ಲ! ಜನರ ದೃಷ್ಟಿಯಲ್ಲಿ ಅವೆಲ್ಲ ಬರೀ ವಿಡಂಬನೆಯ ಸಾಮಗ್ರಿಗಳು ಅಷ್ಟೇ." ಪದ್ಮೆಯು ಮತ್ತೊಮ್ಮೆ ಲಕೋಟೆಯ ಕಡೆಗೆ ಬಗ್ಗಿದಳು. ಧಾರವಾಡದಿಂದ ಎಂದು ಅಂಚಿಗೆ ಬರೆದುಕೊಂಡಿತ್ತು. ಆ ಪತ್ರ ಅಣ್ಣನದೇ ಎಂಬುದಕ್ಕೆ ಸಂದೇಹವಿರಲಿಲ್ಲ. ಅದರಲ್ಲಿ ಇನ್ನಾವ ಅನಾಹುತದ ವರ್ಣನೆಯಿದೆಯೋ ಯಾರು ಬಲ್ಲ? ಪದ್ಮೆಗೆ ಆ ಕವ್ಹರು ಸಮೀಪದಲ್ಲಿ ಇರುವದು ಕೂಡ ಬೇಡವಾಯಿತು. ತಮ್ಮ ಸುಬ್ಬಯ್ಯನನ್ನು ಕರೆದು ಅದನ್ನು ತಂದೆಯ ಕಪಾಟಿನಲ್ಲಿಡಲು ಹೇಳಿ ಆಕೆ ಮಾತ್ರ ತನ್ನ ಹೊಲಿಗೆಯಲ್ಲಿಯೇ ಆಸಕ್ತಳಾದಳು.

೨

"ಪದ್ಮಾ, ನೋಡಿದೆಯೋ ನಿನ್ನಣ್ಣನ ಕಾಗದ? ನಮ್ಮ ಸುಬ್ಬೂವಿಗೆ ಪಾಠ ಹೇಳಲು ಒಬ್ಬರು ಬರ್ತಾರಂತೆ. ಎಲ್ಲಿ, ಹುಡುಗನೆತ್ತ ಹೋದ?

"ಸಿಬೇ ಮರ ಇದೆಯಲ್ಲ! ಮತ್ತೆಲ್ಲಿ ಹೋಗ್ಬೇಕು ಆ ಕೋತಿ! ಅಲ್ಲ, ಅಣ್ಣ ಏನೇನೂ ಮನಸ್ಸಿಗೆ ಹಚ್ಚಿಕೊಳ್ಳೋದಿಲ್ಲ ಅಂತಿದ್ದಿಯಲ್ಲ! ಯಾರಂತೆ ಅವರು?"

"ಯಾರೋ ಮೈಸೂರಿನ ಕಡೆಯವರಂತೆ! ಮನಸ್ವಾಸ್ಥ್ಯ ಚನ್ನಾಗಿಲ್ಲ. ಮತ್ತೆ ಅವರಿಗೆ ಯಾವ ಭಾಗದಲ್ಲಿಯೂ ಅನಾದರ ಕಾಣಬಾರದು. ಹಾ, ಗೊತ್ತೇ ಇದೆ, ನಿನ್ನಣ್ಣನದು. ಅಯಿತು, ಈ ತುಂಟನಿಗೆ ಹಾದೀ ಹಚ್ಚೋದರ ಜೊತೆಗೆ ಬರಲಿರುವ ಈ ಪೀಡೆ ಎಂತಹದೋ?"

"ಸರಿ ತಾನು ವೈದ್ಯಕೀ ಅಭ್ಯಾಸ ಮಾಡಿ ಇಲ್ಲೊಂದು ಔಷಧಾಲಯ ತೆಗೆಯಬೇಕು, ನಿನ್ನ ಮಗ! ಆ ಮೇಲೆ ಇಂಥ ಕೆಲಸಕ್ಕೆ ಕೈಹಚ್ಚಬೇಕಿತ್ತು

ಭಾಷ! ಬಂದ ಬಂಧನೋದದೆಲ್ಲ ಅರೈಕೆ ಮಾಡೋದೊಂದೇ ನನ್ನ ಭಾಗ್ಯ ಎಂತ ಕಾಣುತ್ತದೆ. ಆಗದು ಅಪ್ಪಾ, ಇಲ್ಲಿ ಜನ ಗೊತ್ತಾಗಿದೆ, ಅವರು ಬರೋದು ಬೇಡ ಎಂತ ಅಣ್ಣನಿಗೆ ಸ್ಪಷ್ಟ ಬರೆದು ಬಿಡು. ಪತ್ರ ನಾಳಿನ ಟಪಾಲಿಗೇ ಹೋಗಲಿ.”

ಪದ್ಮೆಯು ಅಣ್ಣನ ಕಾಗದದ ವಿಷಯ ಕೇಳಲು ಮೊದಲೆಷ್ಟು ಉತ್ಸಾಹ-ಕುತೂಹಲಗಳನ್ನು ವ್ಯಕ್ತಪಡಿಸಿದ್ದಳೋ ಅಷ್ಟೇ ಉದಾಸೀನತೆಯಿಂದ ಒಳಗೆದ್ದು ನಡೆದಳು. ವಿಶ್ವನಾಥಯ್ಯನು ಮಗಳ ಸ್ವಭಾವವನ್ನು ಚನ್ನಾಗಿ ಬಲ್ಲವನಾದ್ದರಿಂದ ಪಿಟ್ಟೆನ್ನದೆ ಆ ಕಾಗದವನ್ನು ತೆಗೆದಿಟ್ಟು ಹುಡುಗನಿಗೆ ಪಾಠ ಆರಂಭಿಸುವ ಮೊದಲು ಪುಸ್ತಕಗಳನ್ನು ಹುಡುಕಿಟ್ಟುಕೊಳ್ಳಲಿಕ್ಕೆ ಎಚ್ಚರಿಸಲು ತೋಟದ ಕಡೆಗೆ ನಡೆದನು.

ಬನವಾಸಿಗೆ ಆರೆಂಟು ಮೈಲು ದೂರದಲ್ಲಿ ಮಾಗೋಡು ಎಂಬ ಗ್ರಾಮವಿದೆ. ವಿಶ್ವನಾಥಯ್ಯನು ಆ ಹಳ್ಳಿಗೆ ದೊಡ್ಡ ಮನುಷ್ಯ. ಅಂದರೆ ಆಸ್ತಿ ವಿಪುಲವಾಗಿತ್ತು. ಹಳ್ಳಿಯ ಕಗ್ಗತನವನ್ನು ಮರೆಸಲಿಕ್ಕೆ ಸಂಪತ್ತು ಸಾಕಷ್ಟಿತ್ತು. “ಕೈ ಹಿಡಿದ ಹೆಂಗುಸಿನ ಕಾಲ್ಗುಣ” ಎಂಬ ಗಾದೆ ಈತನ ವಿಷಯದಲ್ಲಿ ಚನ್ನಾಗಿ ಅನ್ವಯಿಸುತ್ತದೆ ಇಲ್ಲವಾದರೆ ಕೃಷಿಯ ಹೊರತಾಗಿ ಇನ್ನಾವ ಜ್ಞಾನವೂ ಇಲ್ಲದ ವಿಶ್ವನಾಥಯ್ಯ ದೊಡ್ಡಸ್ತಿಕೆಗೆ ಏರುವ ಸಂಭವವಿದೆಯೇ? ಹೆಂಡತಿಯಿಂದಾಗಿ ಸಧ್ಯ ಅವನಿಗೆ ಯಾವ ಕೊರತೆಯೂ ಇಲ್ಲ. ಅವಳ ಅಕ್ಕನಿಗೆ ಸಂತಾನವಿಲ್ಲದೆ ಆ ಆಸ್ತಿಯೆಲ್ಲ ತಾನಾಗಿಯೇ ಅವನೆಡೆಗೆ ಬಂದುಬಿಟ್ಟಿತ್ತು. ಪ್ರಕೃತ ಆತನಿಗೆ ನಾಲ್ಕು ಮಕ್ಕಳು. ಹಿರಿಯನಾಗಿದ್ದ ಗಂಡು ಹುಡುಗನಿಗೆ ಈಗ ಇಪ್ಪತ್ತು ನಾಲ್ಕು ವಯಸ್ಸು. ಅವನು ಧಾರವಾಡದಲ್ಲಿ ಕೊಲೇಜಿಗೆ ಸೇರಿ ಇಂಗ್ಲೀಷು ಅಭ್ಯಾಸ ಮುಂದುವರಿಸಿದ್ದಾನೆ. ಎರಡನೆಯವಳೇ ಪದ್ಮೆ. ಇನ್ನೊಬ್ಬ ಮಗಳು ಸಾವಿತ್ರಿ. ಅವಳನ್ನು ಬನವಾಸಿಗೆ ಕೊಟ್ಟಿತ್ತು. ವಿಶ್ವನಾಥಯ್ಯನ ಹೆಂಡತಿ ಈಗಿತ್ತ ಆ ಮಗಳೊಡನೆ ಅಳಿಯನ ಮನೆಯಲ್ಲಿಯೇ ಹೆಚ್ಚಾಗಿ ಇರುತ್ತಾಳೆ. ಪದ್ಮೆಗೆ ಗಂಡನ ಮನೆಯನ್ನು ಸೇರಿ ಪತಿಯೊಡನೆ ಸಂಸಾರ ಹೂಡುವ ಭಾಗ್ಯವಿರಲಿಲ್ಲ. ಅವಳಾವಾಗಲೂ ತಂದೆಯೊಡನೆ ಇರುವವಳು. ಕಿರಿಯ ಮಗನಾದ ಸುಬ್ಬಯ್ಯನಿಗೆ ಈಗ ಹದಿನಾಲ್ಕು ವರ್ಷ. ತನ್ನ ಕುಟುಂಬವು ಸುಸಂಸ್ಕೃತವಾದುದೆಂದು ತೋರಿಸಿ

ಕೊಳ್ಳಲು ಏನೇನು ಬೇಕೋ ಅದೆಲ್ಲವನ್ನೂ ವಿಶ್ವನಾಥಯ್ಯ ಪ್ರಯತ್ನ ಪೂರ್ವಕವಾಗಿ ಮಾಡುತ್ತಿದ್ದಾನೆ. ಹುಡುಗ ಸುಬ್ಬಯ್ಯನ ಬುದ್ಧಿಯೂ ಸ್ವಲ್ಪ ತುದಡು. ಈ ಹುಡುಗನಿಗೆ ಕಾಲೋಚಿತ ಮಂತ್ರಪಾಠ ಹೇಳಿಸುವ ಮನಸ್ಸು ಮಾಡಿದ್ದಾನೆ. ಅಂದರೆ ಹೆಡ್ಡರು ಓದಿಕೊಳ್ಳಬೇಕಾದ ವಿದ್ಯೆ ಅದು ಎಂಬ ಭಾವನೆ ವಿಶ್ವನಾಥಯ್ಯನಿಗೆ ಇದೆ ಎಂದೇನೂ ಅರ್ಥ ಮಾಡಲಾಗದು. ವೈದಿಕ ಬ್ರಾಹ್ಮಣರಲ್ಲಿ ಅವನಗಿರುವ ಶ್ರದ್ಧೆ ಅಪಾರವೇ!

## ೩

ಒಳಮನೆಯಲ್ಲಿ ಒಳ್ಳೇ ಗಜಿಬಿಜಿ ನಡೆದಿದೆ. ಪದ್ಮೆಯು ಚಪಾತಿ ಸುಡುತ್ತಿದ್ದಾಳೆ. ಇಂಥ ಕೆಲಸದಲ್ಲಿ ತಮ್ಮ ಸುಬ್ಬಯ್ಯನೂ ಒದಗುತ್ತಿದ್ದರೆ ಆಶ್ಚರ್ಯವಲ್ಲ. ತನಗೆ ಪಾಠ ಹೇಳುವ ಉಪಾಧ್ಯಾಯರು ಎಂಥವರೋ ಎಂಬ ಅಳುಕು ಈ ಸಮಯದಲ್ಲಿ ಆ ಬೃಹಸ್ಪತಿಯ ಮೊಮ್ಮಗನ ಮೋರೆಯ ಮೇಲೆ ಒಡಮೂಡಿ ಆತನನ್ನು ವ್ಯಗ್ರನನ್ನಾಗಿ ಮಾಡಿದ್ದರಿಂದ ತಪ್ಪು-ತಡೆ ಹೆಚ್ಚಾಗಿ ಅಕ್ಕನ ಆಗಿನ ಬೈಗಳನ್ನು ಆತ ಹೇಗೋ ಸಹಿಸಿಕೊಳ್ಳುತ್ತಿದ್ದಾನೆ.

ಬೆಳಗಿನ ಒಂಭತ್ತು ಘಂಟೆಯ ಸುಮಾರಿಗೆ ವಿಶ್ವನಾಥಯ್ಯನ ಮನೆಯ ಹೊರಭಾಗದಲ್ಲಿ ಹೊಸ ಹೆಜ್ಜೆಗಳ ಸದ್ದು ಕೇಳಬಂತು. ವಿಶ್ವನಾಥಯ್ಯನು ಅಭ್ಯಾಗತನನ್ನು ಆದರದಿಂದ ಬರಮಾಡಿಕೊಂಡ. ಹುಡುಗ ಸುಬ್ಬಯ್ಯನು ತನಗೆ ಗುರುವಾಗುವವನನ್ನು — ನಡುಮನೆಯ ಬಾಗಿಲ ಸಂದಿಯಿಂದಲೇ ಕದ್ದು ನೋಡುತ್ತಿದ್ದ. ಪದ್ಮೆಯು ತನ್ನ ಕುತೂಹಲವನ್ನು ತಡೆಹಿಡಿದು ತಮ್ಮನ ಆಗಿನ ಮನಸ್ಥಿತಿಯನ್ನು ನೆನೆಯುತ್ತ ತನ್ನೊಳಗೇ ನಗುತ್ತ ಒಲೆಯ ಸಮೀಪವನ್ನು ಇನ್ನೂ ಬಿಡದೇ ಇದ್ದಳು. "ಬನ್ನಿ, ನೀವು ಬರುವ ವರ್ತಮಾನವನ್ನು ಮೊನ್ನೆಯೇ ನಮ್ಮ ರಾಮನಾಥ ಕಾಗದದಲ್ಲಿ ಬರೆದಿದ್ದ. ನಿಮ್ಮ ಆಗಮನದಿಂದ ನಮಗೆಲ್ಲ ಸಂತೋಷವಾಯಿತು. ಏ ಸುಬ್ಬಯ್ಯ, ಸ್ವಲ್ಪ ನೀರು ತೆಗೆದುಕೊಂಡು ಬಾರೋ!"

ತಂದೆಯ ಉರುಹಾಕಿಕೊಂಡಂತಿದ್ದ ಆ ಮಾತು ಮುಗಿಯುತ್ತಿದ್ದಂತೆಯೇ ಗಾಬರಿಯಿಂದ ಹುಡುಗ ಧಡಬಡಿಸಿದ. ಹಣೆಯು ಬಾಗಿಲ ಪಟ್ಟಿಗೆ ಬಡಿದು ಘಾಯವಾಯಿತು. ಒಂದು ಕೈಯಿಂದ ಬರುತ್ತಿರುವ ರಕ್ತವನ್ನು ಒತ್ತಿಹಿಡಿದು ಇನ್ನೊಂದರಲ್ಲಿ ನೀರಿನ ತಂಬಿಗೆಯನ್ನೂ, ಎತ್ತಿಕೊಂಡು ಬರುವ

ಆ ರೂಪ ನೋಡುವಂತಿತ್ತು. ಒಳಮನೆಯಲ್ಲಿ ಹಿಡಿಸಲಾರದೆ ಹೊರಬಿದ್ದ ಪದ್ಮೆಯ ನಗೆಯ ಧ್ವನಿ.

“ಗೊತ್ತಾಗಲಿಲ್ಲವೇನೋ, ಇವರೇ ನಿನ್ನ ಗುರುಗಳು. ನಮಸ್ಕಾರ ಮಾಡು.”

ಈ ಬಾರಿ ಹುಡುಗ ಸ್ವಲ್ಪ ಧೈರ್ಯ ತಂದುಕೊಂಡು ಒಮ್ಮೆ ತನ್ನ ಉಪಾಧ್ಯಾಯರನ್ನು ಕಣ್ಣಿಟ್ಟು ನೋಡಿದ. ತಾನು ಮನಸ್ಸಿನಲ್ಲಿ ಚಿತ್ರಿಸಿಕೊಂಡ ಒಂಟು ಪಂಚೆ, ದಪ್ಪ ಕಳಬಾತಿ, ದೊಳ್ಳು ಹೊಟ್ಟೆ, ಕಪ್ಪು ಮೈ,--- ಇವೊಂದೂ ಎದುರಿಗೆ ಕುಳಿತವರಲ್ಲಿ ಕಾಣದೇ ಬಳಲುಗಚ್ಚೆಯ, ತಿಳಿಯಾದ ಧೋತರದಿಂದ, ಕಾಲೇಜು ಹುಡುಗರಂತೆ ಮೊಣಕೈ ತನಕ ಮಾತ್ರವೇ ಬರುವ ಸರಟು ತೊಟ್ಟುಕೊಂಡ, ಎಳೆ ಪ್ರಾಯದ, ತೆಳ್ಳಗಿನ ದೇಹದ, ಸೌಮ್ಯ ಆಕಾರವನ್ನು ನೋಡಿ ಆತನ ಕಳವಳ-ಅಂಜಿಕೆ ಎಲ್ಲ ಕ್ರಮವಾಗಿ ಮಾಯವಾಯಿತು.

“ದೂರದಿಂದ ಬಂದದ್ದು. ನೀವೀಗ ಸ್ವಲ್ಪ ವಿಶ್ರಮಿಸಿ. ಪ್ರವಾಸದಲ್ಲಿ ಅದೆಷ್ಟು ತೊಂದರೆಯಾಗಿತ್ತೋ! ಒಳಗೆ ಬಾಯಾರಿಕೆಗೆ ಸಿದ್ಧವಾಗಿದೆ. ನಂತರ ಮಾತಾಡೋಣ. ತೋಟದಲ್ಲಿ ಆಳುಗಳು ಬಂದಿದ್ದಾರೆ. ಆಯಿತು, ಅವರ ಕೆಲಸ ಸ್ವಲ್ಪ ನೋಡಿ ಬರುತ್ತೇನೆ. ಸುಬ್ಬಯ್ಯ ಇವರನ್ನು ಒಳಗೆ ಕರೆದುಕೊಂಡು ಹೋಗು. ಕುಳಿತುಕೊಳ್ಳುವದಕ್ಕೆ ಮಣೆ ಹಾಕಲು ಮರೆಯಬೇಡ. ಹಾ, ನಾನೀಗ ಬಂದೆ.”

ವಿಶ್ವನಾಥಯ್ಯನು ತಲೆಗೆ ರುಮಾಲು ಸುತ್ತಿಕೊಳ್ಳುತ್ತ ತೋಟಕ್ಕೆ ಹೊರಟುಹೋದ.

ಒಳಗೆ ಎಲ್ಲ ಅಣಿಯಾಗಿದೆ. ಅಭ್ಯಾಗತನು ಮಣೆಯ ಮೇಲೆ ಕುಳಿತ. ಪದ್ಮೆಯು ಚಪಾತಿಯ ತಾಟನ್ನು ಮುಂದೆ ಮಾಡಿ ತಟ್ಟೆಯಲ್ಲಿ ಕಾಫಿಯನ್ನು ಸುರುವಿದಳು.

“ಪದ್ಮೆಯೆಂಬವಳು ನೀನೇ ಏನು? ನೋಡು, ನಿನ್ನೊಡನೆ ತೊಂದರೆಗಳನ್ನು ಹೇಳಿಕೊಳ್ಳುವದಕ್ಕೆ ಯಾವ ಅಭ್ಯಂತರವೂ ಇಲ್ಲವೆಂದು ನಿನ್ನ ಅಣ್ಣ ಹೇಳಿದ್ದಾನೆ.”

ಆತನ ಗಂಡುಸ್ವರದಲ್ಲಿ ಯಾವ ತರಹದ ಸಂಕೋಚಕ್ಕೂ ಎಡೆಯೇ ಇಲ್ಲದಂತಿದೆ.

"ಈಗ ನಾನೊಂದು ಮಾತು ..............."

ಅದೇಕೋ, ಮುಂದೆ ಮಾತಾಡುವದಕ್ಕೆ ಮೊದಲು ಆತ ಒಮ್ಮೆ ಪದ್ಮೆಯ ಮುಖವನ್ನು ನೋಡಿದ. ಸುಂದರವಾದ ಮೋರೆ ಆರಕ್ತವಾಗಿತ್ತು. ಅದೇ ಮೊದಲು ಸಲವೋ ಎನ್ನುವಂತೆ ತೋರಿಬಂದ ತನ್ನ ಆ ಅಧೀರತೆಯನ್ನು ನೆನೆದು ಪದ್ಮೆಯು ಬೆವತಳು.

"ಹೂ ಹೇಳಿ, ನೀವು ಬಹಳ ದಿನ ಇಲ್ಲಿಯೇ ಉಳಿಯಬೇಕಾಗುವದರಿಂದ ಸಂಕೋಚ ಹಿಡಿದರೆ ಅದು ನಿಮಗೇ ಕೇಡು. ಮೈಸೂರಿನವರಾದ ನಿಮಗೆ ನಮ್ಮಲ್ಲಿಯ ಕಾಫಿ ರುಚಿಸುವದಿಲ್ಲವೇನೋ? ಬೇಕಾದರೆ ಬಿಸಿ ಬಿಸಿ ಹಾಲು ಕೊಡುತ್ತೇನೆ."

ಅವಳು ಬೇಗನೇ ಸಾವರಿಸಿಕೊಂಡಳು.

"ಛೇ, ಕಾಫಿಯ ಬಗ್ಗೆ ನನ್ನ ಆಕ್ಷೇಪವಿಲ್ಲ. ಅಂದರೆ ನೀವೆಲ್ಲ ಭಾವಿಸಿದಂತೆ ನಾನಿಲ್ಲಿ ಹೆಚ್ಚು ದಿನ ಉಳಿಯುವದಾಗದು. ಹುಡುಗನಿಗೆ ಪಾಠ ಹೇಳಲು ಬೇರೆಯವರನ್ನು ನೋಡಿದರೆ ಒಳ್ಳೇದು. ಈ ಮಾತನ್ನು ನಿನ್ನ ತಂದೆಯವರೊಡನೆ ಹೇಳುವದಕ್ಕೆ ನನಗೆ ಸಂಕೋಚ. ಅದಕ್ಕಾಗಿ ನೀನೇ ಹೇಳಿಬಿಡು, ಅಷ್ಟೇ."

ಪದ್ಮೆಯ ಕಡೆಗೆ ನೋಡದೆ ತಲೆ ಬಾಗಿಸಿಕೊಂಡು ಆತ ಕಾಫಿಯನ್ನು ಗುಟುಕರಿಸುತ್ತ ಅಂತೂ ಬಡ ಬಡ ಮಾತು ಮುಗಿಸಿದ.

ಅನಿರೀಕ್ಷಿತವಾದ ಆ ಮಾತು ಕೇಳಿ ಪದ್ಮೆಗೆ ಮುಂದೇನು ಹೇಳಬೇಕೋ ತಿಳಿಯದಾಯಿತು. ಅವಳು ಕಪೋಲಗಳಲ್ಲಿ ಮೂಡಿದ ಬೆವರು ಹನಿಗಳನ್ನು ಸೀರೆಯ ಅಂಚಿನಿಂದ ಒರಿಸಿಕೊಳ್ಳುತ್ತ ಒಂದು ಕ್ಷಣ ಆಲೋಚಿಸಿದಂತೆ ಮಾಡಿ ಹೇಳಿದಳು.

"ಊ, ಹುಂ. ಅದು ನನ್ನಿಂದಾಗದು. ಆ ವ್ಯವಹಾರ ಗಂಡಸರಾದ ನೀವೇ ನೋಡಿಕೊಳ್ಳಬೇಕು. ಮನೆಯಲ್ಲಿಯ ಉಪಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವದಷ್ಟು ನನ್ನ ಕೆಲಸ. ಮಧ್ಯಾಹ್ನ ಊಟದ ನಂತರ ನೀವು ತಂದೆಯೊಡನೆ ಮಾತಾಡಿ. ಈಗ ಇನ್ನೊಂದು ಚಪಾತಿ ಹಾಕಲೇ?"

" ಏನೂ ಬೇಡ ".

ಉಪಾಧ್ಯಾಯರು ಬೇಗಬೇಗನೇ ಎದುರಿನ ಪದಾರ್ಥಗಳನ್ನು ತಿಂದು-ಕುಡಿದಂತೆ ಮಾಡಿ ಕೈ ತೊಳೆದುಕೊಂಡು ಹೊರಜಗುಲಿಗೆ ಬಂದು ಅಡ್ಡಾದರು. ತಾಟಿನಲ್ಲಿಯ ಚಪಾತಿ ಇನ್ನೂ ಅರ್ಧವರ್ಧ ಹಾಗೇಯೇ ಉಳಿದುಕೊಂಡಿತ್ತು. ಅವರ ಮನಃಸ್ಥಿತಿ ಚೆನ್ನಾಗಿಲ್ಲವೆಂಬುದಕ್ಕೆ ಪದ್ಮೆಗೆ ಇನ್ನಾವ ನಿದರ್ಶನವೂ ಬೇಕಿಲ್ಲ.

೪

ಸುಬ್ಬಯ್ಯನು ಇಂದು ಮನೆಗೆಲಸದಲ್ಲಿ ತುಂಬಾ ತತ್ಪರತೆ ತೋರುತ್ತಿದ್ದಾನೆ. ಹಂಡೆಗೆ ನೀರು ತುಂಬಿ ಸ್ನಾನಕ್ಕೆ ಅಣಿ ಮಾಡಿದ್ದಲ್ಲದೆ ಉಪಾಧ್ಯಾಯರಿಗೆ ಸಂಧ್ಯಾವಂದನೆಗೆಂದು ದೇವರ ಜಗುಲಿಯಲ್ಲಿ ಥಾಲಿ-ಹರಿವಾಣ ಎಲ್ಲ ವ್ಯವಸ್ಥಿತವಾಗಿ ಇಟ್ಟು ಆ ಹುಡುಗ ಸ್ವಂತದ ಅನುಷ್ಠಾನಕ್ಕೆ ಕುಳಿತಿದ್ದಾನೆ. ಗಾಯತ್ರೀ ಜಪ ಮಾಡಲು ನಿತ್ಯಕ್ಕಿಂತ ಹತ್ತು ಹದಿನೈದು ನಿಮಿಷ ಹೆಚ್ಚು ವೇಳೆ ತೆಗೆಯುವದು ಆತನಿಗೆ ಕಷ್ಟವಾಗದೆ ಇರಲಿಲ್ಲ. ಒಂದೆರಡು ದಿನದ ಮಟ್ಟಿಗಾದರೂ ತಾನು ಸೀಬೆಯ ಮರದತ್ತ ಸುಳಿಯಬಾರದೆಂದು ಆತ ಆ ಧ್ಯಾನದಲ್ಲಿಯೇ ನಿರ್ಧರಿಸುತ್ತಿದ್ದಾನೆ. ಐದೂವರೆ ತಾಸು ಹೊತ್ತಿನ ಸುಮಾರಿಗೆ ತೋಟಕ್ಕೆ ಹೋದ ವಿಶ್ವನಾಥಯ್ಯ ಮನೆಗೆ ಬಂದ. ಅಷ್ಟೊತ್ತಿಗೆ ಉಪಾಧ್ಯಾಯರಿಗೂ ಸ್ನಾನ ಮುಗಿದಿತ್ತು. ಮನೆಯ ಯಜಮಾನನು ತನ್ನಿಂದ ಅವರಿಗೆ ತೊಂದರೆಯಾಯಿತೆಂಬ ಭಾವವನ್ನು ವ್ಯಕ್ತಪಡಿಸುತ್ತ ಬೇಗಬೇಗನೇ ಸ್ನಾನ ಮುಗಿಸಿ ದೇವರಿಗೆ ನೈವೇದ್ಯ ತೋರಿಸಿದ. ಎಲ್ಲರೂ ಊಟ ತೀರಿಸಿದರು.

ಮೂರು ಘಂಟೆಯ ಸಮಯ. ಉಪಾಧ್ಯಾಯರು ವಿಶ್ರಾಂತಿಗಾಗಿ ಒರಗಿದವರು ಎದ್ದು ಕುಳಿತರು. ಅದೇ ವೇಳೆ ಕಾಯುತ್ತಿದ್ದ ವಿಶ್ವನಾಥಯ್ಯ ಆ ವರ್ಷದ ಪಂಚಾಂಗ ತೆಗೆದು ಅವರ ಮುಂದಿಟ್ಟು ಹೇಳಿದ.

" ಸ್ವಾಮಿ, ಅದಷ್ಟು ಬೇಗನೇ ಪಾಠ ಆರಂಭಿಸಬೇಕು. ಹುಡುಗ ಶಿಕ್ಷೆಯಿಲ್ಲದೆ ಹಾಳಾಗುತ್ತಿದ್ದಾನೆ. ಮುಹೂರ್ತ ಯಾವಾಗ ಇದೆ ನೋಡಿ !"

" ಉಪಾಧ್ಯಾಯರಿಗೆ ಕರಕರೆ ಇಟ್ಟಿತು. ಅವರು ಪಂಚಾಂಗವನ್ನು ಕೈಯಿಂದ ಸರಿಸುತ್ತ ಮೃದುವಾಗಿ ಹೇಳಿದರು.

" ಯಜಮಾನರೇ, ಪಂಚಾಂಗ ನೋಡುವ ಮೊದಲು ಒಂದು ಮಾತು. ನಿಮ್ಮ ರಮಾನಾಥನಿಗಿಂತ ನಾನು ವಯಸ್ಸಿನಲ್ಲಿ ಒಂದೆರಡು ತಿಂಗಳು ಹಿರಿದು ಇರಬಹುದು. ಇಷ್ಟು ಮಾತ್ರಕ್ಕೆ ನನಗೆ ಇಂಥ ಗೌರವ ಸಹ್ಯವಾಗದು. ಮತ್ತೆ ನಾನಿಲ್ಲಿ ಎಷ್ಟು ದಿನ ನಿಲ್ಲುತ್ತೇನೆಯೋ ನನಗೇ ಗೊತ್ತಿಲ್ಲ. ಆದಕ್ಕಾಗಿ ನನ್ನನ್ನು ಶ್ರೀನಾಥ ಎಂದಿಷ್ಟೇ ಸಂಬೋಧಿಸಿದರೆ ಸಂತೋಷ ನೋಡಿ."

ವಿಶ್ವನಾಥಯ್ಯನಿಗೆ ಎಲ್ಲ ಮಾತಿನ ಅರ್ಥವಾಗಲಿಲ್ಲ. ಇದು 'ಸೌಜನ್ಯದ ರೀತಿ'. ಎಂದಿಷ್ಟೇ ಅತ ಗ್ರಹಿಸಿದ.

" ಆಗಲಿ, ಶ್ರೀನಾಥ, ನೀನೇನೂ ಯೋಚನೆ ಮಾಡಬೇಕಾಗಿಲ್ಲ. ಇಷ್ಟ ಬಂದಷ್ಟು ದಿವಸ ನೀನಿಲ್ಲಿ ಉಳಿಯಬಹುದು. ಎಂಥ ಸ್ಥಿತಿಯಲ್ಲೂ ನೀನು ನಮಗೆ ಹೆಚ್ಚೆನಿಸುವಂತಿಲ್ಲ. ಈಗಂತೂ ಬೇಕಾದ ಅನುಕೂಲತೆಗಳಿವೆ. ಮತ್ತೇನು ? ನಾಳೆ ಪಂಚಮಿಯ ಮುಹೂರ್ತ ಚೆನ್ನಾಗಿರಬಹುದಲ್ಲವೇ ?

ಇಷ್ಟರಲ್ಲಿ ಕಾಫಿ ಸಿದ್ಧವಾಗಿದೆಯೆಂದು ಹೇಳಲು ಪದ್ಮೆ ಹೊರಗೆ ಬಂದಳು. ಅವರಿಬ್ಬರ ಸಂಭಾಷಣೆಯನ್ನು ಆಕೆ ಕೇಳಿರಬೇಕು.

" ಅಪ್ಪಾ, ಇವರಿಲ್ಲಿ ಹೆಚ್ಚು ದಿವಸ ನಿಲ್ಲುವದಿಲ್ಲವಂತೆ. ಪಾಠ ಹೇಳಿಸಲು ಬೇರೆಯವರನ್ನು ಗೊತ್ತುಮಾಡಿಕೊಂಡು ಆಮೇಲೆ ಮುಹೂರ್ತ ನೋಡಿಸೋದು ಒಳ್ಳೇದು."

ವಿಶ್ವನಾಥಯ್ಯ ಒಂದು ಕ್ಷಣ ದಿಗ್ಭ್ರಾಂತನಂತಾದ. ಅ, ಹಾಗೆಂದರೆ ಏನಂತೆ ? ಛೇ, ಶ್ರೀನಾಥ, ಆ ಮಾತು ಬೇಡ, ನೀನು ನಾಳೆಯೇ ಪಾಠ ಆರಂಭಿಸು. ಆಯಿತು, ಈಗ ಸ್ವಲ್ಪ ಕಾಫಿ ತೆಗೆದುಕೊಳ್ಳೋಣ."

ವಿಶ್ವನಾಥಯ್ಯನು "ಆಯಿತು" ಅಂದಮೇಲೆ ಅದಕ್ಕೆ ಪ್ರತ್ಯುಕ್ತಿಯಿಲ್ಲ. ಶ್ರೀನಾಥನಿಗೆ ಪ್ರತಿಯಾಡಲು ಎಡೆ ದೊರೆಯಲಿಲ್ಲ. ಹೋದಷ್ಟು ದಿನ ಹೋಗಲಿ ಎಂದು ತನ್ನ ಹೃದಯದಲ್ಲಿ ಹಬ್ಬಿಕೊಳ್ಳುತ್ತಿದ್ದ ಔದಾಸೀನ್ಯದ ಎಳೆಯನ್ನು ಅವನು ಇನ್ನಷ್ಟು ಮುಂದಕ್ಕೆ ಜಗ್ಗಿ ವಿಶ್ವನಾಥಯ್ಯನ ಮಾತಿಗೆ ಒಪ್ಪಿಗೆಯಿತ್ತಂತೆ ಮಾಡಿ ಕಾಫಿ ಕುಡಿಯಲು ಮೇಲಕ್ಕೆದ್ದ. ಅಪೇಕ್ಷಿಸದಿದ್ದರೂ ಅದೊಂದು ವಿಧವಾದ ತೃಪ್ತಿ ಪದ್ಮೆಯ ಎದೆಯಲ್ಲಿ ಒಡಮೂಡಿತು. ಹುಡುಗ ಸುಬ್ಬಯ್ಯನು ಇಂಥ ಗುರುಗಳಿದ್ದರೆ ಅಕ್ಕನು ಹೆದರಿಸುವಂತೆ ಬೆನ್ನಿಗೆ ಹಾಳೆ

ಕಟ್ಟಿಕೊಳ್ಳುವ ಸಂದರ್ಭವಿಲ್ಲವೆಂದು ತನ್ನಷ್ಟಕ್ಕೆ ಸಮಾಧಾನಪಟ್ಟುಕೊಂಡ.

೫

ಮರುದಿನವೇ ಕುಲದೇವರಿಗೂ ಗ್ರಾಮದೇವರಿಗೂ ಅಡ್ಡಬಿದ್ದು ಸುಬ್ಬಯ್ಯನು ಪಾಠ ಹೇಳಿಸಿಕೊಳ್ಳಲು ಅನುವಾದ. ಶ್ರೀನಾಥ ಇದ್ದುದರಲ್ಲಿಯೇ ತನಗೆ ಹೆಚ್ಚಾಗಿ ನೆನಪಿನಲ್ಲಿ ಉಳಿದಿದ್ದ ಶಾಂತಿಸೂಕ್ತಗಳನ್ನು ಪ್ರಾರಂಭಿಸಿದ. ಮೂರು ದಿನ ಪಾಠ ಹಾಗೆಯೇ ಸಾಗಿತು. ನಾಲ್ಕನೇ ದಿನ ಪಾಠ ಇನ್ನೂ ನಡೆಯುತ್ತಿದ್ದಂತೆಯೇ ಮಧ್ಯದಲ್ಲಿ ಉಪಾಧ್ಯಾಯರು ಬೇಸರದಿಂದ ಆಕಳಿಸ ಹತ್ತಿದರು. ಸಂದರ್ಭ ಕಾಯುತ್ತಿದ್ದ ಹುಡುಗ "ಉಪಾಧ್ಯಾಯರೇ! ನನಗೆ ಸೀಬೇ ಮರದತ್ತ ಹೋಗಿ ಬರಬೇಕು." ಅಂದ.

"ಆಗಲಿ"

ಮಾತು ಹೊರಬೀಳುವುದೇ ತಡ, ಸುಬ್ಬಯ್ಯ ಅಕ್ಕನ ಕಣ್ಣು ತಪ್ಪಿಸಿ ಹಿತ್ತಲಿನ ಹಾದಿಯಿಂದ ಓಡಿದ. ಉಪಾಧ್ಯಾಯರು ತೋಳುಗಳನ್ನು ಮೇಲಕ್ಕೆ ಮಾಡಿ ಮತ್ತೊಮ್ಮೆ ದೀರ್ಘವಾಗಿ ಆಕಳಿಸಿದರು. ಹಾಗೆಯೇ ಬೇಜಾರು ಹಿಂಗಿಸಲು ಸಂಗಡ ತಂದಿದ್ದ ಪುಸ್ತಕಗಳಲ್ಲಿ ಭಾಸನ ನಾಟಕವೊಂದನ್ನು ಆಯ್ದುಕೊಂಡು ಓದುತ್ತ ಅಲ್ಲಿಯೇ ಕಂಬಕ್ಕೆ ಒರಗಿ ಕುಳಿತರು. ಅದೇ ಹೊತ್ತಿಗೆ ವಿಶ್ವನಾಥಯ್ಯ ತೋಟದಲ್ಲಿ ಆಳುಗಳಿಗೆ ಗುದ್ದಲಿಯನ್ನು ಒಯ್ದು ಕೊಡಲೆಂದು ಮನೆಗೆ ಬರಬೇಕೇ?

"ಎಲ್ಲಿ? ನಮ್ಮ ಮನೆ ಕಿರಾತ ಪೋರ? ಪಾಠ ಇಷ್ಟು ಬೇಗನೇ ಮುಗಿಸಿಬಿಟ್ಟಿಯೇನು?"

"ಇಲ್ಲ. ಅವನು ಸೀಬೇ ಮರದತ್ತ ಹೋಗಿ ಬರಬೇಕು ಅಂದ. ದಿನದ ಆವಶ್ಯಕ ಕೆಲಸಗಳಲ್ಲಿ ಇದೂ ಒಂದು ಇದೆಯೇನೋ ಎಂದು ನಾನವನನ್ನು ಬಿಟ್ಟುಬಿಟ್ಟೆ."

ಒಳಬಾಗಿಲಿನಿಂದ ಪದ್ಮೆಯು ತಂದೆಯ ಮುಖ ನೋಡಿದಳು. ಇಬ್ಬರೂ ಶ್ರೀನಾಥನಿಗೆ ಮರೆಯಾಗಿ ಮನಸಾರೆ ನಕ್ಕರು. ಉಪಾಧ್ಯಾಯರಿಗೆ ಅದರ ಪರಿವೆ ಇದ್ದಂತಿರಲಿಲ್ಲ. ಅವರು ಮತ್ತೆ ತಮ್ಮ ಓದಿನಲ್ಲಿಯೇ ಮಗ್ನರಾಗಿದ್ದಾರೆ. ಮತ್ತೊಂದು ಕ್ಷಣ ಅನ್ನುವುದರೊಳಗೆ ಅಕ್ಕನು ತಮ್ಮನನ್ನು

ಕೈಹಿಡಿದು ತಂದು ಅವರೆದುರು ಕೂಡ್ರಿಸಿದಳು.

"ನೀವು ಹೀಗೆಲ್ಲ ಹುಡುಗನನ್ನು ಬಿಡಬಾರದು. ಕಾಣುವದಿಲ್ಲವೋ? ಶಿಕ್ಷೆ ಇಲ್ಲದೆ ಇವ ತೀರಾ ಕಿರಾತನಾಗಿ ಬಿಟ್ಟಿದ್ದಾನೆ. ತಗೊಳ್ಳಿ ಈ ಮಂದಾರದ ಸೆಳೆ. ಒಂದೇಟು ಬಿಗಿದರೆ ತಾನೇ ಹಾದಿಗೆ ಬರುತ್ತಾನೆ."

ಪದ್ಮೆಯು ಹಿತ್ತಲಿನಿಂದ ಕಿತ್ತುತಂದ ಮಂದಾರದ ಬರಲನ್ನು ಶ್ರೀನಾಥನ ಕೈಗೆ ಕೊಟ್ಟಳು. ಶ್ರೀನಾಥ ಕಣ್ಣುಗಳಲ್ಲಿ ಕರುಣೆಯನ್ನು ತುಂಬಿಕೊಂಡು ಹುಡುಗನ ಅಳುವಂತಿದ್ದ ಮೋರೆ ನೋಡಿದ. ಆಯಿತು, ಮತ್ತವನು ತುಟಿ ಪಿಟಕ್ಕೆನ್ನದೇ ನಿರ್ವಿಕಾರ ಮುಖಮುದ್ರೆಯಿಂದ ಓದಲು ಎತ್ತಿದ್ದ ಪುಸ್ತಕದಲ್ಲಿ ಕಣ್ಣುಗಳನ್ನು ಸೇರಿಸಿದ. ಕೈಯೊಳಗಿನ ಸೆಳೆ ತಾನಾಗಿಯೇ ಕೆಳಗೆ ಬಿತ್ತು. ತಮ್ಮನ ತುಂಟತನಕ್ಕೆ ಯಾವ ಪ್ರತೀಕಾರವನ್ನೂ ಕೈಕೊಳ್ಳದೆ ಸುಮ್ಮನಿದ್ದುದಕ್ಕೆ ಪದ್ಮೆಯು ಒಳಗೊಳಗೇ ಉಪಾಧ್ಯಾಯರ ಮೇಲೆ ಮುನಿಸುಗೊಂಡಳು. ಸುಬ್ಬಯ್ಯ ಗುರುಗಳು ಮುಂದೆ ಹೇಳಿಕೊಡುವ ಲಕ್ಷಣ ಕಾಣದೆ ಹಿಂದೆ ಹೇಳಿದ್ದನ್ನೇ ಉರುಹಾಕುತ್ತ ಅಲ್ಲಿಯೇ ತಲೆಯಾಡಿಸಹತ್ತಿದ. ತಮ್ಮನು ಕಡಿದದ್ದರಿಂದ ಮುಂಗೈ ಮೇಲೆ ಉಂಟಾದ ಘಾಯವನ್ನು ತಿದ್ದಿಕೊಳ್ಳುತ್ತಿದ್ದಾಳೆ ಪದ್ಮೆ. ಶ್ರೀನಾಥ ಸ್ವಲ್ಪ ಮುಖವೆತ್ತಿ ನೋಡಿದ್ದರೆ ಎದುರಿಗೆ ಮೇಲಿನ ದಂತಪಂಕ್ತಿಯ ಅಡಿಯಲ್ಲಿ ಕೆಳದುಟಿಯನ್ನು ಆಚೆ ಈಚೆ ಹೊರಳಿಸುತ್ತ ತಮ್ಮನು ಮಂತ್ರ ಹೇಳುವದನ್ನು ವಿಕೃತವಾದ ರೀತಿಯಲ್ಲಿ ಅನುಸರಿಸಿ ಅಣಕಿಸುವ ಆಕೆಯ ಮುಖಭಾವವನ್ನು ನೋಡಬಹುದಾಗಿತ್ತು.

೬

ಪದ್ಮೆಯ ವಯಸ್ಸು ಈಗ ಇಪ್ಪತ್ತರ ಸುಮಾರಿಗಿದೆ. ತುಂಬುಜವ್ವನೆ. ಸೌಂದರ್ಯದರ್ಶಿಯೂ ಪ್ರತಿಭಾವಂತನೂ ಆದ ಕವಿವರ್ಣನೆಗೆ ಆಯ್ದುಕೊಳ್ಳಲು ತಕ್ಕುದಾದ ರೂಪ ಆಕೆಯದು. ಅವಳ ಪ್ರತಿಯೊಂದು ಕೃತಿಯಲ್ಲಿಯೂ ಕಲಾಮಯತೆ ಕಂಡುಬರುವದು. ಅವಳ ಸಂಗ್ರಹಶೀಲವಾದ ಬುದ್ಧಿಗೆ ದಿನದಿನವೂ ಹೊಸತು ಬೇಕು. ಮತ್ತೆ ಹಾಗೆ ನವೋನವವಾಗಿ ಕಾಣುವದನ್ನು ಆಕೆ ಪ್ರಯೋಗದಲ್ಲಿ ತರದಿರುವದೂ ಅಪರೂಪ! ನಾಲ್ಕೈದು ದಿನದ ಮಟ್ಟಿಗೆ ತಂಗಿಯ ಮನೆಯಲ್ಲಿ ಇದ್ದುಬರಲು ಬನವಾಸಿಗೆ ಹೋದಾಗ ಅವಳೆಷ್ಟೋ ಹೊಸ ತಿಂಡಿ ಮಾಡುವದನ್ನೂ, ಹೊಸ ಬಗೆಯ ಕಸೂತಿ

ಹಾಕುವದನ್ನೂ ಕಲಿತುಬಂದಿದ್ದಾಳಲ್ಲದೆ ಒಂದೆರಡು ಗ್ರಾಮೊಫೋನು ಹಾಡುಗಳನ್ನು ಕಂಠಪಾಠ ಮಾಡಿಕೊಂಡು ಬಂದಿದ್ದಳು. ಆಕೆಯದು ಸ್ವಲ್ಪ ಸೀರು ಧ್ವನಿ. ಆದರೇನು? ಅವಳ ಹಾಡು ಯಾರಿಗೂ ಅರುಚಿಯನ್ನು ಉಂಟುಮಾಡಿಲ್ಲ. ಒಳ್ಳೇ ಕಂಠವುಳ್ಳ ಹೆಣ್ಣುಮಕ್ಕಳೂ ಅವಳ ಬಗೆಗೆ ಒಳಗೊಳಗೆ ಅಸೂಯೆಪಟ್ಟುಕೊಳ್ಳಬೇಕಿತ್ತು. ಅದೇಕೋ, ಶ್ರೀನಾಥ ಬಂದಂದಿನಿಂದ ಅವಳ ಸ್ವಚ್ಛಂದ ವೃತ್ತಿಗೆ ಅಚಿಂತನೀಯವಾದ ತೊಡಕು ಬಂದುಬಿಟ್ಟಿದೆ. ಚಿಕ್ಕ ವಯಸ್ಸಿನಲ್ಲಿಯೇ ಗಂಡ ತೀರಿಹೋದದ್ದರಿಂದ ವಿಶ್ವನಾಥಯ್ಯ ಮಗಳಿಗೆ ನೋವಾಗದಂತೆ ತುಂಬಾ ಅಚ್ಚೆಯಿಂದ ತನ್ನ ಮನೆಯಲ್ಲಿಯೇ ಸಾಧ್ಯವಾದ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಟ್ಟಿದ್ದ. ಸ್ವಲ್ಪಮಟ್ಟಿಗೆ ಅವಳು ಉಚ್ಛೃಂಖಲಳೂ ಆಗಿದ್ದಳು. ಮನೆಯ ಬಗ್ಗೆ ಕೊಡಕೊಳ್ಳುವ ಎಲ್ಲ ವ್ಯವಹಾರ ಅವಳದೇ. ಸ್ವಲ್ಪದರಲ್ಲಿ ಅವಳು ಹೆಣ್ಣಾಗಿ ಹುಟ್ಟಿದ್ದಳು ಅಷ್ಟೇ! ಈಗ ತನ್ನ ಚಟುವಟಿಕೆಗಳೆಲ್ಲ ಮಿತಗೊಳ್ಳುತ್ತಿರುವುದನ್ನು ಆಕೆ ಸಹಿಸದಾದಳು. ಆಶ್ಚರ್ಯ! ಆ ಸ್ಥಿತಿಯನ್ನು ಹೋಗಲಾಡಿಸಲೆಂದು ಅವಳೇನಾದರೂ ಮಾಡಹೋದರೆ ಒಂದು ವಿಧವಾದ ಅಸ್ವಾಭಾವಿಕತೆ ಬಂದು ಮನವು ಇನ್ನಷ್ಟು ಅಸ್ಥಿರವಾಗಿಬಿಡುವದು.

ಶ್ರೀನಾಥ ತನ್ನ ಬಗ್ಗೆ ರಾಮನಾಥನಿಗೆ ಎಲ್ಲ ಗೊತ್ತಿದೆಯೆಂದೂ ಇನ್ನಾರೂ ತಮ್ಮ ಮನೆಗೆ ಸಂಬಂಧಪಟ್ಟ ಯಾವ ಸಂಗತಿಯನ್ನೂ ಕೇಳಲಾಗದೆಂದೂ ಮೊದಲೇ ನಿರ್ಬಂಧವಿಟ್ಟಿದ್ದ. ಆದರೂ ಒಂದು ವಾರ ಅನ್ನುವುದರೊಳಗೆ ಆತನ ವಿಷಯವಾಗಿ ಎಷ್ಟೋ ತಿಳುವಳಿಕೆ ಮಾಡಿಕೊಂಡಿದ್ದಾಳೆ ಪದ್ಮೆ. ಆಕೆ ದಿನದಿನವೂ ಹೊಸ ಹೊಸ ಉಣಿಸುಗಳನ್ನು ಮಾಡಿ ಬಡಿಸುತ್ತಿದ್ದಳಾದರೂ ಒಮ್ಮೆಯೂ ಶ್ರೀನಾಥ ತೃಪ್ತಿಯನ್ನು ವ್ಯಕ್ತಪಡಿಸಿದ್ದಿಲ್ಲ. ಊಟ-ಉಪಚಾರಗಳಿಗಾಗಿ ಅಷ್ಟೇನೂ ತತ್ಪರತೆಯನ್ನು ತೋರಿಸುವದಿಲ್ಲ. ಮನೆಯಲ್ಲಿ ಸಂಪತ್ತಿಗೆ ಕೊರತೆ ಇರಲಾರದು. ಬಾಲ್ಯದಲ್ಲಿ ಮಂತ್ರಗಳನ್ನು ಕಲಿತಿರಬಹುದಾದರೂ ಆ ಬಗ್ಗೆ ಆತನಲ್ಲಿ ಲೇಶವೂ ಆಸಕ್ತಿ ಕಂಡುಬರುವದಿಲ್ಲ. ಸಂಧ್ಯಾವಂದನೆ, ಜಪ, ಪೂಜೆ, ಎಲ್ಲಾ ಅಷ್ಟಕ್ಕಷ್ಟೇ! ತೀರ ನಾಸ್ತಿಕನಲ್ಲವೆನ್ನುವ ಹಾಗೆ ದೀಪ ಹಚ್ಚಿದಾಗ "ಸ್ತೋತ್ರಕಲಾಪ" ದೊಳಗಿನ ಹಲವಾರು ಶ್ಲೋಕಗಳನ್ನು ರಾಗವಾಗಿ ಅನ್ನುತ್ತಾನೆ. ಹುಡುಗನಿಗೆ ದಿನಾ ಒಂದರ್ಧ ತಾಸು ಮಂತ್ರ ಹೇಳಿಸಿದರೆ ಅದೇ ದೊಡ್ಡ ಪರಿಶ್ರಮ. ಸಂಸ್ಕೃತ ಪುಸ್ತಕಗಳನ್ನು

ಓದುವುದೂ ಮಧ್ಯದಲ್ಲಿ ಏನೇನೋ ಆಲೋಚಿಸಿಕೊಂಡಂತೆ ಮಾಡಿ ಕಾಗದವನ್ನು ತೆಗೆದುಕೊಂಡು ಒಂದೆರಡು ಪಙ್ಕ್ತಿ ಬರೆಯುವದು, ಹಾಗೆಯೇ ಮನೆಯ ಜಗುಲಿಯ ಮೇಲೆ ಶತಪಥ ಆಡ್ಡಾಡುವದು, ಇದುವೇ ಅವನ ದೈನಂದಿನ ದಿನಚರ್ಯೆ. ಅರ್ಧ ಹುಚ್ಚ, ಅರ್ಧ ಮಟ್ಟಿಗೆ ಆಲೋಚಕ, ಪ್ರತಿಭಾವಂತ, ಕವಿ. ಕೊನೆ ಕೊನೆಗೆ ಏನೊಂದೂ ಅರ್ಥವಿಲ್ಲದ ಅದೊಂದು ಅಪ್ರಯೋಜಕ ಪ್ರಾಣಿ.

ಬೆಳಗಿನ ೧೦ ಘಂಟೆಯ ಸಮಯ. ಶ್ರೀನಾಥ ಜಗುಲಿಯಲ್ಲಿ ಕುಳಿತು ಏನೇನೋ ಬರೆಯುತ್ತಿದ್ದಾನೆ. ಹಠಾತ್ತಾಗಿ ಪದ್ಮೆ ಅವನೆದುರು ಬಂದಳು.

"ಅದೇನು ಬರೆಯುತ್ತಿದ್ದೀರಿ ಉಪಾಧ್ಯಾಯರೇ?"

"ಏನಿಲ್ಲ! ಹೀಗೇ ಸಂಸ್ಕೃತ ಶ್ಲೋಕ ಬರೆಯುತ್ತಿದ್ದೇನೆ."

ಶ್ರೀನಾಥ ಮುಖವೆತ್ತಿ ಪದ್ಮೆಯನ್ನು ನೋಡಲೇ ಇಲ್ಲ. ಅವಳಿಗೆ ಕುತೂಹಲವಾಯಿತು.

"ಹಾಂ, ನಾನೂ ಸಂಸ್ಕೃತ ಕಲಿಯುತ್ತೇನೆ. ನನಗೆ ಹೇಳಕೊಡುವದಿಲ್ಲವೇ?"

ಪದ್ಮೆಯ ಸ್ವರದಲ್ಲಿ ಅದೆಷ್ಟು ಮಾಧುರ್ಯ ತುಂಬಿದೆ. ಶ್ರೀನಾಥ ಬರೆಯುವದನ್ನು ನಿಲ್ಲಿಸದೆ ಮೊದಲಿನಂತೆಯೇ ಹೇಳಿದ.

"ಸಾಧ್ಯವಿಲ್ಲ. ಅದನ್ನು ಕಲಿಯುವದು ತುಂಬ ಕಷ್ಟ ಪದ್ಮಾ. ನಿನ್ನಿಂದ ಆಗದ ಮಾತು ಅದು."

"ಯಾಕೆ ಹೀಗೆ ಹೇಳುತ್ತೀರಿ. ಮನಸ್ಸು ಮಾಡಿದರೆ ಒಂದೆರಡು ತಿಂಗಳಲ್ಲಿ ನಾನದನ್ನು ಕಲಿತೇನು! ಹಾ ಒಂದು ಪುಸ್ತಕ ಕೊಡಿ. ಈಗಲೇ ಪಾಠ ಆರಂಭಿಸೋಣವಾಗಲಿ."

ಪದ್ಮೆ ಕುಳಿತೇ ಬಿಟ್ಟಳು. ಈ ಬಾರಿ ಶ್ರೀನಾಥ ಬರೆಯುವದನ್ನು ನಿಲ್ಲಿಸಿ ಮುಖವೆತ್ತಿದ. ಆಕೆಯ ನಿರ್ಧಾರ ನೋಡಿ ಅವನಿಗೆ ಕೌತುಕವಾಯಿತು. ಆತ ನಿರುಪಾಯನಾಗಿ ಹತ್ತಿರವಿದ್ದ ಕಾಳಿದಾಸನ "ರಘುವಂಶ" ಕಾವ್ಯವನ್ನು ಅವಳ ಕೈಯಲ್ಲಿ ಕೊಟ್ಟು "ಆಗಲಿ" ಎಂದ.

"ಎಲ್ಲಿಂದ ಆರಂಭಿಸಲಿ?"

"ನೋಡು, ಹನ್ನೊಂದನೆಯ ಸರ್ಗ ಚೆನ್ನಾಗಿದೆ. ಆಗದೇ?"

ಪಾಠ ಶುರುವಾಯಿತು. ಮೊದಲು ಶ್ಲೋಕ, ಶ್ಲೋಕಾರ್ಥ ಹೇಳಿ ಶ್ರೀನಾಥ ಭಾವಾರ್ಥ ಹೇಳಹತ್ತಿದ.

"ಯಜ್ಞಕ್ಕೆ ಒದಗುತ್ತಿದ್ದ ಪೀಡೆಗಳನ್ನು ಪರಿಹರಿಸುವದಕ್ಕೆಂದು ವಿಶ್ವಾಮಿತ್ರಮುನಿ ರಾಮನನ್ನು ಬೇಡಲು ದಶರಥನಲ್ಲಿಗೆ ಬಂದ. ಲೋಕಕಂಟಕರಾದ ರಾಕ್ಷಸರನ್ನು ನಿಗ್ರಹಿಸುವ ಸಾಹಸಕಾರ್ಯ ಅದು. ಇನ್ನೂ ನೆತ್ತಿಯ ಮೇಲೆ ಜುಟ್ಟುಗಳನ್ನು ಬಿಟ್ಟುಕೊಂಡಿರುವ ಆ ಚಿಕ್ಕ ಹುಡುಗ— ರಾಮನನ್ನು ಋಷಿಯೇಕೆ ಕೇಳಿದ? ಆ ಮಹಾಕಾರ್ಯ ಅವನಿಂದ ಸಾಧ್ಯವೇ? ಹೌ 'ತೇಜಸಾಂ ಹಿ ನ ವಯಃ ಸಮೀಕ್ಷತೆ' ತೇಜಸ್ವಿಗಳಾದವರ ವಯಸ್ಸು ವಿಚಾರಿಸಲ್ಪಡುವದಿಲ್ಲ."

"ಉಪಾಧ್ಯಾಯರೇ, ಕೊನೆಯ ಮಾತು ನಿಮಗೆಷ್ಟು ಚೆನ್ನಾಗಿ ಅನ್ವಯಿಸುವದು. ಈಗಿನವರಿಗೆ ಜಾತಿ-ವಯಸ್ಸು ಮುಖ್ಯ. ಹಿಂದಿನ ಋಷಿಗಳೋ, ಸತ್ವಶಾಲಿಗಳಾದವರು ಯಾರಿದ್ದರೂ ಪ್ರಾಶಸ್ತ್ಯ ಕೊಡುತ್ತಿದ್ದರು."

"ನನ್ನದು ಬಿಡು ಪದ್ಮಾ! ನಿನ್ನ ವಿಷಯದಲ್ಲಿ ಮಾತ್ರ ಖಂಡಿತವಾಗಿ ಹಾಗೆ ಹೇಳಬಹುದಾಗಿದೆ. ನನಗಂತೂ ನೀನು ಪುರುಷರಿಗೆ ಯಾವ ಭಾಗದಲ್ಲಿಯೂ ಕಡಿಮೆಯೆಂದು ಕಾಣುವದಿಲ್ಲ."

ಛೀ, ಏನೆಲ್ಲ ಹೇಳುತ್ತಿದ್ದೀರಿ! ಅಪ್ಪನೂ "ನಮ್ಮ ಪದ್ಮೆಯೆಂದರೆ ಮನೆಯಲ್ಲಿ ಒಬ್ಬ ಗಂಡಸು ಇದ್ದ ಹಾಗೆ" ಎನ್ನುತ್ತಾನೆ.

"ಯಾಕೆ ಹೇಳದೇ ಇದ್ದಾನು? ನೀನೆಂದರೆ ಮೂರ್ತಿವಂತ ಉತ್ಸಾಹ. ನಾವೆಲ್ಲ ಹೆಸರಿಗೆ ಗಂಡಸರು. ಯಾವ ಪೌರುಷವಿದೆ ನಮ್ಮಲ್ಲಿ?"

ಪದ್ಮೆಗೆ ಶ್ರೀನಾಥನ ಮಾತು ಅಷ್ಟೇನೂ ಪ್ರಿಯವಾಗಲಿಲ್ಲ. ಇದ್ದಕ್ಕಿದ್ದ ಹಾಗೆ ಅವಳ ಮೋರೆ ಗಂಭೀರವಾಯಿತು.

"ಉಪಾಧ್ಯಾಯರೇ! ನಾನು ಯಾರು ಯಾರಿಗೆ ಹೇಗೆ ಹೇಗೆ ಕಾಣುತ್ತೇನೆಯೋ. ಹುದೀಮನೆಯ ಶರ್ವಾಣಿಯ ತಾಯಿ ನನ್ನನ್ನು ಕಂಡಾಗಲೆಲ್ಲ ಅಳುತ್ತಾಳೆ. 'ಹೇಗಿದ್ದೀಯೆ ಪದ್ಮಾ, ನನ್ನ ಮಗಳು ಇದ್ದಿದ್ದರೆ ಇಷ್ಟು ಹೊತ್ತಿಗೆ ನಿನ್ನಂತಾಗುತ್ತಿದ್ದಳು. ತನ್ನ ಬಗ್ಗೆ ಮಂದಿಯ ನಿಂದೆಯ ಮಾತುಗಳನ್ನು

ತಾಯಿಯಾದ ನಾನು ಕೇಳುವಂತೆ ಮಾಡದೆ ಅವಳು ಸತ್ತುಹೋದುದು ಒಳಿತೇ' ಎನ್ನುತ್ತಾಳೆ ಆಕೆ. ಶರ್ವಾಣಿಯೂ ಬಾಲವಿಧವೆ. ಹನ್ನೊಂದನೆಯ ವಯಸ್ಸಿನಲ್ಲಿಯೇ ಆ ಹುಡುಗಿ ಮೈಲಿಯಿಂದ ತೀರಿಕೊಂಡಳು."

ಪದ್ಮೆಯು ಕಣ್ಣೊರಸಿಕೊಂಡಳು. ಪಾಠ ಈ ಮಟ್ಟಕ್ಕೆ ಬರುವದೆಂದು ಶ್ರೀನಾಥ ತಿಳಿದಿರಲಿಲ್ಲ.

"ಹಡ್ಯೆ, ಪದ್ಮಾ! ಲೋಕಕ್ಕೆ ನಿನ್ನ ನಡತೆ ಮೆಚ್ಚುಗೆಯಾಗದಿರಬಹುದು. ಆದರೆ ಈ ಮೋರೆಯ ಎದುರು ಏನೆಲ್ಲ ಹೇಳುವುದಕ್ಕೆ ಯಾರಿಗೂ ಸಾಧ್ಯವಿಲ್ಲವೆಂದು ನಾನು ಹೇಳುತ್ತೇನೆ."

ನಿಜ, ಉಪಾಧ್ಯಾಯರೇ, ಎದುರು ಯಾರೂ ಏನನ್ನೂ ಹೇಳುವದಿಲ್ಲ. ಪರೋಕ್ಷದಲ್ಲಿ ಹೇಳುವ ಮಾತುಗಳಿಗೆಲ್ಲ ಮಹತ್ವ ಕೊಟ್ಟರೆ ಬದುಕುವದೇ ಬೇಡವೆಂದಾದೀತು. ನೋಡಿ, ಬನವಾಸಿಯ ಚಿದಂಬರ ದೀಕ್ಷಿತರು ನನ್ನಂಥವರ ಕೈನೀರು ಕುಡಿಯುವದಿಲ್ಲ. ಆದರೆ ನಾನು ತಂಗಿಯ ಮನೆಗೆ ಹೋದಾಗ ಅವರು ನನ್ನ ಕೈಯಿಂದ ಕಾಫಿ ಮಾಡಿಸಿ ಕುಡಿದು ತೃಪ್ತಿಯನ್ನು ವ್ಯಕ್ತಮಾಡಿದ್ದಾರಲ್ಲದೆ ಯಾವ ಆಕ್ಷೇಪವನ್ನೂ ಹೇಳಲಿಲ್ಲ."

"ಸರಿ. ಜನಕ್ಕೆ ನೀನೊಂದು ಬಿಡಿಸಲಾರದ ಸಮಸ್ಯೆಯಾಗಿ ಬಿಟ್ಟಿದ್ದೀಯೆ. ಹಾ ಈಗ ಓದು ಸಾಕು. ನನಗೆ ಹೊರಗೆ ಸ್ವಲ್ಪ ಅಡ್ಡಾಡಬೇಕು."

ಶ್ರೀನಾಥನು ಮುಗುಳುನಗೆ ನಕ್ಕು ಮೇಲಕ್ಕೆದ್ದ. ಪಾಠ ಅಲ್ಲಿಗೆ ಮುಗಿಯಿತು. ಅಂದು ಅನ್ಯೋನ್ಯವಾಗಿ ಅಷ್ಟೆಲ್ಲ ಮಾತಾಡಿಕೊಳ್ಳುವುದು ಸಾಧ್ಯವಾದ ಬಗ್ಗೆ ಇಬ್ಬರಿಗೂ ಹಿಡಿಸಲಾರದ ಸಂತೋಷ.

೭

ಅಂದು ಪದ್ಮೆಗೆ ಶ್ಲೋಕವನ್ನು ಗಟ್ಟಿ ಮಾಡುವದರ ಹೊರತಾಗಿ ಇನ್ನಾವ ಕೆಲಸವೂ ಅಷ್ಟಾಗಿ ಮನಸ್ಸಿಗೆ ಹೋಗದು. ಎಲ್ಲದರಲ್ಲಿಯೂ ಪ್ರಮಾದವಾಗುತ್ತಿದೆ. ಮಧ್ಯಾಹ್ನ ಊಟಕ್ಕೆ ಕುಳಿತಾಗ ವಿಶ್ವನಾಥಯ್ಯ "ಪದ್ಮಾ, ಸಾರಿಗೆ ಉಪ್ಪು ಹಾಕಲಿಲ್ಲವೇಕೆ?" ಎಂದ. ಸಾಯಂಕಾಲದಲ್ಲಿಯೂ ಅದೇ ಹಾಡು. ದೀಪದೆದುರು ಓದುತ್ತ ಕುಳಿತಾಗ ಒಲೆಯ ಮೇಲಿನ ಹಾಲಿನ ನೆನಪು ಬಂದು ಪದ್ಮೆ ದಡಬಡಿಸಿ ಹಣತೆ ಕವಚಿಹೋಯಿತು. ಸೀರೆಯ

ಮೇಲೆಲ್ಲ ಎಣ್ಣೆ ಸುರಿಸಿಕೊಂಡದ್ದು ಮಾತ್ರವಲ್ಲದೆ ಹಾಲಿನ ಪಾತ್ರೆ ಇಳುಹು ವಷ್ಟರಲ್ಲಿ ಅರ್ಧಕ್ಕಿಂತ ಹೆಚ್ಚು ಹಾಲು ಉಕ್ಕಿಹೋಗಿತ್ತು. ರಾತ್ರೆ ಹಾಸಿಗೆ ಯಲ್ಲಿ ಅಂದಿನ ತಪ್ಪುಗಳನ್ನೆಲ್ಲ ನೆನದುಕೊಂಡು ಆಕೆ ತನ್ನಷ್ಟಕ್ಕೆ ನಕ್ಕು ನಕ್ಕು ಹೊಟ್ಟೆ ನೋವು ಹಿಡಿಸಿಕೊಂಡಿದ್ದಾಳೆ. ಆಶ್ಚರ್ಯ! ಇಡೀ ದಿನ ಉರುಹಾಕಿ ದ್ದರೂ ಅಂದು ಶ್ಲೋಕದ ಒಂದು ಚರಣವನ್ನೂ ಕೂಡ ಅವಳು ಸರಿಯಾಗಿ ಕಲಿಯಲಾರದೆ ತಳಮಳಿಸುವಂತಾಗಿದೆ.

ಮರುದಿನ ಬೆಳಗಿನ ಕಾಫಿ ತೆಗೆದುಕೊಂಡು ತೋಟದ ಕಡೆಗೆ ಹೊರ ಟಿದ್ದ ವಿಶ್ವನಾಥಯ್ಯ ಏನನ್ನೋ ನೆನಪು ಮಾಡಿಕೊಂಡು ಅರ್ಧ ಹಾದಿಯಲ್ಲಿ ಯೇ ಹಿಂದಕ್ಕೆ ತಿರುಗಿ ಬಂದ.

" ಪದ್ಮಾ, ಇಂದು ತುದೀ ಮನೆಯವರ ಗಾಡಿ ಪೇಟೆಗೆ ಹೋಗುವ ದಂತೆ! ಸಾಮಾನು ತರುವದಿದೆಯೆಂದು ಹೇಳಿದ್ದೆಯಲ್ಲ! ಕಪಾಟಿನಿಂದ ಹತ್ತು ರೂಪಾಯಿ ತೆಗೆದು ಕೊಡು, ನಂತರ ಮರೆತುಹೋಯಿತೆಂದು ಹೇಳುವೆ. ಹಾಂ, ಯಾವ ಯಾವ ಸಾಮಾನು ಬೇಕು ಹೇಳು ? "

ಪದ್ಮೆಗೆ ತಂದೆಯ ಮಾತಿನ ಕಡೆಗೆ ಅಷ್ಟಾಗಿ ಗಮನವಿಲ್ಲ. ಆಕೆ ಓದು ತ್ತಿದ್ದಾಳೆ. ಲಕ್ಷ ಬೇರೆ ಕಡೆಗೆ ಇದ್ದರೆ ಪಾಠ ಹೇಗೆ ಸಾಗಬೇಕು ?"

" ಓಂ, ಏನೆಂದೆ ? ಕಾಣುವದಿಲ್ಲವೇ, ನಾನು ಓದಿಕೊಳ್ಳುತ್ತಿದ್ದೇನೆ. ಯಾವ ಸಾಮಾನು ಇಲ್ಲವೋ ಕೋಣೆಗೆ ಹೋಗಿ ನೋಡು, ಇನ್ನು ಬೇಗದ ಕೈ ನೀನೇ ಇಟ್ಟುಕೋ ಹಿಡಿ. ಹೀಗೆ ಅನವಶ್ಯಕವಾಗಿ ತೊಂದರೆ ಕೊಟ್ಟರೆ ಆಗದು ನನಗೆ."

ಪದ್ಮೆಯು ಆತನ ಕಡೆಗೆ ನೋಡದೆಯೆ ಕೀಲಿಯ ಕೈಗಳ ಗೊಂಚಲ ನ್ನು ಬೀಸಾಡಿದಳು. ಮಗಳ ಆಗಿನ ರೀತಿ ನೋಡಿ ವಿಶ್ವನಾಥಯ್ಯ ಅಪ್ರತಿಭ ನಾದ. 'ಹೆಣ್ಣುಮಕ್ಕಳು ಹೆಚ್ಚು ಓದಿದರೆ ಕೇಡು' ಎಂದು ಹೇಳುವವರ ಪಕ್ಷಕ್ಕೆ ಸೇರಿದವನು ಆತ. ಆದರೆ ಮಗಳ ಮಟ್ಟಿಗೆ ಆತನ ಧಾರಣೆಯೇ ಬೇರೆ. ಅವಳಿಗೆ ಯಾವುದಕ್ಕೂ ಸ್ವಾತಂತ್ರ್ಯವಿದೆ. ಪದ್ಮೆಗೂ ಮನೆಯ ಯಜ ಮಾನಿಕೆ ತಾನೇ ನೋಡುತ್ತಿದ್ದೇನೆಂಬ ಅಭಿಮಾನವಿದೆ. ಈಗಲೇ ಯಾಕೆ ಅವಳಿಗೆ ಅಷ್ಟು ಔದಾಸೀನ್ಯ! ಹಾಂ ಅವಳು ಈಗ ಸಂಸ್ಕೃತ ಕಲಿತು ವಿದುಷಿ ಯಾಗುತ್ತಾಳೆ. ವಿಶ್ವನಾಥಯ್ಯ ಏನನ್ನೂ ಪ್ರತಿ ಹೇಳದೆ ಯಾವ ಸಾಮಗ್ರಿ

ಕಡಿಮೆ ಬಿದ್ದಿದೆಯೆಂಬುದನ್ನು ನೋಡಲು ಕೋಣೆಗೆ ಹೋದ. ಬೀಗದ ಕೈಗಳ ಗೊಂಚಲನ್ನು ಮಾತ್ರ ಅವನು ತೆಗೆದುಕೊಳ್ಳಲಿಲ್ಲ. "ಅಂಗಡಿಯವರ ಲೆಕ್ಕಾಚಾರವನ್ನು ಹಿಂದಿನಿಂದ ಮಾಡಿದರಾಯಿತು." ಎಂದು ಆತ "ಪದ್ಮಾ, ಕೀಲಿಯ ಕೈ ನಿನ್ನಡೆಗೇ ಇರಲಿ. ಲೆಕ್ಕಾಚಾರ ಮುಂದೆ ಕೂಡಿದಾಗ ಮಾಡಿದರಾಯಿತು. ಈಗ ಬೇಡ" ಎಂದು ತಿರುಗಿ ಕೊಟ್ಟ.

೮

ಈಗ ಶ್ರೀನಾಥನಿಗೆ ವಿಶ್ವನಾಥಯ್ಯನ ಮನೆ, ಆ ಮನೆಯ ಎದುರಿನ ತೋಟ, ಮಗ್ಗುಲಿನ ಗದ್ದೆ, ಅದರಾಚೆಯಿರುವ ಚಿಕ್ಕ ಹೊಳೆ, ಅಲ್ಲಿಯ ಹಾಸುಗಲ್ಲು ಇವೆಲ್ಲದರ ಪರಿಚಯವಾಗಿದೆ. ಆತನ ಮಟ್ಟಿಗೆ ಅವೆಲ್ಲ ಅಚೇತನ ವಸ್ತುಗಳಾಗಿಲ್ಲ. ಅಲ್ಲಿಯ ಮರಮಟ್ಟುಗಳು ಕೂಡ ಅವನ ಶೂನ್ಯವಾದ ಬಾಳಿಗಾಗಿ ಸಹಾನುಭೂತಿಯನ್ನು ತೋರುವ ಹಿರಿಯ ಆತ್ಮಗಳಂತೆ ಭಾಸವಾಗುತ್ತಿವೆ ಈಗ. ಆ ಪರಿಮಿತವಾದ ಜಗತ್ತಿನಲ್ಲಿ ಮತ್ತೆ ೧೫ ದಿನಗಳು ಉರುಳಿದವು. ಶ್ರೀನಾಥನು ಈಗ ಮೊದಲಿನಂತಿಲ್ಲ. ಹಳ್ಳಿಯ ತಂಪು ಹವೆ ಹಾಗೂ ಸ್ನಿಗ್ಧವಾದ ಆಹಾರಗಳಿಂದ ಅವನ ಪ್ರಕೃತಿ ಸುಧಾರಿಸಿದೆ. ಮುಖದಲ್ಲಿ ಹಿಂದಿನ ರೋಗಿಯಂತಹ ಕಳೆ ಈಗ ಮಾಯವಾಗಿದೆ. ಮನಃಶಾಸ್ತ್ರಜ್ಞನಿದ್ದಿದ್ದರೆ ಅವನಲ್ಲಿ ಇನ್ನೂ ಒಂದು ವಿಧವಾದ ಬದಲಾವಣೆಯಾದುದನ್ನು ಸುಲಭವಾಗಿ ಕಂಡು ಹಿಡಿಯಬಹುದಾಗಿತ್ತು. ಚಿತ್ತದ ಔದಾಸೀನ್ಯ ಈಗ ಜಾರಿದೆ. ಪದ್ಮೆಯನ್ನು ಆತನು ಮೊದಲಿನಂತೆ ನಿರ್ಲಕ್ಷ್ಯವಾಗಿ ಕಾಣುವದು ಈಗ ದುಸ್ಸಾಧ್ಯ. ಈಗಿತ್ತ ಅವನ ಹೃದಯದಲ್ಲುಂಟಾದ ಅಸ್ಥಿರತೆಯ ಪರಿಣಾಮವಾಗಿಯೋ ಏನೋ! ತೋಟದ ಕಡೆಗೆ ತಿರುಗಾಡಲು ಹೋದಾಗ ಮುಳ್ಳುಬೇಲಿಗೆ ಸಿಕ್ಕಿಸಿಕೊಂಡು ಧೋತರ ಹರಿದುಕೊಳ್ಳುವದು, ಹಳ್ಳದ ಅಂಚಿನ ಹಾವಸೆಯಲ್ಲಿ ಜಾರಿಕೊಂಡು ಕಾಲು ಉಳುಕಿಸಿಕೊಳ್ಳುವದು -- ಇವೆಲ್ಲ ಆತನು ನಿತ್ಯವೂ ಎನ್ನುವಂತೆ ಪದ್ಮೆಗೆ ಕೊಡುವ ಉದ್ದೇಶಪೂರ್ವಕವಲ್ಲದ (?) ಉಪದ್ರವವಾಗಿತ್ತು. ಪರಟು ಹೊಲಿಯುವದು ಮುಗಿಯುವಷ್ಟರಲ್ಲಿ ಕಾಲಿಗೆ ಕಾಳುಮೆಣಸಿನ ಲೇಪ ಬಡಿಯಬೇಕು. ಆಮೇಲೆ ಮಧ್ಯಂತರದಲ್ಲಿ ಬರೆಯುವದಕ್ಕೆ ಖಾಲಿ ಕಾಗದಗಳನ್ನು ಮಡಚಿ ಪಟ್ಟಿ ಹೊಲಿದಿಡಬೇಕು. ಹೀಗೆ ಒಂದಲ್ಲ, ಎರಡಲ್ಲ; ಹಲವು ವಿಧವಾಗಿ ಆತ ಆಕೆಗೆ ಪೀಡೆ ಕೊಡುತ್ತಿದ್ದಾನೆ.

ಪದ್ಮೆಯಲ್ಲಿಯೂ ಈಗ ತುಂಬ ಮಾರ್ಪಾಟು ಕಂಡುಬರುತ್ತಿದೆ. ಒಳ ಮನೆಯಲ್ಲಿಯೇ ಹೆಚ್ಚಾಗಿ ಇರುವವಳು ಈಗ ಅರಿವೆಗೆ ಕಸೂತಿ ಹಾಕುವದಕ್ಕೆ ಹೊರಜಗುಲಿಗೆ ಬಂದು ಕೂಡ್ರುತ್ತಾಳೆ ಆಕೆ. ಶ್ರೀನಾಥನ ಎದುರು ಇರುವಾಗ ಅವಳಲ್ಲಿ ವಿಶೇಷವಾದ ಓರಣ ಕಂಡುಬರುವದು. ಶ್ರೀನಾಥನು ಕೊಡುವ ಉಪದ್ರವ ಅವಳಿಗೆ ಅದೆಂತಹದೋ ಗೂಢ ಆನಂದವನ್ನುಂಟು ಮಾಡುತ್ತಿರಬೇಕು. ಅದೆಷ್ಟು ಶ್ರದ್ಧೆಯಿಂದ ಆಕೆ ಅವನ್ನೆಲ್ಲ ಸಹಿಸುತ್ತಾಳೆ. ಶ್ರೀನಾಥನಿಗೆ ಕಾಲು ಉಳುಕು, ತಲೆನೋವು, ಏನೇ ಬರಲಿ; ಪದ್ಮೆಗೆ ತನ್ನದೇ ಆ ಅವಸ್ಥೆಯಾಗಿದೆಯೋ ಎನ್ನುವಂತೆ ಭಾಸವಾಗುವದು. ಆಶ್ಚರ್ಯವೆಂದರೆ, ಹೊಸ ವಿಷಯವನ್ನು ಗ್ರಹಿಸುವಾಗ 'ನನಗಿದು ಸಾಧ್ಯವೇ? ಎಂಬ ಪ್ರಶ್ನೆಯೇ ಹುಟ್ಟಿಕೊಳ್ಳದಂತಿದ್ದ ಪದ್ಮೆಗೆ ಶ್ರೀನಾಥನಿಂದ ಸಂಸ್ಕೃತವನ್ನು ಹೇಳಿಸಿಕೊಳ್ಳುವುದು ಮಾತ್ರ ದುಃಸಾಧ್ಯವಾಗಿ ಹೋಯಿತು ಆದರೂ ಆ ಬಗ್ಗೆ ಅವಳು ಆತನಿಗೆ ಕಿರಕುಳವನ್ನುಂಟು ಮಾಡದೆ ಇರುವದಿಲ್ಲ. ಪುಸ್ತಕ ಓದುವಾಗ ಇಲ್ಲವೆ ಏನನ್ನಾದರೂ ಆತ ಬರೆಯುತ್ತಿದ್ದಾಗ ಮಧ್ಯದಲ್ಲಿ ಬಂದು 'ಏನಷ್ಟು ಓದೋದು. ಅರ್ಥವಿಲ್ಲದ ಆ ಬರವಣಿಗೆ ಸಾಕು ಮಾಡಿ. ಹಾ, ನನಗೆ ಸಂಸ್ಕೃತ ಮುಂದೆ ಹೇಳುವದಿಲ್ಲವೇ?' ಹೀಗೆ ಹೇಳಿ ಆಕೆ ಶ್ರೀನಾಥನನ್ನು ಕಾಡುವಳು. ಪರಿಣಾಮವಾಗಿ "ರಾಮಚಂದ್ರ ಚರಣಾರವಿಂದಯೋಃ" ಎಂಬ ಶ್ಲೋಕವನ್ನು ರಾಗವಾಗಿ ಹಾಡಲು ಕಲಿತಿದ್ದಾಳೆ ಈಗ.

ಹುಡುಗ ಸುಬ್ಬಯ್ಯನೂ ಸೌಮ್ಯ ಸ್ವಭಾವದ ತನ್ನ ಗುರುವಿನ ದೊಡ್ಡತನ ನೋಡಿ ತನಗೂ ಅವರಿಗೂ ಹೆಚ್ಚಿನ ಭೇದವೇನೂ ಇಲ್ಲವೆಂಬಂತೆ ಒಂದು ತರದ ಹೆಮ್ಮೆಯಿಂದ ಕೂಡಿದ್ದಾನೆ. ತುಪ್ಪ ಹಾಕಿಕೊಂಡು ತಿನ್ನಬೇಕಾದ ತಿನಸಿಗೆ ಅಕ್ಕ ಉಪ್ಪಿನಕಾಯಿ ಹಾಕಿದಾಗಲೂ ಆಕ್ಷೇಪವೆತ್ತದಿದ್ದ ಉಪಾಧ್ಯಾಯರೊಡನೆ "ನಿಮಗೇನೂ ತಿಳಿಯದು" ಎಂದು ಪರಿಹಾಸ್ಯ ಮಾಡುವಷ್ಟು ಸಲಿಗೆ ಬೆಳೆದು ಬಿಟ್ಟಿದೆ ಆತನದು.

ವಿಶ್ವನಾಥಯ್ಯನಿಗೂ ಶ್ರೀನಾಥನೆಂದರೆ ತುಂಬ ವಾತ್ಸಲ್ಯ. ಹೊರಗಿನಿಂದ ಬಂದವರಿಗೆ ಶ್ರೀನಾಥನು ಆ ಮನೆಯವನೇ ಎಂಬ ಭಾವನೆ ಬಂದು ಬಿಡುತ್ತಿತ್ತು. ಹೊಸದಾಗಿ ಘಟ್ಟದ ತಲದಿಂದ ಬಂದ ಕೂಲಿ ಹೆಂಗಸರು ಒಮ್ಮೆ ಪದ್ಮೆಗೆ "ನಿಮ್ಮ ಯಜಮಾನರು ಓಡಿಕೊಂಡದ್ದು ಎಲ್ಲಿ?" ಎಂದು ಕೇಳಿದರು.

ಆಗಿನ ಪದ್ಮೆಯ ಅವಸ್ಥೆ ಬೇಡ. ಅಂದಿನ ದಿನವೆಲ್ಲ ಏಕಾಂತವನ್ನು ಸೇರಿ ಕಣ್ಣೀರು ಕರೆಯುವುದರಲ್ಲಿ ಆಕೆ ಸುಖಿಯಾಗಿದ್ದಾಳೆ.

೬

ಒಂದು ದಿನ ಬನವಾಸಿಯಿಂದ ಅವಧಾನಿಗಳೊಬ್ಬರು ವಿಶ್ವನಾಥಯ್ಯನ ಮನೆಗೆ ಬಂದರು. ಅವರು ಮೈಸೂರಿನಲ್ಲಿ ವೇದಾಂತ ಓದಿದವರು. ಓದಿಗೆ ಅನುಗುಣವಾಗಿ ಒಳ್ಳೇ ನಿಷ್ಠಾವಂತರೆಂದು ಆ ಕಡೆ ಪ್ರಸಿದ್ಧಿಯಿದೆ. ಈಗಿನ ಹುಡುಗರು, ಅವರ ಆಚಾರ ಅಂದರೆ ಅವಧಾನಿಗಳಿಗೆ ಜಿಗುಪ್ಸೆ. ವಿಶ್ವನಾಥಯ್ಯನು ತೋಟದ ಕಡೆಗೆ ಹೋಗಿದ್ದಾನೆ. ಜಗುಲಿಯ ಮೇಲೆ ಓದುತ್ತ ಕುಳಿತಿದ್ದ ಶ್ರೀನಾಥ ಅವಧಾನಿಗಳನ್ನು ಆದರದಿಂದ ಬರಮಾಡಿಕೊಂಡ. ಶ್ರೀನಾಥನ ವಿಚಾರವಾಗಿ ನೆರೆಹೊರೆಯವರ ಉತ್ಪ್ರೇಕ್ಷೆ-ಅತ್ಯುಕ್ತಿಗಳು ಅವಧಾನಿಗಳಲ್ಲಿ ಕುತೂಹಲವನ್ನುಂಟುಮಾಡಿತ್ತು. ಇಲ್ಲವಾದರೆ ಅವರು ಅವನನ್ನು ಅಷ್ಟಾಗಿ ಗಮನಿಸುತ್ತಿರಲಿಲ್ಲ ತೋರಿಕೆಗೆ ಶ್ರೀನಾಥ ತೀರ ಸಾಮಾನ್ಯನಂತೆ ಕಂಡರೂ ಆತನ ಮಾತಿನಲ್ಲಿ ಒಂದು ತರದ ಆಕರ್ಷಣೆಯಿದೆಯೆಂಬದು ಅವಧಾನಿಗಳಿಗೆ ಒಂದೆರಡು ಮಾತಿನಿಂದಲೇ ಖಚಿತವಾಯಿತು. ಇಬ್ಬರೊಳಗೆ ಔಪಚಾರಿಕವಾಗಿ ಪರಸ್ಪರರ ಪರಿಚಯದ ಮಾತುಕಥೆ ನಡೆದಿದೆ. ಈ ಮಧ್ಯದಲ್ಲಿ ಪದ್ಮೆಯು ಅವಧಾನಿಗಳೆದುರು ಒಂದು ಲೋಟಾ ಕಾಫಿ ಇಟ್ಟುಹೋದಳು. ಆದಾಗಲೇ ಅವರ ಕಣ್ಣುಗಳು ಆ ಮುಗ್ಧ ಮನೋಹರ ಆಕೃತಿಯನ್ನು ಒಂದು ಬಾರಿ ಕಬಳಿಸಿತು. ಅವರದಿನ್ನೂ ಹರೆಯ ದಾಟಿಲ್ಲ. ಸಂಸ್ಕಾರವಿಶೇಷದಿಂದಾಗಿ ವಯಸ್ಸಿಗೂ ಮೀರಿದ ಹಿರಿಯತನ ಬಂದುಬಿಟ್ಟಿದೆ ಅಷ್ಟೇ!

" ನೀವು ತೆಗೆದುಕೊಳ್ಳುವದಿಲ್ಲವ್ರೋ ಕಾಫಿ ? "

" ನಾನು ಈಗ ತಾನೇ ತೆಗೆದುಕೊಂಡಿರುವೆ "

ಶ್ರೀನಾಥ ಬಾಗಿಲಿನ ಕಡೆ ದೃಷ್ಟಿ ಹೊರಳಿಸುತ್ತ ಮೃದುವಾಗಿ ನಕ್ಕು ಹೇಳಿದ; ಪದ್ಮೆಯು ಹಾಗೆ ಹೊರಟು ಹೋದುದು ಅವಧಾನಿಗಳಿಗೆ ಅನಾದರ ತೋರಿಸಿದಂತೆ. ಆವಳಂಥ ಅಚಾರಗೆಟ್ಟ ಹೆಂಗಸು ತಮ್ಮೆದುರು ಕಾಫಿ ಇಡುವದೆಂದರೆ ಎಷ್ಟು ಧೈರ್ಯ ಬೇಕು ಮತ್ತೆ!

" ಅಲ್ಲ? ನೀವೂ ಓದಿದ್ದೀರಂತೆ. ನಿಮಗೆ ಈ ಅಸಡ್ಡಾಳ ಒಪ್ಪಿಗೆಯೇ?

ಉಪಾಯವಿಲ್ಲದ್ದಕ್ಕೆ ನಾನೀ ಕಾಫಿ ಕುಡಿಯುತ್ತಿದ್ದೇನೆ.”

ಅವಧಾನಿಗಳು ಒಂದೇ ಗುಟುಕಿಗೆ ಲೋಟವನ್ನು ಬರಿದು ಮಾಡಿದರು. ಅವರ ಅಸಹನೆ ಆ ಮುದುಡಿಸಿಕೊಂಡ ಮೋರೆಯಿಂದಾಗಿ ಇನ್ನಷ್ಟು ವ್ಯಕ್ತವಾಗಿದೆ. ಶ್ರೀನಾಥನು ಸೌಮ್ಯವಾಗಿ ಹೇಳಿದ.

“ಇದರಲ್ಲಿ ಅನೌಚಿತ್ಯವೇನು ಬಂತು ಅವಧಾನಿಗಳೇ? ಹೆಣ್ಣಿನಲ್ಲಿರಬೇಕಾದ ಮಾರ್ದವ, ಶ್ರದ್ಧೆ, ಸೇವಾಬುದ್ಧಿ ಎಲ್ಲಾ ಈಕೆಯಲ್ಲಿದೆಯಲ್ಲಾ!”

“ನನ್ನ ಆಕ್ಷೇಪ ಅದಲ್ಲ! ಆ ರೂಪು, ಆ ಹಣೆ-ಕುಂಕುಮ, ಆ ಮುಂಗುರುಳಿನ ಝೋಕು, ಆ ಸೀರೆಯ ಥಳಕು, ಇನ್ನೇನೂ ಉಳಿಯಲಿಲ್ಲ. ಕಾಲಸ್ಥಿತಿ ಎಲ್ಲಾ ಕೆಟ್ಟುಹೋಯಿತು.”

“ತಿಳಿಯಿತು ಅವಧಾನಿಗಳೇ, ವಿಧವೆಯಾದವಳು ಒಳ್ಳೇ ಗುಣ ಸುರಿದುಕೊಳ್ಳುವುದಕ್ಕೂ ಧರ್ಮ ಉಳಿಸಿಕೊಳ್ಳುವದಕ್ಕೂ ಬೋಳು ತಲೆ, ಕೆಂಪು ಸೀರೆ ಇಲ್ಲದೆ ವಿಧಿಯೇ ಇಲ್ಲವೆಂದೇನೋ ನಿಮ್ಮ ಭಾವನೆ? ಹೆಂಗಸು ಎಷ್ಟೋ ಜನ್ಮಗಳಿಂದ ದ್ವೇಷಿಸುತ್ತ ಬಂದರೂ ಇಂಥ ವಿಚಾರವನ್ನು ನಾಜೀರಿ ಮಾಡಲಾರೆ. ನೀವೋ ಧರ್ಮಾತ್ಮರು. ನಿಮಗಿದು ಸರಿಹೋಗದಿರುವದು ಸಹಜವೇ.”

ಶ್ರೀನಾಥನು ಇಷ್ಟೊಂದು ವ್ಯಂಗವಾಗಿ ಮಾತಾಡಬಲ್ಲನೆಂದು ಅವಧಾನಿಗಳು ಊಹಿಸಿರಲಿಲ್ಲ. ಪದ್ಮೆಯು ಮರೆಯಲ್ಲಿ ನಿಂತು ಶ್ರೀನಾಥನು ಹೇಳುವುದನ್ನು ಕೇಳುತ್ತಿದ್ದಳು.

“ಸರಿ. ವಿಶ್ವನಾಥಯ್ಯನನ್ನು ಕಾಣಬೇಕಾಗಿತ್ತು. ಇನ್ನೊಮ್ಮೆ ಬಂದಾಗ ಭೆಟ್ಟಿಯಾಗುತ್ತೇನೆ.”

ಇನ್ನು ಅಲ್ಲಿ ನಿಲ್ಲಲಾರದೆ “ನೆರೆಯುವರು ಹೇಳುವುದು ಸುಳ್ಳಲ್ಲ” ಎಂದುಕೊಳ್ಳುತ್ತ ಅವಧಾನಿಗಳು ಹೊರಬಿದ್ದರು. ಹಾದಿಯಲ್ಲಿ ಆ ಗ್ರಾಮದ ದೇವರ ಸೇವೆಗೆಂದು ಊರವರಿಂದ ನಿಯೋಜಿಸಲ್ಪಟ್ಟ ಪೂಜಾರಿ ಸಿಕ್ಕಿದ.

“ಏನು ಅವಧಾನಿಗಳೇ? ಸವಾರಿಯೆಲ್ಲಿ ಹೋಗಿತ್ತು?”

“ಆ ವಿಶ್ವನಾಥಯ್ಯನಿರುವನಲ್ಲ, ಮಗಳ ವಿಚಾರವಾಗಿ ಅವನಿಗೆ ನಾಲ್ಕು ಮಾತು ಹೇಳಬೇಕು ಎಂದಿತ್ತು. ನಮ್ಮಂಥವರ ಉಪದೇಶ ಈಗಿನ

ಕಾಲದಲ್ಲಿ ಯಾರಿಗೆ ರುಚಿಸಬೇಕು? ಯಾರೋ ವೈಸೂರಿನವರಂತೆ. ಹಾ ನಮಗೇಕೆ ಬೇಕು! ಗಂಡ ಸತ್ತ ಹೆಂಗಸಿಗೆ ಅಲಂಕಾರ ಮಾಡಿಸಿ ಸಂಸ್ಕೃತ ಹೇಳಹತ್ತಿದ ಮೇಲೆ ಆ ಮನುಷ್ಯ ಸುಖವಾಗಿ ಈ ಊರು ಬಿಡುವದಿಲ್ಲ. ಒಂದು ಮಾತು ಭಟ್ಟರೇ, ಆ ಹೆಂಗಸಿನ ಕೈ ನೀರು ಕುಡಿಯುವದಕ್ಕಿಂತ ಹೆಚ್ಚಿನ ನರಕವಿಲ್ಲ. ನನಗಂತೂ ಅಲ್ಲಿಯ ಅಪವಿತ್ರ ವಾತಾವರಣದಲ್ಲಿ ಉಸಿರಾಡಿಸುವದೂ ಕಷ್ಟವಾಗಿ ಹೋಯಿತು. ಸರಿ, ದೂರ ಹೋಗಬೇಕು. ಬರುತ್ತೇನೆ."

ಅವಧಾನಿಗಳು ಆಶ್ರಯಕ್ಕಾಗಿ ಅಲ್ಲಿ ಹೋಗಿದ್ದರೆಂಬುದು ಪೂಜಾರಿಗೆ ತಿಳಿದಿತ್ತು. ಅವರೇಕೆ ಅಂತಹ ನಂಜಿನ ಮಾತುಗಳನ್ನಾಡಿದರೆಂಬುದನ್ನು ಊಹಿಸುವುದು ಈಗ ಆತನಿಗೆ ಕಷ್ಟವಾಗಲಿಲ್ಲ. ಅವರು ಬೆನ್ನು ತಿರುಗಿಸಿದೊಡನೆಯೇ ಪೂಜಾರಿ ಕೈಮುಗಿದ.

## ೧೦

ವಿಶ್ವನಾಥಯ್ಯನ ದಾಂಪತ್ಯಜೀವನ ಯೌವನ ಕಾಲದಲ್ಲಿ ಮನೋಜ್ಞವಾದುದೇ ಆಗಿತ್ತು. ಮುಂದೆ ವಯಸ್ಸು ಹೆಚ್ಚಿದ ಹಾಗೆ ಸತಿ-ಪತಿಗಳಲ್ಲಿ ಒಂದು ತರದ ಜಗಟುತನ ಬೆಳೆದು ಬಂತು. ಸಣ್ಣ-ಪುಟ್ಟ ಮಾತಿಗೂ ಜಗಳಾಡಿಕೊಂಡು ಅವರು ತಮ್ಮ ಬದುಕನ್ನು ಅಸಹ್ಯವಾಗಿ ಮಾಡಿಕೊಂಡ ದಿನಗಳೆಷ್ಟೋ! ಈಗಿತ್ತ ವಿಶ್ವನಾಥಯ್ಯನ ಹೆಂಡತಿ ಮಗಳು ಸಾವಿತ್ರಿಯೊಡನೆ ಬನವಾಸಿಯಲ್ಲಿ ಅಳಿಯನ ಮನೆಯಲ್ಲಿಯೇ ವಾಸ್ತವ್ಯ ಮಾಡಿದ್ದಾಳೆ. ಆ ಅಳಿಯನೂ ಮನೆಯಲ್ಲಿ ಒಬ್ಬೊಂಟಿಗ. ಊಟ-ಅರೈಕೆಗಳಿಗೆ ತೊಂದರೆಯಿಲ್ಲ. ಇನ್ನೇನು ಬೇಕು?

ಹನ್ನೊಂದು ಘಂಟೆಯ ಸುಮಾರಿಗೆ ಗಾಡಿಯೊಂದು ವಿಶ್ವನಾಥಯ್ಯನ ಮನೆಯ ಬಾಗಿಲಿಗೆ ಬಂತು. ಸಾವಿತ್ರಿಯು ತಾಯಿಯೊಡನೆ ಗಾಡಿಯಿಂದ ಕೆಳಗಿಳಿದಳು. ತಾಯಿ ನಾಲ್ಕು ದಿವಸ ಉಳಿದು ಹೋಗಲು ಆ ಮಗಳನ್ನು ಕರೆದುಕೊಂಡು ಬಂದಿದ್ದಳು. ಸಾವಿತ್ರಿಯ ವಯಸ್ಸು ಹದಿನೆಂಟು- ತುಂಬ ದಿಟ್ಟ ಸ್ವಭಾವ ಆವಳದು. ಜಗಲಿಗೆ ಬಂದೊಡನೆಯೇ ಆ ವಿನೋದಶೀಲಳಾದ ಬಾಲೆಯು ತಮ್ಮ ಸುಬ್ಬಯ್ಯನಿಗೆ ಪಾಠ ಹೇಳುತ್ತಿದ್ದ ಉಪಾಧ್ಯಾಯರಿಗೆ ಮಣಿದಳು.

" ಇವರೇಯೆ ನಮ್ಮ ಸುಬ್ಬುವಿನ ಉಪಾಧ್ಯಾಯರು, ಏನು ? ಜುಟ್ಟು-ಬರಲು ಒಂದೂ ಇಟ್ಟುಕೊಂಡಿಲ್ಲವಲ್ಲ ಪಾಪ ? ಪಾಠ ಹೇಳಿಕೊಡುವವರಿಗೆ ಒಳ್ಳೇ ಒಗರು ಬೇಕು. ಅದೇ ನಮ್ಮೂರಿನ ಚಿದಾನಂದ ದೀಕ್ಷಿತರು ... ...."

ಸಾವಿತ್ರಿಯು ಇನ್ನೂ ಏನೇನೋ ಹೇಳುವುದರಲ್ಲಿದ್ದಳು. ಅಷ್ಟರಲ್ಲಿ ಅವಳಕ್ಕ ಬಂದು ' ಏ, ಸಾತೂ, ಮೆಟ್ಟಿಲು ದಾಟಿ ಜಗುಲಿಗೆ ಬರುವುದರೊಳಗೆ ಶುರುವಾಯಿತಲ್ಲ ನಿನ್ನದು. ಅವರು ಪಾಠ ಹೇಳುತ್ತಿದ್ದಾರೆ. ಈಗ ತೊಂದರೆ ಕೊಡಬಾರದು. ನಡೆ ಒಳಗೆ ' ಎಂದು ರಟ್ಟೆ ಹಿಡಿದು ಜಗ್ಗಿದಳು.

" ಛೀ, ಛೀ. ಬಡತನವಿಲ್ಲದೆ ವಿದ್ಯೆ ಹೆಚ್ಚು ದೂರ ಬರುವದಿಲ್ಲ. ನಮ್ಮಲ್ಲಿಯ ಆ ದೀಕ್ಷಿ ... ...."

ಮಾತು ಮುಗಿಯಲೇ ಇಲ್ಲ. ಅಕ್ಕನು ಅಷ್ಟು ಹೊತ್ತಿಗೆ ತಂಗಿಯನ್ನು ಎಳೆದುಕೊಂಡು ಒಳನಡೆದಿದ್ದಳು. ಮಧ್ಯಾಹ್ನವೆಲ್ಲ ಅಕ್ಕ-ತಂಗಿಯರು ಒಂದೆಡೆ ಕುಳಿತು ಉಪಾಧ್ಯಾಯರ ವಿಚಾರವಾಗಿಯೇ ಮಾತಾಡಿಕೊಂಡರು. ಮಥಿತಾರ್ಥ " ಅವರು ಯಾರೋ ? ಎಷ್ಟು ದಿನ ಉಳಿಯುತ್ತಾರೆಯೋ, ಒಂದೂ ಅರಿಯದು " ಎಂಬುದಿಷ್ಟೇ ಆಗಿತ್ತು. ಪಮ್ಮಿಯು ತನ್ನ ಸಂಸ್ಕೃತವ್ಯಾಸಂಗದ ಕತೆಯನ್ನು ಪ್ರಯತ್ನಪೂರ್ವಕವಾಗಿ ಅಡಗಿಸಿದಳು.

ಸಾಯಂಕಾಲದ ಊಟ ಮುಗಿಯಿತು. ಅಡಿಗೆ ಮನೆಯಲ್ಲಿ ತಾಯಿಯೊಬ್ಬಳನ್ನು ಬಿಟ್ಟು ಎಲ್ಲ ಹೊರಜಗುಲಿಗೆ ಬಂದಿದ್ದಾರೆ.

" ಉಪಾಧ್ಯಾಯರೇ, ಒಂದು ಕಥೆ ಹೇಳಿ ".

ಸಾವಿತ್ರಿಯು ಅದೊಂದೇ ದಿನಕ್ಕೆ ತಾನು ಅಕ್ಕನಿಗಿಂತಲೂ ಉಪಾಧ್ಯಾಯರನ್ನು ಹೆಚ್ಚು ಪರಿಚಯ ಮಾಡಿಕೊಂಡಿರುವೆನೆಂಬ ಭಾವದಲ್ಲಿ ನುಡಿದಳು. ವಿಶ್ವನಾಥಯ್ಯನಿಗೆ ಕತೆ-ಗಿತೆ ಒಂದೂ ಬೇಕಾಗಿಲ್ಲ. ದಿನವೆಲ್ಲ ಆಳುಗಳನ್ನು ದುಡಿಸುವುದರಲ್ಲಿಯೇ ಹೈರಾಣಾಗಿ ಆತ ಊಟವಾದೊಡನೆಯೇ ಮಲಗಿಬಿಡುತ್ತಿದ್ದ. ಇಂದೂ ಹಾಗೆಯೇ. ಸುಬ್ಬಯ್ಯನು ದೀಪದೆದುರು ಪುಸ್ತಕ ಬಿಚ್ಚಿಕೊಂಡು ಕುಳಿತಿದ್ದಾನೆ. ಅಕ್ಷರಗಳನ್ನು ಗ್ರಹಿಸುವುದರಲ್ಲಿ ಅವನ ಕಣ್ಣು-ಬಾಯಿ ಎರಡೂ ಕುಸ್ತಿಗೆ ಬಿದ್ದಂತಿವೆ. ಶ್ರೀನಾಥನು ಮಂಚದ ಮೇಲೆ ದಿಂಬಿಗೆ ಆತು ಕುಳಿತುಕೊಂಡಿದ್ದಾನೆ. ಅವನೆದುರು ಆ ಅಕ್ಕ-ತಂಗಿ ಇಬ್ಬರೇ.

"ನನಗೆ ಅಷ್ಟು ಚೆನ್ನಾದ ಕಥೆ ಬರುವದಿಲ್ಲ." ಶ್ರೀನಾಥನೆಂದ.

"ಯಾವುದಾದರೂ ಸರಿಯೇ, ಬಂದ ಹಾಗೆ ಹೇಳಿ."

ಸಾವಿತ್ರಿಯು ಅಕ್ಕನನ್ನು ಇನ್ನಷ್ಟು ಹತ್ತಿರ ಎಳೆದುಕೊಳ್ಳುತ್ತ ಹೇಳಿದಳು. ಶ್ರೀನಾಥ ಕಥೆ ಹೇಳಲು ಪ್ರಾರಂಭಿಸಿದ.

"ಮಧುಪುರವೆಂಬುದೊಂದು ದೊಡ್ಡ ಪಟ್ಟಣ. ಅಲ್ಲೊಬ್ಬ ಸಾಹುಕಾರನಿದ್ದ. ಮೊದಲಿನ ಹೆಂಡತಿ ತೀರಿಕೊಂಡಿದ್ದಳು. ವಯಸ್ಸೊ? ಐವತ್ತೆಂಟಕ್ಕೆ ಏರಿದೆ. ಮೈಯಲ್ಲಿ ಬೊಜ್ಜು ಹೇರಿದೆ. ನೆತ್ತಿಯಲ್ಲಿ ಕೂದಲು ಇಲ್ಲದ್ದರಿಂದ ಬೋಳಾಗಿ ಥಳಥಳಿಸುತ್ತಿದೆ. ಆತ ಹೊಸದಾಗಿ ಮನೆಗೆ ಕರೆತಂದ ಹುಡುಗಿ ಹೊಸ ಹರೆಯದ ಸುಂದರಿಯಾದ ಹೆಣ್ಣು."

"ತಡೆಯಿರಿ ಉಪಾಧ್ಯಾಯರೇ. ಆ ಹುಡುಗಿ ನನ್ನ ಹಾಗೋ, ನನ್ನಕ್ಕನ ಹಾಗೋ?" ಕುತೂಹಲದಿಂದ ಕೇಳಿದಳು ಆ ದಿಟ್ಟೆ.

"ರೂಪ ನಿನ್ನಕ್ಕನ ಹಾಗೆ. ಮತ್ತೆ ಸ್ವಭಾವ ನಿನ್ನಂತೆ ಚುರುಕು ನೋಡು" ಹೇಳುತ್ತಿದ್ದಂತೆಯೇ ಶ್ರೀನಾಥ ಇಬ್ಬರ ಮುಖವನ್ನೂ ಲಕ್ಷವಿಟ್ಟು ನೋಡಿದ. ಪದ್ಮೆಯು ಮುಖವನ್ನು ಮಗ್ಗುಲಿಗೆ ತಿರುಗಿಸಿ 'ಛೀ, ಛೀ' ಎಂದಳು. ಕಥೆ ಮುಂದಕ್ಕೆ ಸಾಗಿತು.

ಸಾಹುಕಾರನು ಹಗಲೆಲ್ಲಾ ಆ ನಗರದಲ್ಲಿಯೇ ದೊಡ್ಡದಾದ ತನ್ನ ಜವಳೀ ಅಂಗಡಿಯಲ್ಲಿ ಇರುತ್ತಾನೆ. ಮನೆಯೋ, ಅಂಗಡಿಯಿಂದ ಎರಡು ಫರ್ಲಾಂಗು ದೂರ. ಅವನ ಮನಸ್ಸೋ, ಯಾವಾಗಲೂ ಆ ಲಾವಣ್ಯವತಿಯಾದ ಹೆಂಡತಿ ಇರುವಲ್ಲಿಯೇ. ತಾನು ವಯಸ್ಸು ಹೋದವನಾದುದರಿಂದ ಆ ಎಳೆಯ ಹುಡುಗಿ ಇನ್ನಾರಿಗಾದರೂ ಮನಸೋತರೆ! ಎಂಬ ದುಗುಡ ನಿರಂತರವೂ ಆ ಬೋಳು ನೆತ್ತಿಯವನ ಎದೆಯನ್ನು ಕಟೆಯುತ್ತದೆ. ಮನೆಗೆಲಸದಲ್ಲಿ ಗಂಡು ಕೂಲಿಗಳನ್ನು ನಿಯಮಿಸಿಕೊಳ್ಳುವದಕ್ಕೂ ಆತನಿಗೆ ಅನುಮಾನ.

"ಸರಿ. ಗಂಡು ಜಾತಿಯೇ ಹೀಗೆ. ಮುಂದೆ?" ಸಾವಿತ್ರಿಯ ಅಣಕು ನುಡಿ. ಪದ್ಮೆಯು ಕಥೆ ಕೇಳುವುದರಲ್ಲಿ ಅಷ್ಟೇನೂ ಉತ್ಸಾಹ ತೋರಿಸುತ್ತಿಲ್ಲ."

"ಮುಂದೊಂದು ದಿನ ಒಬ್ಬರು ಶಾಸ್ತ್ರಿಗಳು ಸಂಭಾವನೆಗೆಂದು ಆ ಮನೆಗೆ ಬಂದರು. ಯಜಮಾನ ಮನೆಯಲ್ಲಿಲ್ಲ. ಶಾಸ್ತ್ರಿಗಳದಿನ್ನೂ ಎಳೆಯ

ಪ್ರಾಯ. ಒಳ್ಳೇ ತೇಜಸ್ವಿಗಳು. "

" ನಿಮ್ಮದೇ ಕಥೆ ಹೇಳುತ್ತಿದ್ದೀರೇನೋ. "

ಶ್ರೀನಾಥನ ಮೋರೆಯಲ್ಲಿ ಸ್ವಲ್ಪ ಸಿಡುಕು ಕಾಣಿಸಿಕೊಂಡಿತು. "ಮಧ್ಯದಲ್ಲಿ ನೀನು ಹೀಗೆಲ್ಲ ಪ್ರಶ್ನೆ ಮಾಡಬಾರದು ನಾತೂ. ನಾನು ಹೇಳುವುದೇ ಇಲ್ಲ. "

" ಛೀ, ಪರಿಹಾಸಕ್ಕೆ ಹೇಳಿದ್ದು. ಮುಂದೆ ಸಾಗಲಿ. "

" ಹೂಂ, ಕೇಳು. ಆ ಹುಡುಗಿ ಶಾಸ್ತ್ರಿಗಳನ್ನು " ಏಕೆ ಬಂದದ್ದು ? " ಎಂದು ವಿಚಾರಿಸಿದಳು. ಅವರು ಸಂಭಾವನೆಯ ಪ್ರಸ್ತಾಪವೆತ್ತಿದರು. " ನೀವೆಷ್ಟು ಆಶಿಸಿದ್ದೀರಿ " ಹೆಣ್ಣಿನ ಸವಾಲು. ಶಾಸ್ತ್ರಿಗಳು " ನಿನ್ನನ್ನು ನೋಡಿದರೆ ಭಾರೀ ಶ್ರೀಮಂತರ ಸೊಸೆಯ ಹಾಗೆ ಇದೆ. ಯಜಮಾನರು ಮನೆಯಲ್ಲಿ ಇಲ್ಲದಾಗ ನಾನು ಕೇಳುವುದು ರೀತಿಯಾಗಲಾರದು. ಮತ್ತೊಮ್ಮೆ ಬರುತ್ತೇನೆ " ಎಂದು ಹೊರಡಲನುವಾದರು. " ನಿಲ್ಲಿ ! ಆ ತೊಂದರೆ ಬೇಡ. ನಾನು ಸೊಸೆಯಲ್ಲ ! ಈ ಮನೆಯ ಯಜಮಾನಿತಿ. ಹೇಳಿ ನಿಮಗೇನು ಬೇಕು ? ಥೂ ವಯಸ್ಸು ಹೋದವರಿಗೆಲ್ಲ ಮದುವೆ.ಯಾಕೋ ? ''

ಆ ಹುಡುಗಿ ಅದೊಂದು ಭಂಗಿಯಲ್ಲಿ ಕಣ್ಣು-ತುಟಿಗಳನ್ನು ಹೊರಳಿಸಿ ಮೈ ಕುಲುಕಿಸಿದಳು. ಶಾಸ್ತ್ರಿಗಳಿಗೆ ಲಕ್ಷಣ ಚನ್ನಾಗಿ ಕಾಣಲಿಲ್ಲ. ತಾವು ಬಂದ ಕೆಲಸವನ್ನು ಹೇಗಾದರೂ ಮುಗಿಸಿಕೊಳ್ಳಬೇಕೆಂದು ಅವರು " ನಿನ್ನಂಥ ಸಿರಿದೇವಿ ಮನಸ್ಸು ಮಾಡಿದರೆ ಹತ್ತು ರೂಪಾಯಿಗಳನ್ನು ಬೇಕಾದರೂ ಕೊಡಬಹುದು. " ಬಡವನಾದ ಶಾಸ್ತ್ರಿಗಳಿಗೆ ತಾನು ಹೆಚ್ಚು ಕೇಳಿದೆನೆಂದು ಎನ್ನಿಸಿರಬೇಕು. ಆ ಬಿನ್ನಾಣಗಾತಿಯೋ — ಗಹಗಹಿಸಿ ನಗುತ್ತಿದ್ದಾಳೆ. " ನಿಮ್ಮ ಸಂಸಾರಕ್ಕೆ ಹತ್ತು ರೂಪಾಯಿ ಸಾಕೇ ? ನಿಮಗಿನ್ನೂ ವ್ಯವಹಾರಜ್ಞಾನ ಕಡಿಮೆ. ಇರಲಿ ! ನನ್ನನ್ನು ಸಿರಿದೇವಿಯೆಂದು ಹೇಳಿದಿರಲ್ಲ. ಇನ್ನೊಮ್ಮೆ ಇತ್ತ ನೋಡಿ ! ಈ ಸಿರಿದೇವಿಯನ್ನು ನೋಡಿದಾಗ ನಿಮ್ಮ ಹೃದಯದಲ್ಲಿ ಇನ್ನಾವ ಅಪೇಕ್ಷೆಯೂ ಹುಟ್ಟಿಕೊಳ್ಳುವದಿಲ್ಲವೇ ? " ಆ ರಂಭೆಯ ಕಣ್ಣುಗಳಲ್ಲಿ ಅದಮ್ಯವಾದ ಲಾಲಸೆ ತುಳುಕಾಡುತ್ತಿದೆ.

ಪದ್ಮೆಗೆ ಮುಂದೆ ಕೇಳುವದಾಗಲಿಲ್ಲ.

“ ಥೂ, ಇದೆಂಥ ಭಂಡ ಕಥೆ, ಸಾಕು ಮಾಡಿ ಉಪಾಧ್ಯಾಯರೇ ? ”

ಶ್ರೀನಾಥನ ಮೋರೆ ವಿವರ್ಣವಾಗಿ ಹೋಯಿತು. ಸಾವಿತ್ರಿಯು “ ಅಕ್ಕ, ನಿನಗೆ ಸೇರದಿದ್ದರೆ ನಡೆ, ಮಲಗಿಕೋ ” ಎಂದು ಪದ್ಮೆಗೆ ಮುನಿದು “ ಹೂಂ, ಮುಂದೆ ಹೇಳಿ ಕಥೆ ಬಹಳ ಚೆನ್ನಾಗಿದೆ ” ಎಂದು ಉಪಾಧ್ಯಾಯರನ್ನು ಉತ್ಸುಕತೆಯಿಂದ ನೋಡಿದಳು.

“ ಸಾಕು, ಈಗ ಬೇಡ. ನಾಳೆ ಹೇಳುತ್ತೇನೆ. ” ಶ್ರೀನಾಥನ ಸ್ವರ ತೀರಾ ವಿಕೃತವಾಗಿ ಹೋಗಿದೆ. ಆತ ಹಾಗೆಯೇ ಕಾಲಿನ ತುದಿಯಿಂದ ಮೇಲಕ್ಕೆ ರಗ್ಗು ಎಳೆದುಕೊಂಡು ಅಡ್ಡಾದ. ಆಮೇಲೆ ಸಾವಿತ್ರಿ ಅದೆಷ್ಟೋ ದುಂಬಾಲು ಬಿದ್ದು ಹೇಳಿಕೊಂಡಳಾದರೂ ಪ್ರಯೋಜನವಾಗದೆ “ ನಿನ್ನಿಂದ ಇಷ್ಟಾಯಿತು ” ಎಂದು ಅಕ್ಕನನ್ನು ಬೈಯ್ಯುತ್ತ ಎದ್ದಳು. ಅಕ್ಕ-ತಂಗಿಯರಿಬ್ಬರೂ ಹಾಸಿಗೆ ಹಾಸಿಕೊಳ್ಳುವುದಕ್ಕೆ ನಡುಮನೆಗೆ ನಡೆದರು. ಅಷ್ಟು ಹೊತ್ತಿಗೆ ಸುಬ್ಬಯ್ಯ ಪುಸ್ತಕ ಮಡಚಿ ಇಟ್ಟು ನಿದ್ದೆಹೋಗಿದ್ದ.

## ೧೧

ಶ್ರೀನಾಥನಿಗೆ ಆ ರಾತ್ರಿ ನಿದ್ದೆ ಬರಲಿಲ್ಲ. ತನ್ನಿಂದ ಅಚಾತುರ್ಯವಾಯಿತೇನೋ ಎಂದು ಆತನ ಹೃದಯ ಗೊಂದಲಗೆಟ್ಟು ಹೋಗಿದೆ. ಪದ್ಮೆಗೂ ಅಂದು ಜಾಗರಣೆ. ಎಷ್ಟೋ ದಿನಗಳಿಂದ ಸುಪ್ತವಾಗಿದ್ದ ಅಭಿಲಾಷೆಗಳು ಈಗ ಹೊಸ ಹೊಸ ಕಣ್ಣುಗಳೊಡನೆ ಮತ್ತೆ ಚೇತರಿಸಿ ಹೃದಯಾಂತರಾಳದಲ್ಲಿ ಕ್ಷೋಭೆಯನ್ನೆಬ್ಬಿಸಿವೆ. “ಆ ಅರೆಹುಚ್ಚನಂತಿದ್ದ ಶ್ರೀನಾಥನಲ್ಲಿ ಲೋಭನೀಯವಾದ ಅಂಶ ಯಾವುದಿದೆ? ಅವನೇಕೆ ಇಲ್ಲಿಗೆ ಬರಬೇಕು?” ಹೀಗೆಲ್ಲ ತನ್ನಷ್ಟಕ್ಕೆ ಪ್ರಶ್ನಿಸಿಕೊಳ್ಳುತ್ತಿದ್ದಾಳೆ ಪದ್ಮೆ.

ಮಧ್ಯಾಹ್ನದ ಊಟ ಮುಗಿದಿತ್ತು. ಅಂದು ಬಹು ದಿನಗಳಿಗೆ ತಂಗಿ ಬಂದಿದ್ದಾಳೆಂದು ಪದ್ಮೆ ಹೋಳಿಗೆ ಮಾಡಿದ್ದಳು. ಹೂರಣ-ಹಿಟ್ಟು ಇನ್ನೂ ಉಳಿದಿತ್ತು. ಸಾವಿತ್ರಿ ಮೊದಲು ಊಟ ಮುಗಿಸಿ ತಾನು ಹೋಳಿಗೆ ಸುಡುವೆನೆಂದು ಅಣಿಯಾದಳು. ಶ್ರೀನಾಥನು ಅಂದಿನ ಆಹಾರ ಜಡವಾದುದರಿಂದ ಮಂಚದ ಮೇಲೆ ಹಾಸಿಗೆಯ ಸುರುಳಿಗೆ ಒರಗಿ ವಿಶ್ರಾಂತಿ ಹೊಂದುತ್ತಿದ್ದಾನೆ. ಬೆಳಗಿಸಿಂದ ಆತ ಪದ್ಮೆಯನ್ನು ಕಣ್ಣೆತ್ತಿ ನೋಡಲಿಲ್ಲ. ಅವಳು ಬಹಳ ಕೆಲಸ ಹಚ್ಚಿಕೊಂಡಿದ್ದರಿಂದ ಆತನ ಅಂದಿನ ಕಳವಳವನ್ನು ಲಕ್ಷಿ

ಸುವಂತಿರಲಿಲ್ಲ.

ಶ್ರೀನಾಥನು ನಿದ್ರಿಸಿ ಒಂದು ತಾಸು ಆಗಿತ್ತೋ ಇಲ್ಲವೋ - ಹೆಜ್ಜೆಯ ಸಪ್ಪಳಕ್ಕೆ ಆತನಿಗೆ ಎಚ್ಚರವಾಯಿತು. ಎದುರಿಗೆ ಪದ್ಮೆ ನಿಂತಿದ್ದಾಳೆ. ಉಟ್ಟ ತಿಳಿ ಹಸಿರು ಬಣ್ಣದ ಪತ್ತಲವು ಆಕೆಯ ಬಂಗಾರದ ಮೈಗೆ ವಿಶೇಷವಾದ ಮೆರುಗನ್ನು ಉಂಟುಮಾಡಿದೆ.

"ಏನು ವಿಶ್ರಾಂತಿಗೆ ಭಂಗ ಬಂತೇ?" ಪದ್ಮೆಯು ಬಾಗಿ ತನ್ನ ಎರಡೂ ಕೈಗಳನ್ನು ಮಂಚಕ್ಕೆ ಊರಿಕೊಂಡು ಕೇಳಿದಳು. ಶ್ರೀನಾಥ ಎದ್ದು ಸಾವರಿಸಿಕೊಂಡು ಕುಳಿತ. ಆತನ ಕಣ್ಣು ಪದ್ಮೆಯ ಮೋರೆಯಲ್ಲಿ ಏನನ್ನೋ ಹುಡುಕಿಕೊಳ್ಳುವಂತಿದೆ.

"ಪದ್ಮಾ, ನಿನಗೇನು ಹೇಳಬೇಕಾಗಿದೆ ಈಗ. ಈ ಕಲ್ಪಲತೆಯ ನೆರಳಿನಲ್ಲಿ ನನಗೆಲ್ಲ ದಣುವು ಬರಬೇಕು. ಹಾ, ಈ ಹಸಿರು ಸೀರೆ ನಿನ್ನ ಮೈಗೆ.... ..... ಇಲ್ಲ. ನಾನೇನನ್ನೂ ಹೇಳುವದಿಲ್ಲ. ನಿನಗೆ ಸಿಟ್ಟು ಬರುವದು."

ಶ್ರೀನಾಥನಿಗೆ ತಾನೇನು ಹೇಳುತ್ತಿದ್ದೇನೆಂಬುದರ ಅರಿವೇ ಇಲ್ಲದಂತಾಗಿದೆ. ಪದ್ಮೆಯ ಮುಖ ಆರಕ್ತವಾಗಿದೆ.

"ಹೌದು, ನನಗೆ ಸಿಟ್ಟು ಬರಿಸುವದಕ್ಕೆ ನಿಮಗಾವ ಬಾಧ್ಯತೆ ಇದೆ?"

ಶ್ರೀನಾಥ ಅವಳು ಹೊರಟು ಹೋಗುವಳೆಂದು ಭಾವಿಸಿದ್ದ. ಆಶ್ಚರ್ಯ, ಈಗ ಪದ್ಮೆ ಅದೇ ಮಂಚದ ಇನ್ನೊಂದು ಅಂಚಿಗೆ ಕುಳಿತುಕೊಳ್ಳುತ್ತ "ಹೋಗಲಿ, ಈ ಸೀರೆ ನಾನು ನಿತ್ಯ ಉಡೋದು. ನಿಮ್ಮ ಕಲ್ಪಲತೆ-ಗಿಲ್ಪಲತೆ ಒಂದೂ ನಾನರಿಯೆ. ಈಗ ನಿನ್ನೆ ಹೇಳಿದ ಆ ಕಥೆ ಮುಂದೆ ಹೇಳಿ? ಕಾಫಿಗೆ ಇನ್ನೂ ಅರ್ಧ ತಾಸು ಬೇಕು." ಎಂದಳು. ಅವಳ ವಿಲಕ್ಷಣವಾದ ಪ್ರಸನ್ನತೆ ನೋಡಿ ಶ್ರೀನಾಥನಿಗೆ ಆಶ್ಚರ್ಯವಾಯಿತು.

"ಆ ಕಥೆಯೇನು ಮಣ್ಣು? ಸಾಹುಕಾರ ಎಲ್ಲ ರೀತಿಯಿಂದ ಮನೆ ಹಾಳು ಮಾಡಿಕೊಂಡಿದ್ದು. ಅದನ್ನು ನೀನು ಕೇಳಬಾರದು. ಹಾ, ನಿನ್ನೆ ನೀನು ವ್ಯಕ್ತಪಡಿಸಿದ ಅರುಚಿಯಿಂದಾಗಿ ನಾನೂ ಸ್ವಲ್ಪ ಮಟ್ಟಿಗೆ ಬೋಧ ಪಡೆದಿದ್ದೇನೆ ಪದ್ಮಾ. ನನ್ನಿಂದ ಈ ಮನೆಗೆ ಯಾವ ಒಳಿತೂ ಇಲ್ಲ. ಇನ್ನು ದ್ರೋಹವಾದರೂ ಸಂಭವಿಸದಿರುವಂತೆ ನೋಡಿಕೊಳ್ಳಬೇಡವೇ? ನಾನು ನಾಳೆಯೋ ಇಲ್ಲಿಂದ ಹೊರಟು ............"

ಶ್ರೀನಾಥನ ದುರ್ದೆಸೆಯನ್ನು ನೋಡಿ ಪದ್ಮೆಗೆ ಕಳವಳವಾಯಿತು. ಅವಳು ಮುಂದೆ ಮಾತಾಡಗೊಡದೆ ತನ್ನ ಕೋಮಲ ಹಸ್ತದಿಂದ ಆತನ ಬಾಯಿಯನ್ನು ಒತ್ತಿ ಹಿಡಿದು ಹೇಳಿದಳು.

"ಛೀ, ಸಾಕು. ಸುಮ್ಮನಿರಿ. ಚಿಕ್ಕ ಹುಡುಗನಿಗೆ ಕೂಡ ಕೇಡು ಮಾಡುವದು ನಿಮ್ಮಿಂದ ಆಗದ ಮಾತು. ನನಗೆ ದ್ರೋಹ ಬಗೆಯುವದಕ್ಕೆ ಯಾವ ಪೌರುಷವಿದೆ ನಿಮ್ಮಲ್ಲಿ? ಇದೊಂದು ಭ್ರಾಂತಿ ಬೇರೆ ತಾಗಿತೋ? ಬಿಡಿ. ಆ ಕಥೆ ಹೇಳದಿದ್ದರೆ ಬೇಡ. ಇಲ್ಲಿಂದ ಹೊರಡುವ ವಿಚಾರ ಮಾತ್ರ ಎತ್ತಬೇಡಿ. ಅದರಿಂದ ಯಾರಿಗೂ ಹಿತವಿಲ್ಲ. ಹಾ, ನಿಮ್ಮ ಪ್ರಕೃತಿ ಇಲ್ಲಿಗೆ ಬಂದ ಮೇಲೆ ಎಷ್ಟು ಸುಧಾರಿಸಿದೆ. ತುಸು ಯೋಚಿಸಬಾರದೇ?"

ಶ್ರೀನಾಥ ನಾಚಿದ. ಪದ್ಮೆಯು ಇಷ್ಟು ಸುಲಭವಾಗಿ ತನ್ನನ್ನು ಪರಾಭವಗೊಳಿಸುವಳೆಂದು ಆತ ತಿಳಿದಿರಲಿಲ್ಲ.

"ಇಲ್ಲ ಪದ್ಮಾ, ನನ್ನಿಂದ ಇಲ್ಲಿ ಉಳಿಯುವದಾಗದು. ನಾನೆಲ್ಲ ವಿಚಾರ ಮಾಡಿದ್ದೇನೆ." ಆತನಲ್ಲಿ ಇನ್ನೂ ಸ್ವಲ್ಪ ಬಿಗುವು ಇದೆ.

"ಅದೇಕೆ ಹಾಗೆ ಹೇಳುವುದು?" ಪದ್ಮೆಯು ಹುಬ್ಬೇರಿಸಿ ಕೇಳಿದಳು.

"ಪದ್ಮಾ, ಅದನ್ನು ಕೇಳಬೇಡ. ನಾನು ಏನಾದರೂ ಅಂದರೆ ನಿಮಗಾರಿಗೂ ಅದು ಸೇರುವದಿಲ್ಲ."

"ನಿನಗೆ ಸೇರುವದಿಲ್ಲವೆಂದು ಸ್ಪಷ್ಟ ಹೇಳಬಾರದೇ? ಉಪಾಧ್ಯಾಯರೇ, ಏನೇನೆಲ್ಲಾ ಹೇಳಿದರೆ ಯಾರಿಗೆ ಸೇರೀತು?"

"ಸೇರುವ ಮಾತು ಯಾವುದೋ ಊಹಿಸುವದು ಕಷ್ಟ ಪದ್ಮಾ."
"ಆ ಯೋಚನೆ ಬೇಡ. ಮೆಚ್ಚುಗೆಯಾಗದೆ ಇರುವಲ್ಲೆಲ್ಲ ನಾನು ಎಚ್ಚರಿಸುತ್ತೇನೆ. ಈಗ ಹೋಗುವ ಮಾತು ಬಿಡಿ."

"ಉಪಕಾರವಾಯಿತು ಪದ್ಮಾ. ನೀನೆಷ್ಟು ತಿಳುವಳಿಕೆಯುಳ್ಳವಳು. ನಿನ್ನ ಸಾಮೀಪ್ಯದಿಂದಲೇ ನಾನೂ ಒಬ್ಬ ಮನುಷ್ಯನಂತಾಗಬೇಕು."

"ನೋಡಿ, ಮೊದಲ ಮಾತಿಗೇ ಸಿಟ್ಟು ತರಿಸುತ್ತಿದ್ದೀರಿ. ಉಪಕಾರದ ಮಾತು ನನಗೆ ಸೇರುವದಿಲ್ಲ."

ಶ್ರೀನಾಥ ಅಪ್ರತಿಭನಾಗಿ ಹೋದ.

" ಅಂದರೆ ನಾನೇನು ಹೇಳಬೇಕು ? "

ಪದ್ಮೆಯು ಬೆವತುಕೊಂಡಿದ್ದ ಶ್ರೀನಾಥನ ಹಣೆಯ ಮೇಲೆ ಕೈಯಿಟ್ಟು " ನಿನಗೇನಾಗಿದೆ ಇಂದು ಶ್ರೀನಾಥ ?" ಎಂದಳು. ಮರುಕ್ಷಣದಲ್ಲಿಯೇ ಆತನನ್ನು ಹಾಗೆ ಸಂಬೋಧಿಸಿದ್ದಕ್ಕೆ ಅವಳ ಮೋರೆ ನಾಚಿಕೆಯಿಂದ ಕೆಂಪಾಯಿತು.

ಈಗ ಶ್ರೀನಾಥನಿಗೆ ನಗು ಬಂತು. ಆತ ಪದ್ಮೆಯ ಕೈಯನ್ನು ಹಿಡಿದು ತನ್ನ ಕೈಬೆರಳುಗಳ ಸಂದಿನಲ್ಲಿ ಆ ಕೈಬೆರಳುಗಳು ಬರುವಂತೆ ಮಾಡಿ ಹಿಸುಕಿದ. ಹೇಗೋ ಆತನಲ್ಲಿ ಧೈರ್ಯಸಂಚಯವಾಗುತ್ತಿದೆ.

"ನೋಡು ಪದ್ಮಾ, ನೀನು ಹೀಗೆಯೇ ನನ್ನನ್ನು ಸಂಬೋಧಿಸುತ್ತಿದ್ದರೆ ನಾನಿಲ್ಲಿ ಉಳಿಯುವ ಮನಸ್ಸು ಮಾಡಿದರೂ ಮಾಡಬಹುದು."

ಪದ್ಮೆಗೆ ಕೈ ಬಿಡಿಸಿಕೊಳ್ಳುವ ಯೋಚನೆಯೇ ಇಲ್ಲವೇನೋ ? ಆಕೆ ಶ್ರೀನಾಥನ ಬದಿಗೆ ಇನ್ನಷ್ಟು ಸರಿಯುತ್ತ ನಕ್ಕು ಹೇಳಿದಳು.

" ಆಗಲಿ, ಶ್ರೀನಾಥ, ಈಗ ನಾನು ಹೇಳುವುದನ್ನು ಕೇಳು. ನೀನು ಕಾಲು ಉಳುಕಿಸಿಕೊಂಡರೆ ನಾನು ಲೇಪ ಬಡಿಯುತ್ತೇನೆ. ಮೊನ್ನೆ ಗುದ್ದಲಿಯಿಂದ ಹಣೆಗೆ ಘಾಯ ಮಾಡಿಕೊಂಡೆಯಲ್ಲ ತೋಟದಲ್ಲಿ? ನಾನದಕ್ಕೆ ಎಣ್ಣೆ ಸವರಲಿಲ್ಲವೇ ? ಇಂಥ ಕೆಲಸಗಳಲ್ಲಿ ನನಗೆ ಬೇಸರವಿಲ್ಲ. ಆದರೆ ಅವನ್ನೆಲ್ಲ ನೀನು ಅಂದು ತೋರಿಸಿದರೆ ನಾನೊಮ್ಮೆ ಸಹಿಸಿಕೊಂಡರೂ ಮಂದಿ ಏನೆಂದಾರು ?

" ಪದ್ಮಾ, ನನಗೆ ನಿನ್ನ ಮಾತಿನ ಅರ್ಥವಾಗುವದಿಲ್ಲ. ಇನ್ನೇನನ್ನೂ ನಾನು ಮಾಡಲಾರೆ. ಹೋಗಲಿ. ಕೃತಜ್ಞತೆ ತೋರಿಸುವುದಕ್ಕೂ ನನಗೆ ಅಧಿಕಾರವಿಲ್ಲವೇ ? "

" ಇಲ್ಲ. ಖಂಡಿತವಾಗಿಯೂ ಇಲ್ಲ. ನಿನಗೇನೂ ತಿಳಿಯದು. ಹೋಗು ಅತ್ತ. ನಾನೀಗ ಕಾಫಿಗೆ ನೀರಿಡಬೇಕು. "

ಪದ್ಮೆಯು ಕೈ ಕೊಸರಿಕೊಂಡು ಎದ್ದು ಹೋದಳು. ಶ್ರೀನಾಥನಿಗೆ ಅವಳ ಆ ವಿಚಿತ್ರ ವರ್ತನೆ ನೋಡಿ ಹೇಗೆ ಹೇಗೋ ಆಯಿತು. ಇಷ್ಟು ಮಾತ್ರ ನಿಜ. ಪದ್ಮೆಯ ಅಂದಿನ ನಡೆ-ನುಡಿಗಳು ಶ್ರೀನಾಥನಿಗೆ ಆ ಮನೆಯನ್ನೇ ಇನ್ನಷ್ಟು ಅಂಟಿಕೊಂಡಿರುವಂತೆ ಮಾಡಿವೆ. ಒಂದು ವಾರದ ಮಟ್ಟಿಗೆ ಉಳಿದು

ಹೋಗಬೇಕೆಂದಿದ್ದ ಆತನಿಗೆ ಇನ್ನು ಅಲ್ಲಿಂದ ಹೊರಡುವ ಆಲೋಚನೆ ಮಾಡುವದು ಕೂಡ ಅಸಹ್ಯವಾಗಿಬಿಟ್ಟಿತು.

೧೨

ವಿಶ್ವನಾಥಯ್ಯನು ಶ್ರಾದ್ಧದ ಆಮಂತ್ರಣ ಹೇಳಲು ಹೋದಾಗ ಪೂಜಾರಿ ಅಂತಹ ಮಾತು ಹೇಳುವನೆಂದು ಊಹಿಸಿರಲಿಲ್ಲ.

"ಹತ್ತು ಜನರ ಆಶ್ರಯದಿಂದ ಜೀವಿಸುವ ನನಗೆ ತೊಂದರೆಗೆ ಹಾಕ ಬಾರದು ಸ್ವಾಮಿ, ಪುರೋಹಿತ ಜೈರಾಮ ಜೋಯಿಸರು ಬರುವದಾದರೆ ನಾನೂ ಬರುತ್ತೇನೆ." ಪೂಜಾರಿ ಮಾತಿದು.

"ಅಂದರೆ ನನಗೇನೂ ತಿಳಿಯಲಿಲ್ಲ ಭಟ್ಟರೇ ?"

"ನೋಡಿ, ಅಂದು ಆ ಅವಧಾನಿಗಳು ಬಂದಿದ್ದರಲ್ಲ; ಅವರ ಉಪದ್ವ್ಯಾಪ ಇದು. ಅವರು ಜೋಯಿಸರೊಡನೆ ನಿಮ್ಮ ಬಗ್ಗೆ ಏನೇನು ಹೇಳಿದರೋ! ಹಾ, ಒಮ್ಮೆ ನೀವು ಪುರೋಹಿತರಲ್ಲಿಗೆ ಹೋಗಿ ಇತ್ಯರ್ಥ ಮಾಡಿಕೊಂಡು ಬನ್ನಿ. ನನ್ನದೇನೂ ಆಕ್ಷೇಪವಿಲ್ಲ."

ಯಾವ ಅವಧಾನಿಗಳು? ಏನೆಂದು ಇತ್ಯರ್ಥ ಮಾಡಬೇಕು? ವಿಶ್ವನಾಥಯ್ಯನಿಗೆ ಒಂದೂ ಸೂಚಿಸಲಿಲ್ಲ. ಆಕಸ್ಮಿಕ ಅಭಿಯೋಗದಿಂದಾಗಿ ಆತ ದಿಙ್ಮೂಢನಂತಾಗಿದ್ದಾನೆ. ಪದ್ಮೆಗೆ ಈ ತೊಡಕನ್ನು ಬಗೆಹರಿಸಲು ಹೇಳಬೇಕು ಎಂದು ಆತ ಮತ್ತೆ ಮಾತೆತ್ತದೆ ಮನೆಗೆ ಬಂದ. ಆಗಲೇ ಅವನಿಗೆ ಸಾಕಷ್ಟು ಅವಮಾನವಾದಂತಾಗಿತ್ತು.

ತಂದೆಯ ಮಾತು ಕಿವಿಗೆ ಬಿದ್ದಾಗ ಪದ್ಮೆಯ ಮುಖ ವಿವರ್ಣವಾಗಿ ಹೋಯಿತು. ಆದರೆ ಆ ಧೀರ ಪ್ರಕೃತಿಯ ಹೆಣ್ಣು ತನ್ನ ಹೃದಯವನ್ನು ಕ್ಷೋಭೆ ಹೊಂದಲು ಬಿಡದೆ "ಅಪ್ಪಾ, ಈ ಮಾತನ್ನು ಇನ್ನಾರ ಸಂಗಡಲಾದರೂ ಹೇಳಿದಿರಿ? ಹಾ! ಉಪಾಧ್ಯಾಯರು ಇದನ್ನು ಕೇಳಬಾರದು. ಈಗ ಪುರೋಹಿತರನ್ನು ಕರೆಯಲು ನಾನೇ ಹೋಗುತ್ತೇನೆ. ನೀನು ನಿನ್ನ ಕೆಲಸಕ್ಕೆ ಹೋಗು" ಎಂದಳು.

ಪದ್ಮೆಯು ಹಾಗೆ ಎಚ್ಚರಿಸದಿದ್ದರೆ ಆ ಉತಾವಳಿ ಸ್ವಭಾವದ ತಂದೆ ಇನ್ನೆಂತಹ ಗೊಂದಲ ಎಬ್ಬಿಸುತ್ತಿದ್ದನೋ?

ಜೈರಾಮ ಜೋಯಿಸರು ಮಾಗೋಡು ಗ್ರಾಮದ ಎರಡು ಮೈಲು ದೂರದ ಹಳ್ಳಿಯವರು. ಆಸುಪಾಸಿನ ಏಳೆಂಟು ಗ್ರಾಮಗಳ ಪೌರೋಹಿತ್ಯ ಅವರದೇ. ವಯಸ್ಸು ಅರವತ್ತಕ್ಕೆ ಮುಟ್ಟಿದೆ. ತುಂಬ ಕರ್ಮಠರು. ಒಂದಕ್ಕೊಂದು ವಿಸಂಗತವಾದ ಸಂಗತಿಗಳನ್ನು ಕೆಲವೇ ಕ್ಷಣಗಳ ಅಂತರದಲ್ಲಿ ಕೇಳಿದರೆ ಅವೆಲ್ಲವೂ ಸರಿ ಎಂದು ನಂಬುವ ಪ್ರಕೃತಿ ಅವರದು. ಹೇಳುವ ವಿಷಯ ವೇದಗಳಲ್ಲಿದೆ, ಎಂದಾಗಬೇಕು ಅಷ್ಟೇ! ಇನ್ನೂ ಒಂದು ವಿಚಿತ್ರವೆಂದರೆ "ಕ್ಷಣೇ ರುಷ್ಟಃ ಕ್ಷಣೇ ತುಷ್ಟಃ" ಎನ್ನುವಂತಹ ಜಾತಿಯದಾಗಿದೆ ಅವರ ಸ್ವಭಾವ. ಯಾವುದೂ ಬಹಳ ಹೊತ್ತು ನಿಲ್ಲುವದಿಲ್ಲ. ಅವಧಾನಿಗಳು ಅವರಲ್ಲಿಗೆ ಬಂದಾಗ ಪದ್ಮೆ ಮತ್ತು ಶ್ರೀನಾಥರ ವಿಷಯವಾಗಿ ಏನೇನು ಹೇಳಿದ್ದರೋ — ಅಂತೂ ಅವರದು ಅಸ್ವೈದಿಕ ವರ್ತನೆಯೆಂಬುದು ಖಂಡಿತವಾಗಿ, ಜೋಯಿಸರು ಅದರ ನಿಷೇಧವೆಂದು ಆ ದಿನವೇ ಪೂಜಾರಿಯನ್ನು ಮನೆಗೆ ಕರೆಸಿ ವಿಶ್ವನಾಥಯ್ಯನ ಮನೆಗೆ ಶ್ರಾದ್ಧಕ್ಕೆ ಹೋಗದಂತೆ ಎಚ್ಚರಿಕೆ ಕೊಟ್ಟಿದ್ದರು.

ಪದ್ಮೆಯು ಜೊತೆಗೆ ಒಬ್ಬ ಒಕ್ಕಲುಗಿತ್ತಿಯನ್ನು ಸಂಗಡ ಕರೆದುಕೊಂಡು ಪುರೋಹಿತರ ಮನೆಗೆ ಬಂದಳು. ವಿಶ್ವನಾಥಯ್ಯನೇ ತಮ್ಮನ್ನು ಕರೆಯಲು ಬರುವನೆಂದು ಜೋಯಿಸರ ತಿಳುವಳಿಕೆ. ಆ ಸಮಯ ಅವನೊಡನೆ ಏನೇನು ಹೇಳಬೇಕೋ ಅವನ್ನೆಲ್ಲ ಅವರು ಮೊದಲೇ ನಿರ್ಧರಿಸಿಕೊಂಡಿದ್ದಾರೆ. ಪದ್ಮೆಯನ್ನು ನೋಡಿದೊಡನೆಯೇ ಈಗ ಅವರ ನಿರ್ಧಾರ ಸಡಲಿಸಿ ಹೋಗಬೇಕೇ?

"ಯಾರು, ಪದ್ಮಾ? ಬಾ ಕುಳಿತುಕೋ. ಏನು? ಈ ಸಮಯ ಬಂದು ಬಿಟ್ಟೆಯಲ್ಲ." ಬಹಳ ನಯವಾಗಿ ಹೇಳಿದರು ಜೋಯಿಸರು.

"ಜೋಯಿಸರೇ, ನಾಳೆ ಅಜ್ಜನ ಶ್ರಾದ್ಧ. ಕರೆಯಲು ಬಂದೆ."

"ಯಾಕೆ ವಿಶ್ವನಾಥಯ್ಯ ಬರಬೇಕಿತ್ತಲ್ಲ? ನೀನೇಕೆ ಈ ತೊಂದರೆ ತೆಗೆದುಕೊಂಡೆ ತಾಯಿ."

"ನೋಡಿ ಪುರೋಹಿತರೇ, ನೀವು ಮಕ್ಕಳೊಂದಿಗರು. ನಿಮಗೂ ಗಂಡು–ಹೆಣ್ಣು ಎಲ್ಲಾ ಇವೆ. ನೀವು ಹೇಳಿದಿರೆಂದು ಅಪ್ಪ ಕರೆಯಲು ಹೋದಾಗ ಆ ಪೂಜಾರಿ ........"

" ಸಾಕು ಗೊತ್ತಾಯಿತು ಪದ್ಮಾ! ಅದೋ! ವ್ಯಸೂರಿನಲ್ಲಿ ಓದಿ ಕೊಂಡು ಬಂದಿದ್ದನಲ್ಲ ಅವಧಾನಿ. ಆ ಪುಣ್ಯಾತ್ಮ ನನಗೆ ಇಲ್ಲದ್ದು ಹೇಳಿ ಬುದ್ಧಿ ಭ್ರಮೆಯಾಗುವ ಹಾಗೆ ಮಾಡಿದ. ಅಲ್ಲ. ನಿಮ್ಮ ಮನೆಯಲ್ಲಿ ಯಾರೋ ವ್ಯಸೂರಿನ ಕಡೆಯವರಂತೆ! 'ಯಾರು ಆತ? ಏನವನ ಸಮಾಚಾರ."

ಪುರೋಹಿತರು ತಮ್ಮ ಶಂಕೆಯನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಹುಬ್ಬೇರಿಸಿ ಕೇಳಿದರು.

" ಅವರೋ? ಹೀಗೇ ಅಣ್ಣ ದಸರೆಗೆ ಹೋದಾಗ ಪರಿಚಯವಾಯಿ ತಂತೆ. ನಿಮ್ಮ ಧರ್ಮ-ಕರ್ಮಗಳಲ್ಲಿ ಕೈಹಾಕುವ ಸಾಮರ್ಥ್ಯ ಲೇಶವೂ ಅವ ರಲ್ಲಿಲ್ಲ. ಮನಸ್ವಾಸ್ಥ್ಯ ಚೆನ್ನಾಗಿಲ್ಲದೆ ನಾಲ್ಕಾರು ತಿಂಗಳಿನಿಂದ ಅಲ್ಲಲ್ಲಿ ಅಲೆ ಯುತ್ತಿದ್ದಾರೆ. ಅವರಂತಹ ನಿರುಪದ್ರವಿ ಪ್ರಾಣಿಯನ್ನು ನಾನೆಲ್ಲಿಯೂ ನೋಡಿಲ್ಲ. ಜೋಯಿಸರೇ, ಹಾ, ಸಾಯಂಕಾಲವಾಯಿತು ನಾನೀಗ ಹೋಗಬೇಕು."

ಪದ್ಮೆಯ ಆಗಿನ ಮುಖಭಾವ ನೋಡಿದವರಾರೂ ಅವಳೆದುರು ಬೇರೆ ಪ್ರಶ್ನೆಯನ್ನೇ ಎತ್ತುವಂತಿಲ್ಲ. ಯಾರಾದರೂ ಹಿರಿಯ ಆಲೋಚಕರು ಎದು ರು ಬಂದಾಗಲೆಲ್ಲ ಅವಳ ಮುಖ ಹಾಗೆ ಇರುವದು. ಆ ಸಮಯ ಆದಾವ ಚಮತ್ಕಾರವೋ! ಆಕ್ಷೇಪವೆತ್ತುವ ಉತ್ಸಾಹವೇ ಇಲ್ಲದಂತಾಗಿ ಬಿಡುತ್ತಿದ್ದೆ ಪೃಚ್ಛಕರಲ್ಲಿ. ಹಾ, ಒಂದು ಮಾತು. ತಂದೆ ವಿಶ್ವನಾಥಯ್ಯನೂ ವಿಧವೆಯರು ಕುಂಕುಮ ಹಚ್ಚಿಕೊಳ್ಳುವುದು, ಒಳ್ಳೊಳ್ಳೇ ಸೀರೆ ಉಡುವದು ಅಸಹ್ಯಾಳ ವೆಂದು ಹೇಳುವವ. ಆದರೂ ತನ್ನ ಮಗಳು ಪದ್ಮೆಗೆ ಅವೆಲ್ಲ ಮಾಮೂಲು ಎಂದೇ ಅವನ ಅಭಿಪ್ರಾಯವಾಗಿತ್ತು.

ಜೋಯಿಸರಿಗೆ ಶಂಕೆಗೆ ಆಸ್ಪದವೇ ಉಳಿಯಲಿಲ್ಲ! ಶ್ರೀನಾಥನ ಬಗ್ಗೆ ಕೂಡ ಹೆಚ್ಚು ವಿಚಾರ ಮಾಡುವುದಕ್ಕೆ ಈಗ ಪದ್ಮೆ ಅವಕಾಶ ಕೊಡಲಿಲ್ಲ. ಒಂದು ವಿಶಿಷ್ಟವಾದ ಅಭಿಪ್ರಾಯ ಇಟ್ಟುಕೊಳ್ಳಲು ತಕ್ಕುದಾದ ಅಂತಹ ಮಹತ್ವವೇನೂ ಶ್ರೀನಾಥನಲ್ಲಿ ಇಲ್ಲವೆಂಬಂತೆ ಆಕೆ ಮಾತಾಡಿದಳು. ಜೋಯಿ ಸರು ತಮಗೆ ಸಮಾಧಾನವಾಯಿತೆನ್ನುವ ಭಾವದಲ್ಲಿ ನಗುತ್ತ ಹೇಳಿದರು.

" ಆಯಿತು ತಾಯಿ, ನಾಳೆ ನಮ್ಮ ಗೋಪಾಲ ಬರುತ್ತಾನೆ ನಿಮ್ಮ ಅಜ್ಜನ ಶ್ರಾದ್ಧಕ್ಕೆ. ನನ್ನ ಮೈಯಲ್ಲಿ ಜಾಡ್ಯ. ಬೇರೇನೂ ತಿಳಿದುಕೊಳ್ಳಬೇಡ.

ಅಂದು ನಾನು ಪೂಜಾರಿಯೊಡನೆ ಹೇಳಿದ್ದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡವೆಂದು ವಿಶ್ವನಾಥಯ್ಯನಿಗೂ ಹೇಳು."

ಪದ್ಮೆ ಜೋಯಿಸರಿಗೆ ನಮಸ್ಕಾರ ಮಾಡಿ ಅಲ್ಲಿಂದ ಹೊರಬಿದ್ದಳು.

## ೧೩

ಅಂದು ಎರಡು ತಾಸು ರಾತ್ರಿ ಇರುವಾಗಲೇ ಪದ್ಮೆಯೂ ಪದ್ಮೆಯ ತಾಯಿಯೂ ಹಾಸಿಗೆಯಿಂದ ಎದ್ದರು. ಸಾವಿತ್ರಿಯು ಹೊರಗೆ ಆದ್ದರಿಂದ ಎಲ್ಲ ಕೆಲಸವನ್ನೂ ಅವರಿಬ್ಬರೇ ಮಾಡಿಕೊಳ್ಳಬೇಕಾಗಿದೆ. ನೆರೆಯುವರಾರೂ ಅಡಿಗೆಗೆ ನೆರವಾಗಲಿಲ್ಲ. ಒಂದಿಲ್ಲೊಂದು ನೆವ ಹೇಳಿ ಎಲ್ಲ ತಪ್ಪಿಸಿಕೊಳ್ಳುವವರೇ. ಆದರೇನು? ಶ್ರಾದ್ಧವು ಯಥಾಸಾಂಗವಾಗಿ ನೆರವೇರಿತು. ಆಮಂತ್ರಿತ ಬ್ರಾಹ್ಮಣರು ಸಕಾಲಕ್ಕೆ ಬರದೆ ವಿಶ್ವನಾಥಯ್ಯ ಆತಂಕಪಟ್ಟುಕೊಳ್ಳುವುದನ್ನು ನೋಡಿ ತೃಪ್ತಿಹೊಂದಬೇಕೆಂದಿದ್ದ ಊರಿನ ವಿಘ್ನಸಂತೋಷಿಗಳಿಗೆ ತುಂಬ ಅಸಮಾಧಾನ. ಅದನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಆ ಜನ ಹಿರಿಯರ ಪ್ರಸಾದವೆಂದು ಮರುಪಙ್ಕ್ತಿಯಲ್ಲಿ ಊಟಕ್ಕೆ ಕುಳಿತಾಗ ಬಹಳ ಶ್ರದ್ಧೆಯನ್ನು ತೋರಿದರು. ಮೊದಲು ಮುಖ ಅಡ್ಡ ಹಾಕಿದವರೆಲ್ಲ ಪ್ರಸಾದ ಗ್ರಹಣಕ್ಕೆ ವ್ಯತ್ಯಯ ತಂದುಕೊಳ್ಳಲಿಲ್ಲ. ಅಂದು ೫೦–೬೦ ಜನರಿಗೆ ತಾಯಿ-ಮಗಳು ಇಬ್ಬರೇ ಅಡಿಗೆ ಮಾಡಿ ಬಡಿಸಿದರು. ಲಾಡು-ಅಂಬೋಡೆ ಖಾದ್ಯ ಬೇರೆಯೋ! ಕೇಳುವದೇನು? ಎಲ್ಲ ಪದ್ಮೆಯನ್ನು ಹೊಗಳುವವರೇ. ಪುರೋಹಿತ ಪುತ್ರರಾದ ಗೋಪಾಲ ಜೋಯಿಸರೂ ಪದ್ಮೆಯ ಅಡಿಗೆ, ಉಪಚಾರ, ಅಚ್ಚುಕಟ್ಟುತನ ಎಲ್ಲವನ್ನೂ ಮನಸಾರೆ ಬಣ್ಣಿಸಿದ್ದಾರೆ. ಅಂದಿನ ಅವರ ಭಾವ, ಆ ಗಾಂಭೀರ್ಯ, ಆ ರಂಗು ಎಲ್ಲವೂ ತೀರ ಅಸ್ವಾಭಾವಿಕವೆನ್ನುವ ಮಟ್ಟಕ್ಕೆ ಬಂದಿದೆ.

ಇಲ್ಲಿ ಗೋಪಾಲ ಜೋಯಿಸರ ಬಗ್ಗೆ ಸ್ವಲ್ಪ ಹೇಳಬೇಕು. ಹೃಷ್ಟ-ಪುಷ್ಟವಾದ ಶರೀರ. ಒಳ್ಳೇ ಕಬ್ಬಿಣದ ಗುಂಡಿನ ಹಾಗೆ ಗಟ್ಟಿಮುಟ್ಟಾದ ಆಸಾಮಿ. ಮೇಲಿನ ಎರಡು ಹಲ್ಲುಗಳು ತುಟಿಯನ್ನು ಮಿಕ್ಕಿ ಮುಂದೆ ಹಾಯ್ದಿರುವುದರಿಂದ ವಿದ್ರೂಪವಾಗಿ ಕಾಣುವ ಮೋರೆ. ನಿರಂತರವೂ ಹುಳ ತುಕೊಂಡಂತಿದ್ದ ಕಣ್ಣು ಆ ಮೋರೆಯ ಭಯಾನಕತೆಯನ್ನು ಇನ್ನಷ್ಟು ಹೆಚ್ಚಿಸಿದೆ. ಕಪ್ಪಾದ ಮೈ ಬೆಳೆದುಕೊಂಡಂತೆ ಬುದ್ಧಿ-ಮನಸ್ಸು ಬಲಿತಿಲ್ಲ. ಸಂಸ್ಕೃತ

ಗಂಧವಿಲ್ಲವಾದರೂ ಶ್ರಾದ್ಧ ಪುಷ್ಟಿಗಳಲ್ಲಿ ಪ್ರಯೋಗವಾಕ್ಯ ಹೇಳುವಾಗ ತಮಗೆಲ್ಲ ಗೊತ್ತಿದೆ ಎಂಬ ಆಡಂಬರ ತೋರಿಸುತ್ತಾರೆ.

ಜೋಯಿಸರು ಶ್ರಾದ್ಧದ ಊಟದಿಂದಾದ ಆಯಾಸ ಪರಿಹರಿಸಿಕೊಂಡು ಹಾಸಿಗೆಯಿಂದ ಎದ್ದಾಗ ಇನ್ನೂ ತಾಸು ಹೊತ್ತು ಇತ್ತು. ಆಗ ಒಂದಿಷ್ಟು ಕಾಫಿ ಸೇವೆಯಾಯಿತು. ಪೂಜಾರಿ ಮನೆಯಲ್ಲಿ ಕೆಲಸವಿದ್ದುದರಿಂದ ಆಗಲೇ ಹೊರಟುಹೋಗಿದ್ದ. ಗೋಪಾಲ ಜೋಯಿಸರೂ "ಈಗ ವೇಳೆಯೆಷ್ಟಿದೆ? ಮನೆಗೆ ಹೋಗಲೇ ಬೇಕು." ಎಂದು ವಿಶ್ವನಾಥಯ್ಯನ ಕಡೆಗೆ ನೋಡಿದರು. ಆತ "ನಾಳೆ ಹೋದರಾಗುವದಿಲ್ಲವೇ? ಸಾಯಂಕಾಲ ಇಲ್ಲಿಯೇ ಉಳಿಯಬಹುದಲ್ಲ!" ಎಂದು ಔಪಚಾರಿಕವಾಗಿ ಕೇಳಿದ.

"ಹೌ, ತುದೀ ಮನೆ ರಾಮಯ್ಯನೊಡನೆ ಮಾತಾಡುವದಿದೆ. ಈಗ ಅವನನ್ನು ಕಂಡು ಬರುತ್ತೇನೆ. ಅಂಥ ಸಂದರ್ಭ ಬಂದರೆ ಸಾಯಂಕಾಲ ನಿಮ್ಮ ಮನೆಯಲ್ಲಿಯೇ ಆಗುವದು."

ಅನುಗ್ರಹವನ್ನು ಬೀರುವ ನಗೆಯನ್ನು ನಗುತ್ತ ಗೋಪಾಲ ಜೋಯಿಸರು ಪದ್ಮೆಯಲ್ಲಿ ತಮ್ಮ ಮಾತಿನ ಪರಿಣಾಮವನ್ನು ಕಂಡುಕೊಳ್ಳಲು ಆ ಕಡೆ ತಮ್ಮ ಮೆಳ್ಳಗಣ್ಣು ಚೆಲ್ಲಿದರು. ಆಕೆಗೆ ಅದರ ಲಕ್ಷ್ಯವೇ ಇಲ್ಲವೇನೋ? "ಹಾ ಇದೂ ಒಂದು ಬಿನ್ನಾಣ" ಎಂದು ತಮ್ಮೊಳಗೇ ಅಂದುಕೊಳ್ಳುತ್ತ ಅವರು ರಾಮಯ್ಯನನ್ನು ಕಾಣಲು ಎದ್ದರು.

## ೧೪

ಅದಾವುದೋ ಒಂದು ದುರ್ನಿಮಿಷದಲ್ಲಿ ಮಾಡಿದ ಕುಕೃತ್ಯದಿಂದಾಗಿ ಪ್ರಾಯಕ್ಕೆ ಬಂದ ಹೆಣ್ಣುಮಕ್ಕಳೆಲ್ಲ ಗೋಪಾಲ ಜೋಯಿಸರನ್ನು ಕಂಡರೆ ಹೆದರುವಂತಾಗಿತ್ತು. ತಮ್ಮಷ್ಟಕ್ಕೆ ಅವರು ಎಲ್ಲಿಯಾದರೂ ಹಾದೀ ಹಿಡಿದು ಹೋಗುತ್ತಿದ್ದರೆ ಆಸುಪಾಸಿನಲ್ಲಿದ್ದ ಹೆಂಗಸರು ಅವರ ಬಗ್ಗೆ ಏನೇನೋ ಯೋಚಿಸಿಕೊಂಡು ಕಂಡವರೆದುರಿಗೆ ಎಂತೆಂತಹದೋ ಮಾತು ಹೇಳುವದುಂಟು. ಅಂತೂ ಹೆಣ್ಣಿನ ವಿಚಾರದಲ್ಲಿ ಅವರ ನಡತೆ ಒಳ್ಳೆಯದಲ್ಲವೆಂಬುದು ಖಂಡಿತವಾಗಿದೆ. ಪುರೋಹಿತರ ಮಕ್ಕಳಾದುದರಿಂದ ಎದುರು ಯಾರೂ ಏನೂ ಹೇಳುವಂತಿಲ್ಲ.

ಗೋಪಾಲ ಜೋಯಿಸರು ಸಾಯಂಕಾಲ ವಿಶ್ವನಾಥಯ್ಯನ ಮನೆಯಲ್ಲಿಯೇ ಉಳಿಯುವ ಅನಿವಾರ್ಯ ಪ್ರಸಂಗ ತಂದುಕೊಳ್ಳಲು ಹೆಚ್ಚು ಕಷ್ಟಪಡಬೇಕಾಗಲಿಲ್ಲ. ರಾಮಯ್ಯನೊಡನೆ ಏನು ಮಾತಾಡುವದಿತ್ತೋ ಅವರಿಗೇ ಗೊತ್ತು! ಅಂತೂ ಸಾಯಂಕಾಲದ ವಸ್ತಿ ವಿಶ್ವನಾಥಯ್ಯನಲ್ಲಿಯೇ ಬಿತ್ತು. ಶ್ರೀನಾಥನಿಗೆ ಶ್ರಾದ್ಧದಲ್ಲಿ ಮಾಹಿತಿಯಿಲ್ಲದ್ದರಿಂದ ಅವನು ವಿದ್ವಾಂಸನಲ್ಲವೆಂಬುದನ್ನು ಅದಾಗಲೇ ಗ್ರಹಿಸಿದ್ದಾರೆ. ವೈಯ್ಯಲ್ಲಿ ಕೂಡ ತಮ್ಮ ಹಾಗೆ ಬೆಳೆದಿಲ್ಲ. ಕುತೂಹಲಪಟ್ಟುಕೊಳ್ಳುವಂತಹದೇನೂ ಅತನಲ್ಲಿಲ್ಲ. ಮಾತಿಗೆ ಬೇರೆ ಜನ ಕಾಣದ್ದರಿಂದ ಅವನೊಡನೆ ಜೋಯಿಸರು ತಾಸೆರಡು ತಾಸು ಮಾತಾಡಿದರು ಅಷ್ಟೇ. ಶ್ರೀನಾಥನು ಮಾತಾಡಿದ್ದು ಅಷ್ಟಕ್ಕಷ್ಟೇ! ಅವರು ಹೇಳಿದ್ದೇ ಹೇಳಿದ್ದು. ಎಲ್ಲದಕ್ಕೂ ಶ್ರೀನಾಥ ಹೂಂಗುಡುತ್ತಾನೆ. ಸಂಪ್ರದಾಯಶೀಲರಾದ ತಮ್ಮ ತಾತ, ಮುತ್ತಾತಂದಿರ ವಿದ್ವತ್ತು, ಜನರಲ್ಲಿ ತಮ್ಮ ಬಗ್ಗೆ ಇರುವ ಆದರ, ತಾವು ಓದಿಕೊಂಡ ವಿದ್ಯೆ; ಇವೆಲ್ಲ ಬಿಡಿಸಿ ಬಿಡಿಸಿ ಹೇಳಿದರು ಜೋಯಿಸರು. "ಮಠದ ಸ್ವಾಮಿಗಳು ಜೋಯಿಸರ ಅಜ್ಜನ ವಿದ್ವತ್ತಿಗೆ ಮೆಚ್ಚಿ ಶಾಲುಜೋಡಿ ಹೊದೆಸಿದ್ದು, ತಪಃಪ್ರಭಾವಯುತರಾದ ಆ ಸ್ವಾಮಿಗಳು ಆರಾಧನೆಯ ಸಮಯ ಎರಡು ಕೈಗಳಲ್ಲಿ ಹಾಗೂ ಕಂಕಳುಗಳ ಮತ್ತು ಮೊಣಕೈ-ಮೊಣಕಾಲುಗಳ ಸಂದುಗಳಲ್ಲಿ ಇನ್ನು ಕುತ್ತಿಗೆಯ ಕೆಳಗೆ ಹೀಗೆ ಒಂದೊಂದಾಗಿ ಒಂಭತ್ತು ತೆಂಗಿನ ಕಾಯಿಗಳನ್ನು ಸಿಕ್ಕಿಸಿಕೊಂಡು ಅವನ್ನೆಲ್ಲ ಒಂದೇ ಬಾರಿ ಅವುಚಿ ಹೋಳು ಮಾಡುವುದು; ಇವು ಜೋಯಿಸರು ಹೇಳಿದ್ದರಲ್ಲಿ ಮುಖ್ಯ ಸಂಗತಿಗಳಾಗಿವೆ.

ಶ್ರೀನಾಥನು ಮನೆಯವನಂತೆಯೇ ಇದ್ದುದರಿಂದ ಅತನ ಹಾಸಿಗೆ-ಹೊದಿಕೆಗಳ ಬಗ್ಗೆ ಇತರರು ಗಮನ ಕೊಡಬೇಕಾಗಿರಲಿಲ್ಲ. ಮಲಗುವ ವೇಳೆಯಾದ್ದರಿಂದ ಅತ ಅಲ್ಲಿಯೇ ಹೊರಜಗುಲಿಯಲ್ಲಿ ಮಂಚದ ಮೇಲೆ ಒರಗಿದ. ಮುಟ್ಟಾದ ಸಾವಿತ್ರಿ ಹೇಡಿಗೆಯ ಮೇಲೆ ಪವಡಿಸಿದ್ದಾಳೆ. ಗೋಪಾಲ ಜೋಯಿಸರಿಗೆ ನಡುಮನೆಯಲ್ಲಿ ಹಾಸಿಗೆ ಹಾಸಿತ್ತು. ಅವರು ಇಂದು ಭೂಮಿಯ ಮೇಲಿಲ್ಲ ಕಾರಣವೆಂದರೆ ಪದ್ಮೆಯೇ ತನ್ನ ಕೈಮುಟ್ಟಿ ಅವರ ಹಾಸಿಗೆಯನ್ನು ಸಜ್ಜುಗೊಳಿಸಿದ್ದಾಳೆ. ಹೇಗೋ, ಅಂದಿನ ನಡೆನುಡಿಯಲ್ಲೆಲ್ಲ ತಮ್ಮ ಮೇಲೆ ಅವಳಿಗೆ ಮನಸ್ಸು ಕೂತಿದೆಯೆಂದು ಜೋಯಿಸರ ಗ್ರಹಿಕೆಯಾಗಿ ಹೋಗಿದೆ. ಅವರಿಂದು ಪರಮ ಧನ್ಯರು.

ಜೋಯಿಸರ ಎಷ್ಟೋ ಜನ್ಮಗಳ ಪುಣ್ಯ ಇಂದು ಫಲಿಸಲಿದೆ. ಪದ್ಮೆ ತಾನಾಗಿಯೇ ಎದ್ದು ಬಂದು ತನ್ನ ಮೈ ಅಲುಗಿಸುವಳೆನ್ನುವ ವರೆಗೆ ಅವರ ಭಾವನೆ ಬೆಳೆದಿದೆ. ಆದರೇನು? ತಾಸಾಯಿತು, ಎರಡು ತಾಸಾಯಿತು, ಆರು ತಾಸು ರಾತ್ರಿ ದಾಟಿದರೂ ಪದ್ಮೆಯು ಸುಳಿವಿಲ್ಲ. "ಅಬ್ಬಾ ಏನು ಧಗೆ ಹುಃಶ್". ಅವರು ಹಾಸಿಗೆಯಲ್ಲಿ ಬೆಂಕಿಯ ಮೇಲೆ ಮಲಗಿದಂತೆ ಬೇಯುತ್ತಿದ್ದಾರೆ. ಹೊರಗೆ ನಡೆಯುವ ಪ್ರತಿಯೊಂದು ಸದ್ದೂ ಅವರ ಎದೆಯಲ್ಲಿ ಸೃಷ್ಟಿ-ಪ್ರಳಯಗಳ ಅನಂತವಾದ ತಾಂಡವವನ್ನೆಬ್ಬಿಸುತ್ತದೆ. ಆ ಬವಣೆ ಹೇಳತೀರುವಂತಿಲ್ಲ.

ಪದ್ಮೆಯು ದೇವರ ಮನೆಯಲ್ಲಿ ಒಂದು ಚಾಪೆಯ ಮೇಲೆ ಒರಗಿದ್ದಳು. ಹಗಲೆಲ್ಲ ದುಡಿದುಡಿದು ಹೈರಾಣಾಗಿದ್ದರಿಂದ ಅವಳಿಗೆ ಗಾಢ ನಿದ್ರೆ ಬಂದಿದೆ. ಎಂಟೊಂಬತ್ತು ತಾಸು ರಾತ್ರಿಯು ಸುಮಾರಿರಬಹುದು. ಗಂಡಸಿನ ಕರ್ಕಶ ಹಸ್ತಸ್ಪರ್ಶದಿಂದಾಗಿ ಒಮ್ಮೆಲೇ ಆಕೆ ಎಚ್ಚತ್ತಳು. ದೇವರ ನಂದಾದೀಪದ ನಸುಬೆಳಕಿನಲ್ಲಿ ಎದುರಿಗೆ ಎದೆ ಧಡಕ್ ಧಡಕ್ ಎಂದು ಬಡಿದುಕೊಳ್ಳುತ್ತಿದ್ದಂತೆ ಕಟ್ಟುಸಿರು ಬಿಡುವ ಗೋಪಾಲ ಜೋಯಿಸರು. ಆ ಹೊಲೆ ಮೋರೆ ನೋಡುವಂತಿಲ್ಲ. ಪದ್ಮೆಗೆ ಒಮ್ಮೆ ಚೀರಬೇಕೆಂದೆನಿಸಿತು. ಆದರೆ ಆ ಅಭಿಮಾನಿನಿಯಾದ ಹೆಣ್ಣು ಹೇಗೋ ತನ್ನನ್ನು ಸಂಭಾಳಿಸಿಕೊಂಡು ಜೋಯಿಸರ ಕಪಾಳಕ್ಕೆ ರಪ್ಪನೆ ಒಂದು ಬಿಗಿದಳು. ಹಾಗೆಯೇ ಹತ್ತಿರದ್ದ ದೀವಿಗೆಯನ್ನು ದೊಡ್ಡದಾಗಿ ಹೊತ್ತಿಸಿದಳು. 'ಆಕೆಯ ಕಣ್ಣು ಕಿಡಿ ಕಾರುತ್ತಿವೆ. ಇನ್ನಾವ ಉತ್ಪಾತ ನಡೆಸುವಳೋ' ಎಂಬ ಭೀತಿಯಿಂದ ಜೋಯಿಸರು ಬಾಯ್ಬಿಡದೆ ಉಸಿರು ಬಿಗಿಹಿಡಿದುಕೊಂಡು ಅಲ್ಲಿಂದ ಕಾಲ್ದೆಗೆದರು. ಬೆಳಗಾಗುವುದಕ್ಕೆ ಇನ್ನೂ ರಾತ್ರಿಯಿದೆ. ಪದ್ಮೆ ಕೈಯಲ್ಲಿ ದೀಪ ಹಿಡಿದುಕೊಂಡು ಹೊರಜಗುಲಿಗೆ ಬಂದು ಅಲ್ಲಿಯೇ ಹಾಸಿಗೆ ಹಾಸಿಕೊಂಡಳು. ಬಾಗಿಲು ತೆರೆದ ಸದ್ದಿಗೆ ವಿಶ್ವನಾಥಯ್ಯ ಎಚ್ಚತ್ತ. "ಯಾಕೆ ಪದ್ಮಾ ಏನಾಯಿತು?" ಕುತ್ತಿಗೆಯನ್ನು ತುಸು ಎತ್ತರಿಸಿ ಆತ ಹಾಸಿಗೆಯಿಂದಲೇ ಕೇಳಿದ.

"ಏನಿಲ್ಲ ಅಲ್ಲಿ ಇರಿವೆ ಸಾಲಿಟ್ಟಿವೆ. ಅದಕ್ಕಾಗಿ ಹೊರಗೆ ಬಂದೆ ನೀನು ನಿದ್ದೆ ಮಾಡು."

ಯಾವ ದುರ್ಘಟನೆಯೂ ನಡೆಯಲಿಲ್ಲವೆಂಬಂತೆ ಪದ್ಮೆ ತೀರ ಸಹಜ ಸ್ವರದಲ್ಲಿ ಹೇಳಿದಳು.

ಆ ರಾತ್ರೆ ಗೋಪಾಲ ಜೋಯಿಸರ ಅವಸ್ಥೆ ದೇವರೇ ಬಲ್ಲ! ಇನ್ನೂ ನಸುಕು ಹರಿಯುತ್ತಿದ್ದಂತೆಯೇ ಅವರು ಎದ್ದು ಹಾಸಿಗೆಯಲ್ಲಿಯೇ ಇದ್ದ ವಿಶ್ವನಾಥಯ್ಯನಿಗೆ, "ನಾನೀಗ ಹೊರಟೆ, ಕೆಲಸವಿದೆ." ಎಂದು ಹೇಳಿ ಅಲ್ಲಿಂದ ಕಾಲು ಕಿತ್ತರು. ಆ ಮಾತು ಮನೆಯ ಯಜಮಾನನಿಗೆ ಕೇಳಿಸಿತೋ ಇಲ್ಲವೋ! ಸ್ವಲ್ಪ ದೂರದಲ್ಲಿ ಪದ್ಮೆ ಕಾಲು ಝಾಡಿಸಿಕೊಂಡ ಸದ್ದು ಮಾತ್ರ ಚೆನ್ನಾಗಿ ಕೇಳಿಸಿರಬೇಕು.

ಅಷ್ಟು ನಸುಕಿನಲ್ಲಿಯೇ ಪುರೋಹಿತ ಪುತ್ರರು ತನ್ನ ಮನೆಗೆ ಬಂದುದನ್ನು ನೋಡಿ ಪೂಜಾರಿ ಚಕಿತನಾದ. ರಾತ್ರಿಯೆಲ್ಲ ನಿದ್ರೆಯಿಲ್ಲದೆ ಆಯಾಸಗುಂದಿದ ಜೋಯಿಸರ ಆ ವಿದ್ರೂಪವಾದ ಮೋರೆ ಅದೇ ಮಹಾಪಾತಕವನ್ನು ಮಾಡಿ ಬಂದವನ ಭಂಗಿಯನ್ನು ತಾಳಿತ್ತು.

"ಇದೇನು ಜೋಯಿಸರೇ, ಇಷ್ಟು ಬೇಗ ಬಂದದ್ದು?".

"ಹಾಳಾಗಲಿ ಭಟ್ಟರೇ! ನಿನ್ನೆ ನೀವೂ ನೋಡಿರಬಹುದಲ್ಲ ಆ ವಿಶ್ವನಾಥಯ್ಯನ ಮಗಳ ಥಾಟು-ಥೀಟು. ನನಗೇಕೆ ಅಲ್ಲಿ ಉಳಿಯುವ ಮನಸ್ಸು ಬಂತೋ. ಥುತ್ ನಾಚಿಕೆ ಇಲ್ಲದವಳು. ಅಲ್ಲ! 'ನಿಮಗೆಲ್ಲಿ ಹಾಸಿಗೆ ಹಾಕಲಿ' ಎಂದು ಕೇಳಬೇಕೆ ಆ ಬಜಾರಿ. ಯಾರೊಡನೆ ಹೇಗೆ ಮಾತಾಡಬೇಕು ಎಂಬುದು ಗೊತ್ತಿದ್ದರೆ ತಾನೇ? ಹಾ ಒಂದು ಮಾತು. ಆ ಆಕೃತಿ ನೋಡಿದರೆ ಯಾವ ಋಷಿಕುಮಾರನ ಸಂಯಮವೂ ಉಳಿಯುವಂತಿಲ್ಲ ಭಟ್ಟರೇ! ನನಗೆ ಇಂಥ ಸಂದರ್ಭ ಅಡಿಗಡಿಗೆ ಬರುವುದು. ನಾನೋ? ಮನುಷ್ಯರಲ್ಲಿ ಸಾಮಾನ್ಯವಾಗಿ ಇರುವುದಕ್ಕಿಂತ ಹೆಚ್ಚು ಸಂಯಮವನ್ನು ಸಾಧಿಸಿದವ. ಅದಕ್ಕಾಗಿ ಬದುಕಿಕೊಂಡಿದ್ದೇನೆ. ರಾತ್ರೆ ಹೇಗೆ ಕಳೆದೆನೋ. ಇನ್ನೇದಾದರೂ ಆ ಸೂಳೆ ನನ್ನ ಸುದ್ದಿಗೆ ........"

ಜೋಯಿಸರ ಮಾತು ಮುಗಿಯುವಂತೆಯೇ ಇಲ್ಲ. ಆ ರಾತ್ರೆ ಅವರೆಷ್ಟು ಭಂಗಪಟ್ಟಿರಬಹುದೆಂದು ನೆನೆದು ಪೂಜಾರಿಗೆ ನಗೆ ತಡೆಯಲಾರದಂತಾಗಿತ್ತು. ಈಗಂತೂ ಅಸಂಬದ್ಧವಾದ ಅವರ ಆ ಡಾಂಭಿಕ ಬಡಬಡಿಕೆಯನ್ನು ಕೇಳಿ ಸುಮ್ಮನಿರಲಾರದೆ ಆತ "ನಿಲ್ಲಿ, ಒಳಗೆ ಕಾಫಿಗೆ ಹೇಳುತ್ತೇನೆ" ಎಂದು ಒಳಮನೆಗೆ ಹೋಗಿ ಹೊಟ್ಟೆ ಹುಣ್ಣಾಗುವ ಹಾಗೆ ನಕ್ಕ.

* * * * *

ವಿಶ್ವನಾಥಯ್ಯ ಕಾಫಿ ಕುಡಿಯುವಾಗ ಹೇಳಿದ. "ಪುರೋಹಿತರೇಕೆ ಅಷ್ಟು ನಸುಕಿನಲ್ಲಿ ಹೊರಟುಹೋದರೋ? ಒಂದು ಕ್ಷಣ ತಡೆದಿದ್ದರೆ ಕಾಫಿಗೆ ಆಗುತ್ತಿತ್ತು."

"ನಿನ್ನ ಕಾಫಿಗಾಗಿ ಅವರು ತಮ್ಮ ಕೆಲಸ ಬಿಟ್ಟಿರಬೇಕೋ? ಅವಸರ ವಿದೆಯೇನೋ ಅದಕ್ಕಾಗಿ ಹೋದರು."

ಪದ್ಮೆಯು ಸಿಡುಕಿನಿಂದ ಹೇಳಿದಳು. ಆ ಅಬೋಧ ವಿಶ್ವನಾಥಯ್ಯನಿಗೆ ಅವಳ ಮಾತಿನಲ್ಲಿ ಅಡಗಿರುವ ವ್ಯಂಗ ಗೊತ್ತಾಗಲಿಲ್ಲ.

೧೫

ವಿಶ್ವನಾಥಯ್ಯನ ನೆರೆಮನೆಯೆಂದರೆ ಆ ಊರ ಹೆಂಗುಸರೆಲ್ಲ ಸೇರುವ ಸ್ಥಳ. ಅಲ್ಲಿಯ ಹೊರಜಗುಲಿಯೇ ಮಹಿಳೆಯರ ಸಭಾಂಗಣ. ನಿತ್ಯವೂ ಒಂದು ನಿರ್ದಿಷ್ಟವಾದ ವೇಳೆಯಲ್ಲಿ ಅಂದರೆ ಬೆಳಗಿನ ಕೆಲಸ-ಬೊಗಸೆಗಳೆಲ್ಲ ಮುಗಿದು ಹೆಣ್ಣು ಮಕ್ಕಳು ಹೆಳಲು ಹಾಕಿಕೊಳ್ಳುವ ಹೊತ್ತಿಗೆ ಅಲ್ಲಿ ಸಭೆ ನೆರೆಯುವದು. ಹಳ್ಳಿಯ ಹೆಂಗಸರೆಂದ ಮಾತ್ರಕ್ಕೆ ಅಲ್ಲಿ ಒಂದು ವ್ಯವಸ್ಥೆ-ರೀತಿ ಇಲ್ಲವೆಂದು ಹೇಳಲಾಗುವದಿಲ್ಲ. ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಅಲ್ಲಿಯೂ ಒಂದು ತರಹದ ಕ್ರಮಬದ್ಧತೆ ಕಂಡುಬರುವುದು. ತಲೆ ಬಾಚಿಸಿಕೊಳ್ಳುವುದರಿಂದ ಆರಂಭವಾಗಿ ಹೂವಿನ ದಂಡೆ ಮುಡಿವುದು, ರವಿಕೆಗೆ ಕಸೂತಿ ಹಾಕುವುದು, ಹೊಸ್ತಿಲಲ್ಲಿ ಬರೆದ ರಂಗವಲ್ಲಿ ಸರಿಯಾಗಿದೆಯೇ ಎಂದು ನೋಡುವುದು, ಇವೆಲ್ಲ ಕಾರ್ಯಕ್ರಮಗಳು ಯಥಾವತ್ತಾಗಿ ನಡೆಯುತ್ತಿವೆ ಅಲ್ಲಿ. ಸಭೆಯೆಂದ ಮೇಲೆ ಅದರ ಅಂಗವಾಗಿ ಕಲಾಪ್ರದರ್ಶನ ನಡೆಯುವದೊಂದು ವಿಶೇಷವಲ್ಲವೇ? ಮಂಗಲೋತ್ಸವದ ದಿವಸಗಳು ಹತ್ತಿರ ಬಂದಾಗ ಹೆಣ್ಣುಮಕ್ಕಳು ಹಾಡು ಹೇಳಿಸಿಕೊಳ್ಳುವ ಸ್ಥಳವೂ ಇದೇ ಸರಿ. ಸಂಗೀತ ಕಛೇರಿಗೂ ಅವಕಾಶವಿದ್ದರೆ ಅದೊಂದು ಹೆಚ್ಚಿನ ಆಕರ್ಷಣೆಯಲ್ಲವೇ?

ಈ ಸಭೆಗಾಗಿ ಅಧ್ಯಕ್ಷರನ್ನು ಆರಿಸುವದಿಲ್ಲವಾದರೂ ಸಧವೆ, ವಿಧವೆ, ಚಿಕ್ಕವಳು, ಮುದುಕಿ ಇತ್ಯಾದಿ ತಾರತಮ್ಯವಿಟ್ಟುಕೊಳ್ಳದೆ ಯಾರು ಮೊದಲು ಹಿರಿಯತನದ ಮಾತು ಆಡುತ್ತಾರೋ, ಅವರಿಗೇ ಆಯಾ ದಿನದ ಸಭೆಯಲ್ಲಿ ಹೆಚ್ಚಿನ ಮನ್ನಣೆ ತೋರುತ್ತಾರೆ. ಅಲ್ಲಿ ಎಲ್ಲರೂ ಮಾತಾಡುವವರು. ಎಲ್ಲರೂ ಕೇಳುವವರು.

ಇನ್ನು ಅಲ್ಲಿ ಚರ್ಚಿಸಲ್ಪಡತಕ್ಕ ವಿಷಯ ಒಂದೇ! ಎರಡೇ!! ಅಡಿಗೆ-ಆಚಾರ-ವಿದ್ಯೆ-ವೇಷಭೂಷಣ ಹೀಗೆಲ್ಲ ಶುರುವಾಗಿ "ಬಿಳಿ ಜನರು ಸಮುದ್ರದಲ್ಲಿ ಬಾಂಬು ಮಾಡುತ್ತಾರೆ" ಎಂಬ ವೈಜ್ಞಾನಿಕ ಕೃತಿಗಳ ವಿವರಣೆಯ ವರೆಗೂ ಮುಂದರಿಯುತ್ತಿದೆ ಇಲ್ಲಿಯ ಮಾತು. "ಮಾನವ ಸಂಸ್ಕೃತಿಯ ಕ್ರಮ ವಿಕಾಸ" ಎಂಬ ವಿಷಯದ ಮೇಲೆ ವ್ಯಾಖ್ಯಾನ ಮಾಡಬೇಕೆನ್ನುವವರು ಒಂದೆರಡು ದಿನದ ಮಟ್ಟಿಗೆ ಈ ಸಭೆ ನೋಡಿದರೆ ತುಂಬಾ ಸಾಮಗ್ರಿ ದೊರಕಿಸಬಹುದು.

ಸಭೆಯಲ್ಲಿ ಬರುವ ಮಾತಿನ ಧಾಟಿ ಸ್ವಲ್ಪ ಹೇಳಬೇಕು.

"ಈಗಿನ ಸೋಗಲಾಡಿಯರ ಒನಪು-ಒಯ್ಯಾರ ನಾನರಿಯೆ. ಎರಡು ಮಕ್ಕಳನ್ನು ಹೆರುವವರೆಗೂ ನಮ್ಮ ಗಂಡಸರು ನನ್ನೊಡನೆ ಮಾತಾಡಿದ್ದೇ ಇಲ್ಲ"

ಓದಿದವನೆಂದು ಹೇಳಿಕೊಳ್ಳುವ ಗಂಡನುಳ್ಳ ಗರತಿಯೊಬ್ಬಳ ಮಾತು ಈ ತರಹದ್ದಾಗಿದ್ದರೆ ಇನ್ನೊಬ್ಬಳದು ಇನ್ನೊಂದು ರೀತಿ. "ನಮ್ಮ ಕಾಲದಲ್ಲಿ ಹಾಗೆಲ್ಲ ನಡೆಯಿತೂ ಅಂತ ಈಗಿನ ಹುಡುಗಿಯರು ಕೇಳುತ್ತಾರೆಯೇ? ನನ್ನ ಸರಸೂ-ಶೋಭನವಾಗಿ ನಾಲ್ಕು ತಿಂಗಳು ಹೋಗಲಿಲ್ಲ ಈಗಲೇ ಗಂಡನಿಗೆ ಸ್ವಲ್ಪವೂ ಹೆದರದೆ ಕಂಡದ್ದನ್ನು ಎದುರೆದುರೇ ಧಡ ಧಡ ಹೇಳಿಬಿಡುತ್ತಾಳೆ. ನಾನು ಬೈತಲೆ ತೆಗೆದರೆ ಅವಳಿಗೆ ಆಗದು. ಅವಳು ಹೆರಳು ಹಾಕಿಕೊಳ್ಳುವ ಬಗೆ ನಮಗೆ ತಿಳಿಯದು"

ತನ್ನ ಮಗಳು ಹೆಚ್ಚಿನ ಸುಂದರಿಯೆಂದು ತಿಳಿದಿರುವ ತಾಯಿಯೊಬ್ಬಳು ಹೇಳುವ ಮಾತಿದು.

ಇಂಥ ಸಂಭಾಷಣೆಯಿಂದಾಗಿ ಹೆಂಗುಸಿಗೆ ಗುಣ ಯಾವುದು ಅವಗುಣ ಯಾವುದು ಎಂಬುದನ್ನು ನಿರ್ಧರಿಸುವುದು ಕಷ್ಟ. ಆದರೊಂದು "ವಿಧವೆಯಾದ ಹೆಂಗಸು ಕುಂಕುಮ ಇಟ್ಟುಕೊಳ್ಳುವುದು ಅವಲಕ್ಷಣ" ಎಂಬ ಮಾತಿಗೆ ಮಾತ್ರ ಇನ್ನೂ ತನಕ ಈ ಸಭೆಯಲ್ಲಿ ಭಿನ್ನಾಭಿಪ್ರಾಯ ಬಂದಿಲ್ಲ.

ಮೊದಮೊದಲು ಪದ್ಮೆಯೂ ಈ ಕೂಟದಲ್ಲಿ ಸೇರುತ್ತಿದ್ದಳು. ಮೇಲಿನ ಮಾತಿನಿಂದಾಗಿ ಅವಳಿಗೆ ಈಗಿತ್ತ ಅಲ್ಲಿ ಅಷ್ಟು ಸೇರಿಕೆಯಿಲ್ಲ. ಶ್ರೀನಾಥನು ಬಂದ ಮೇಲಂತೂ ಒಮ್ಮೆ ಸಹ ಅವಳು ಆ ಕಡೆ ಸುಳಿದಿಲ್ಲ.

ಎಂದಿನಂತೆ ನಡೆದಿದೆ ಮಹಿಳಾ ಸಮ್ಮೇಳನ. ಸಾವಿತ್ರಿಯು ಚಿನ್ನ

ಮೇಲೆ ಇಳಿಬಿದ್ದ ಜಡೆಯನ್ನು ಆಚೆ-ಈಚೆ ತೂರಾಡುತ್ತ ಒಮ್ಮೆಲೇ ಅಲ್ಲಿ ಉಪಸ್ಥಿತಳಾದಳು. ಕೂಡಿದ ಹೆಣ್ಣು ಮಕ್ಕಳಲ್ಲಿ ತಾನೇ ಬಿನ್ನಾಣವತಿಯೆಂದು ತಿಳಿದಿದ್ದ ಬಾಲಿಕೆಯೊಬ್ಬಳು ಕಿವಿಯ ಮೇಲ್ಭಾಗದ ಕೂದಲುಗಳನ್ನು ತಿದ್ದಿ ವ್ಯವಸ್ಥೆಗೊಳಿಸುತ್ತ ಅವಳೆಡೆ ಕಣ್ಣು ಹಾಯಿಸಿದಳು. ಎಲ್ಲ ಹೆಂಗಸರೂ ಬಹಳ ದಿನಕ್ಕೆ ತವರೂರಿಗೆ ಬಂದಿರುವ ಸಾವಿತ್ರಿಯನ್ನು ಸ್ವಾಗತಿಸಿದರು.

"ಬನವಾಸಿಗೆ ಸೇರಿದ ಮೇಲೆ ತುಂಬ ಸುಧಾರಿಸಿ ಬಿಟ್ಟಿದ್ದೀಯೆ, ಸಾತೂ. ಎಲ್ಲಿ ತಿರುಗು ನೋಡೋಣ. ಇಂದು ಅಕ್ಕ ತಲೆ ಬಾಚಿದಳೋ ಇಲ್ಲವೆ ನೀನೇ ಸ್ವಂತ ಜಡೆ ಹೆಣೆದುಕೊಂಡೆಯೋ ?

ಶರ್ವಾಣಿಯ ತಾಯಿಯು ಸಹಜವಾಗಿ ಈ ಮಾತು ಕೇಳಿದಳಾದರೂ ಸಾವಿತ್ರಿಯನ್ನು ನೋಡಿ ಅಲ್ಲಿ ಸೇರಿದವರಿಗೆಲ್ಲ ಆಗಲೇ ಒಂದು ರೀತಿ ಅಸೂಯೆ ಬಂದು ಬಿಟ್ಟಿತ್ತು.

"ಯಾಕಮ್ಮಾ, ನಾನೇ ಜಡೆ ಹೆಣೆದುಕೊಂಡೆ. ಅಕ್ಕನಾಗಿದ್ದರೆ ಇನ್ನೂ ಚನ್ನಾಗಿ ಹೆಳಲು ಹಾಕುತ್ತಾಳೆ."

ಸಾವಿತ್ರಿಯು ಅಲ್ಲಿ ಕೂಡಿದವರ ಅಸಹನೆಯನ್ನು ಇನ್ನಷ್ಟು ಹೆಚ್ಚಿಸಿದಳು.

"ನಿನ್ನಕ್ಕ ಈ ಕಡೆಗೆ ಬರುವದನ್ನೇಕೆ ಬಿಟ್ಟಿದ್ದಾಳೆಯೇ ?"

"ಮನೆಯಲ್ಲಿ ಹುಡುಗನಿಗೆ ಪಾಠ ಹೇಳಲಿಕ್ಕೆ ಪರಊರಿನವರೊಬ್ಬರಿದ್ದಾರೆ. ಅವರನ್ನೂ ನೋಡಿಕೊಳ್ಳಬೇಕೇನೋ"

ಶಂಕೆ ಸಮಾಧಾನ ಎರಡನ್ನೂ ಅವರವರೇ ಮಾಡಿಕೊಳ್ಳುತ್ತಿದ್ದಾರೆ. ಮಾತಿನ ಅಲಗು ಎಷ್ಟು ಮೊನಚಾಗಿದೆ !

"ಅಲ್ಲ ಸಾತೂ, ನಿಮ್ಮ ಮನೆಯ ಉಪಾಧ್ಯಾಯರಿಗೆ ವೇತನವೆಷ್ಟಂತೆ?"

"ವೇತನವೇನು ? ಅಲ್ಲಿಯ ಊಟ-ಉಪಚಾರ-ಆರೈಕೆ ಸಾಲದೇ ? ಯಾವ ರಾಜನ ಮನೆಯಲ್ಲಿ ನೋಡಿಕೊಳ್ಳುತ್ತಾರೆ ಹಾಗೆ ?"

ಆವಾಹನೆ-ವಿಸರ್ಜನೆ ಎರಡೂ ಮೊದಲಿನಂತೆಯೇ.

"ಅವರು ಇನ್ನೂ ಎಷ್ಟು ದಿನ ಈ ಕಡೆ ಇರುತ್ತಾರೆಯೋ ?"

ಮೊದಲು ಪ್ರಶ್ನೆ ಮಾಡಿದವಳೇ ಮತ್ತೆ ಕೇಳಿದಳು. ಶ್ರೀನಾಥನ ಬಗ್ಗೆ

ಹಾಗೆಲ್ಲ ಕೇಳುವುದು ಅಪ್ರಕೃತವಲ್ಲವೆಂದೇ ಅಲ್ಲಿಯವರ ತಿಳುವಳಿಕೆ. ಸಾವಿತ್ರಿಯು ಹಳೆಯ ಗೆಳೆಯರೊಡನೆ ಬಹಳಷ್ಟು ಮಾತಾಡಿಕೊಂಡು ಬಂದಿದ್ದಳು. ಈ ಬಾರಿ ಅವಳಿಗೆ ರೇಗಿತು.

“ಯಾಕೆ? ಹೀಗೆಲ್ಲ ಆಡೋದು. ನಿಮ್ಮಂತೆ ಇತರರಿಗೂ ಮಾನ-ಮರ್ಯಾದೆ ಇದೆ. ಪೂರ್ತಿ ಹಾಳಾಗಿಲ್ಲ. ಉಪಾಧ್ಯಾಯರ ಸುದ್ದಿ ಬಿಡಿ. ನಾವೇನು ಅವರನ್ನು ಹುಡುಕಿಕೊಂಡು ಕರೆತಂದಿಲ್ಲ. ಹೀಗೇ ಬಂದು ಬಿಟ್ಟಿದ್ದಾರೆ. ಅವರ ಯೋಗ್ಯತೆಯನ್ನು ಅಳೆಯುವದಕ್ಕೆ ನೀವು ಯಾರು? ಅಷ್ಟು ಕೇಳಿದರೆ ನಾವವರನ್ನು ಇನ್ನೂ ಹತ್ತು ವರ್ಷ ಇಟ್ಟುಕೊಳ್ಳುತ್ತೇವೆ. ವೇತನದ ಭಾರ ನಿಮಗೆ ಬೇಡ!”

ಅಭಿಮಾನಿಯಾದ ಆ ಹುಡುಗಿ ಎದ್ದುಬಿಟ್ಟಳು.

“ಯಾಕೆ ಸಾತೂ ಸಹಜವಾಗಿ ಕೇಳಿದ್ದಕ್ಕೆ ಇಷ್ಟು ಸಿಟ್ಟೇ? ಉಪಾಧ್ಯಾಯರು ಯೋಗ್ಯರಲ್ಲವೆಂದು ಇಲ್ಲಿ ಯಾರು ಹೇಳಿದ್ದಾರೆ? ನೀನವರನ್ನು ನೂರು ವರ್ಷ ಇಟ್ಟುಕೊಂಡರೆ ನಾವು ಬೇಡವೆನ್ನುತ್ತೇವೆಯೇ? ಬಾ ಕುಳಿತುಕೋ ಇಲ್ಲಿ”.

ಸಂತೈಸುವ ದನಿಯಲ್ಲಿ ಶರ್ವಾಣಿಯ ತಾಯಿ ಹೇಳಿದಳು. ಆ ಮಾತು ಕೇಳುವುದಕ್ಕೆ ಸಾವಿತ್ರಿ ಅಲ್ಲಿ ನಿಂತರಷ್ಟೇ!

## ೧೬

ಶ್ರೀನಾಥನು ಮಂಚದ ಮೇಲೆ ಒಂದು ಲೋಡನ್ನು ತೋಳಿನ ಮಧ್ಯೆ ಆಡಿಸುತ್ತ ಅನವಶ್ಯಕವಾಗಿ ಅದಕ್ಕೆ ಗಲ್ಲವನ್ನು ಉಜ್ಜಿಕೊಳ್ಳುತ್ತ ಏನನ್ನೋ ಆಲೋಚಿಸುತ್ತ ಕುಳಿತಿದ್ದ. ಅಂದು ಅಭ್ಯಾಸವಿಲ್ಲದ್ದರಿಂದ ಸುಬ್ಬಯ್ಯ ತಂದೆಯೊಡನೆ ತೋಟಕ್ಕೆ ಹೋಗಿದ್ದಾನೆ. ಪದ್ಮೆಯು ಬಟ್ಟೆ ಒಗೆಯಲು ಹೊಳೆಗೆ ನಡೆದಿದ್ದಳು. ಸಾವಿತ್ರಿಯು ಮೆಲ್ಲಮೆಲ್ಲನೆ ಸಮೀಪಕ್ಕೆ ಬಂದು ನೆಲದ ಮೇಲೆ ಕುಳಿತಳು. ಅವಳ ಭುಜ ಮಂಚದ ಕಂಬಿಯನ್ನು ಆಧರಿಸಿಕೊಂಡಿತು.

“ಯಾವ ಆಲೋಚನೆ ನಡೆದಿದೆ ಉಪಾಧ್ಯಾಯರೇ?”

ಶ್ರೀನಾಥ ಬಗ್ಗಿದ. ಸಾವಿತ್ರಿಯು ಮೋರೆಯಲ್ಲಿ ಕುತೂಹಲವನ್ನು ತುಂಬಿಕೊಂಡು ಅವನನ್ನೇ ದಿಟ್ಟಿಸುತ್ತಿದ್ದಾಳೆ.

" ಏನಿಲ್ಲ ಸಾತೂ ಹೀಗೆಯೇ ಕುಳಿತಿದ್ದೇನೆ ಅಷ್ಟೇ!"

" ಉಪಾಧ್ಯಾಯರೇ, ನಿಮ್ಮೊಡನೆ ಬಹಳ ಮಾತು ಕೇಳಬೇಕು. ಹಾ, ಮುಚ್ಚುಮರೆಯಿಲ್ಲದೆ ಉತ್ತರ ಹೇಳುವಿರಲ್ಲವೇ ?"

ಶ್ರೀನಾಥನು ಹಾವನ್ನೋ, ಚೇಳನ್ನೋ ಎಡವಿದವನಂತೆ ಒಮ್ಮೆಲೇ ಲೋಡನ್ನು ಆಚೆಗೆ ತಳ್ಳಿ ಎದ್ದುನಿಂತ.

" ಏನು ಮುಚ್ಚುಮರೆಯಾ ವಿಷಯ ಯಾವುದು ಸಾತೂ ? ನೀನೇನು ಕೇಳುತ್ತಿದ್ದೀಯೆ ?"

ಆತ ಮತ್ತೆ ಮಂಚದ ಮೇಲೆ ಧಡಮ್ಮನೆ ತನ್ನ ಮೈಭಾರ ಹೇರಿ ಮನಸ್ಸಿನಲ್ಲಿ ಸ್ಥಿರತೆಯನ್ನು ತಂದುಕೊಳ್ಳುತ್ತಿದ್ದಾನೆ. ಸಾವಿತ್ರಿಗೆ ನಗು ಬಂದು ಬಿಟ್ಟಿತು.

" ಯಾಕಿಷ್ಟು ಗಾಬರಿಯಾಗುತ್ತಿದ್ದೀರಿ? ಅಂಥಹದೇನನ್ನೂ ಕೇಳುವದಿಲ್ಲ. ಅಲ್ಲ! ಈ ರಾಮನ ಅಜ್ಞಾತವಾಸಕ್ಕೆ ಕಾರಣಳಾದ ಕೈಕೇಯಿ ಯಾರು ಹೇಳಿ ?"

" ಸಾತೂ, ನನ್ನ ತಂದೆ ಹಾಗೆ ಹಲವು ಹೆಂಡಿರನ್ನು ಮಾಡಿಕೊಂಡಿರುವವನಲ್ಲ. ಬೇಡ, ಅದನ್ನೆಲ್ಲ ನೀನು ಕೇಳಬಾರದು!"

" ಸರಿ, ಸರಿ: ಅಂದರೆ ಆದಾವಳೋ ದಮಯಂತಿಗೆ ಹೇಸಿ ಮನೆ ಬಿಟ್ಟು ಬಂದಿರಬೇಕು ಈ ನಳಭೂಪತಿ, ಅಲ್ಲವೇ. ನನ್ನೊಡನೆ ಹಾರಿಸಿ ನುಡಿದರೆ ನಡೆಯದು, ಉಪಾಧ್ಯಾಯರೇ. ನಾನು ನಿಮ್ಮ ಯಾವ ನಿರ್ಬಂಧಕ್ಕೂ ಸಿಕ್ಕುಬಿದ್ದಿಲ್ಲ. ಹೇಳಿ, ನಿಜವೇ ನನ್ನ ಅನುಮಾನ ?"

ಸಾವಿತ್ರಿ ಬಡಪೆಟ್ಟಿಗೆ ಬಿಡುವವಳಲ್ಲ. ಶ್ರೀನಾಥನಿಗೆ ಕಷ್ಟಕ್ಕೆ ಬಂತು. " ನೋಡು, ಸಾತೂ! ಪ್ರತಿಯೊಂದು ಕೃತಿಗೂ ಒಂದೊಂದು ಉದ್ದೇಶವಿಡೆಯೆಂದು ತಿಳಿದುಕೊಳ್ಳುವುದು ತಪ್ಪು. ಹೀಗೇ ಸಹಜವಾಗಿ ನಾಲ್ಕು ದಿನ ಹೊರಗೆ ಅಡ್ಡಾಡಬೇಕೆಂದೆನಿಸಿತು. ಹಾ. ನಾನು ಇಲ್ಲಿಗೆ ಬಂದು ಮೂರು ತಿಂಗಳು ಸಂದುಹೋಯಿತಲ್ಲವೇ ?"

" ಆ ಯೋಚನೆ ಬೇಡ ಉಪಾಧ್ಯಾಯರೇ, ಇಲ್ಲಿಗೆ ಬರುವ ಮಟ್ಟಿಗೆ ನೀವು ಸ್ವತಂತ್ರರು. ಈಗ ನಾವು ವೇತನ ಗೊತ್ತುಮಾಡಿದ್ದೇವೆ. ನಮ್ಮ ಒಪ್ಪಿಗೆ

ಯಿಲ್ಲದೆ ನೀವು ಇಲ್ಲಿಂದ ಹೋಗಲಾರಿರಿ. ಮೊದಲು ನನ್ನ ಮಾತಿಗೆ ಅಷ್ಟು ಹೇಳಿ. "ಹೀಗೇ ಸಹಜವಾಗಿ" ಅನ್ನುವುದು ಎಷ್ಟು ಸುಲಭ. ಆ ಹೆಂಡತಿ ಅದೆಷ್ಟು ಮನೋವ್ಯಥೆ ಹಚ್ಚಿಕೊಂಡಿದ್ದಾಳೆಯೋ? ನಾನೂ ಹೀಗೇ ಇಲ್ಲಿಗೆ ಬಂದಿದ್ದೇನೆ. ಆದರೆ ನೋಡುತ್ತಿರಿ. ನಾಳೆಯೋ, ನಾಡದ್ದೋ ಗಾಡಿ ಬಂದು ಬಿಡುತ್ತದೆ."

"ಸಾತೂ, ನಿನ್ನಂಥ ಹೆಂಡತಿಗೆ ಗಂಡನಾದವನು ಅಷ್ಟು ಹಂಬಲಿಸುತ್ತಿದ್ದರೆ ಆಶ್ಚರ್ಯವೇನಿಲ್ಲ!" ಶ್ರೀನಾಥ ನಗುತ್ತ ಹೇಳಿದ.

"ಅಂದರೆ, ನಿಮ್ಮ ಹೆಂಡತಿ ಚೆನ್ನಾಗಿಲ್ಲವೆಂದೇನೋ?"

ಸಾವಿತ್ರಿಯು ಶ್ರೀನಾಥನನ್ನು ಆತನ ಮಾತಿನಲ್ಲಿಯೇ ಹಿಡಿದುಕೊಟ್ಟಂತಾಯಿತು. ಶ್ರೀನಾಥ ತಡವರಿಸುತ್ತ

"ಯಾಕೆ ನನ್ನನ್ನು ತೊಂದರೆಪಡಿಸುತ್ತೀಯೇ. ನನಗೆ ಹೆಂಡತಿಯೇ ಇಲ್ಲವೆಂದರೆ ನೀನೇನು ಹೇಳುವೆ ಸಾತೂ?" ಎಂದ.

"ತೊಂದರೆಯೇನು? ಇಲ್ಲಿ ಯಾರಿದ್ದಾರೆ ಈಗ, ನಾನೆಲ್ಲಿಯೂ ಹೇಳುವದಿಲ್ಲ. ಹೇಳಿ. ನೀವು ಸುಳ್ಳು ಹೇಳುವವರಲ್ಲವೆಂಬುದನ್ನು ನಾನು ಬಲ್ಲೆ. ಯಾಕೆ? ನಿಮ್ಮಾಕೆಯ ರೂಪ ಕೀಳೇ, ಸ್ವಭಾವ ಹಾಳೇ, ಏನು?"

ದನಿಯನ್ನು ತಗ್ಗಿಸಿ ತೀರ ಹತ್ತಿರದ ಆಪ್ತಳಂತೆ ವಿಚಾರಿಸುತ್ತಿದ್ದಾಳೆ ಸಾವಿತ್ರಿ. ಶ್ರೀನಾಥ ನಿರುಪಾಯನಾದ.

"ಜೋಕೆ, ಯಾರಿಗೂ ಹೇಳಬೇಡ ಸಾತೂ. ನೋಡು, ಎಲ್ಲರ ದೃಷ್ಟಿ ಒಂದೇ ತೆರನಾಗಿರುವದಿಲ್ಲ. ಹೆಣ್ಣಿನ ರೂಪ-ಸ್ವಭಾವಗಳನ್ನು ಆಡಿಕೊಳ್ಳುವುದು ನನಗೆ ಸೇರದು. ಹಾಗೆ ನಾನು ಯಾರನ್ನೂ ಅಪಮಾನಪಡಿಸಲಾರೆ. ನೀನು ಅನುಮಾನಿಸಿದಂತೆ ನನಗೆ ಹೆಂಡತಿಯಲ್ಲಿ ಮನಸ್ಸಿಲ್ಲ ಅಷ್ಟೇ." ನಿಜಕ್ಕೂ ಆತ ಸುಳ್ಳು ಹೇಳಲಾರ.

"ಮತ್ತೆ ಯಾಕೆ ಲಗ್ನ ಮಾಡಿಕೊಂಡಿರಿ ಉಪಾಧ್ಯಾಯರೇ"

"ಆಗ ನಾನು ಚಿಕ್ಕವನಿದ್ದೆ. ಮನಸ್ಸಿನ ಮಾತನ್ನು ಹಿರಿಯರು ತಾವಾಗಿಯೇ ಕೇಳದೆ ಇದ್ದುದರಿಂದ ಹೇಳಲು ಸಾಧ್ಯವಾಗದೆ ಹೋಯಿತು. ನನ್ನ ಪ್ರಾರಬ್ಧ. ಹೇಗೋ ಅಪ್ರಿಯವಾದ ಆ ಕಾರ್ಯ ಆಗಹೋಯಿತು."

"ಏನು? ಈಗ ಹೆಣ್ಣನ್ನು ಬಿಟ್ಟುಬಿಡಬೇಕೆಂದೋ ನಿಮ್ಮ ಸನ್ನಾಹ?" ಸಾವಿತ್ರಿಯ ಸ್ವರದಲ್ಲಿ ಉದ್ವೇಗ ತುಂಬಿದೆ.

"ಹಾಗೇನಿಲ್ಲ ಸಾತೂ, ಮದುವೆಯಿಂದಾಗಿ ಹೆಣ್ಣಿಗೆ ಗಂಡು ಏನೇನು ಸಲ್ಲಿಸಬೇಕೋ ಅದೆಲ್ಲವೂ ಅವಳಿಗೆ ಸಲ್ಲುತ್ತಿವೆ."

"ಅಂದರೆ ನಾಲ್ಕು ಜನರೆದುರು ನಿಮ್ಮ ಹೆಂಡತಿಯೆಂದು ಹೇಳಿಕೊಳ್ಳಲು ಅವಕಾಶ ಕೊಟ್ಟಿದ್ದೀರಿ". ವ್ಯಂಗವಾಗಿ ಹೇಳಿದಳು ಸಾವಿತ್ರಿ.

ಶ್ರೀನಾಥನು ಶುಷ್ಕವಾಗಿ ನಕ್ಕು ಹೇಳಿದ.

"ವೇಷ-ಭೂಷಣಗಳಿಗೂ ಅವಳಿಗಾವ ಕೊರತೆಯಿಲ್ಲ ಸಾತೂ?"

ಹಾಂ, ನಿತ್ಯವೂ ಉಣ್ಣುತ್ತಾಳೆ. ಮುಂದೆ ಹೇಳಿ."

"ನನಗೆ ನಾಚಿಕೆಯಿಲ್ಲ ಸಾತೂ, ಅದನ್ನೂ ಹೇಳುತ್ತೇನೆ. ನಾನವಳನ್ನು ಹಾಸಿಗೆಯಿಂದ ಕೂಡ ತೀರ ದೂರವಾಗಿರಿಸಿಲ್ಲ. ಧರ್ಮ-ಅರ್ಥ-ಕಾಮ ಮತ್ತೇನು?"

"ಎಂತಹ ದಾರುಣವಾದ ಮಾತುಗಳನ್ನಾಡುತ್ತಿದ್ದೀರಿ? ಪ್ರೀತಿಯಿಲ್ಲವೆಂದ ಮೇಲೆ ಇವೆಲ್ಲ ಹೆಣ್ಣಿನ ಮೇಲಿನ ಅತ್ಯಾಚಾರವಲ್ಲವೇ?"

"ಇಲ್ಲ ಸಾತೂ, ಅವಳಲ್ಲಿ ನನಗೆ ಪ್ರೀತಿ ಹುಟ್ಟುವುದು ಸಾಧ್ಯವೇ ಇಲ್ಲ. ನಾನೆಷ್ಟು ಪ್ರಯತ್ನಿಸಿದ್ದೇನೆ. ಅದಿರಲಿ ಸಾತೂ, ಹೆಂಗಸು ಮನೋರೋಗ ಹಚ್ಚಿಕೊಳ್ಳಲಿಕ್ಕೆ ಅಪ್ರಯೋಜಕನಾದ ನನ್ನಲ್ಲಿ ಅಂಥದೇನಿದೆ ಹೇಳು?"

"ಅದನ್ನು ನಿಮ್ಮ ಹೆಂಡತಿಯಾದವಳು ಹೇಳಬೇಕು. ಅಯ್ಯೋ, ಅವಳೆಂತಹ ದುರ್ದೈವಿ. ನಾನಾಗಿದ್ದರೆ ನಿಮಗೆ ಚೆನ್ನಾಗಿ ಬುದ್ಧಿ ಕಲಿಸುತ್ತಿದ್ದೆ. ಹೇಳಿ ಪ್ರಯೋಜನವೇನಿದೆ ಈಗ! ಲೋಕದಲ್ಲಿ ಹೆಣ್ಣಾಗಿ ಹುಟ್ಟಬಾರದು ಅಷ್ಟೇ. ಇನ್ನೇನು ಹೇಳಲಾದೀತು?

ಸಾವಿತ್ರಿಯ ಕಣ್ಣಿನಲ್ಲಿ ಹನಿ ಕೂಡಿದ್ದರಿಂದ ಅವಳು ಶ್ರೀನಾಥನ ಮೋರೆಯನ್ನು ನೋಡಲಾರದೇ ಹೋದಳು. ಅವನ ಕಂಠದಲ್ಲಿಯೂ ಏನೋ ಸಿಕ್ಕುಬಿದ್ದಂತಾಗಿದೆ.

"ಸಾತೂ, ಮತ್ತೆ ನನ್ನಂಥ ಗಂಡಸು ಹುಟ್ಟಿ ಸುರಿದುಕೊಂಡ ಭಾಗ್ಯ ಸಾಲದೇ. ಹೋಗಲಿ, ನನ್ನೀ ರೂಪುಗೆಟ್ಟ ಬಾಳಿನ ಕಥೆಯನ್ನು ಅಕ್ಕನಿಗೆ

ಹೇಳುತ್ತೀಯೋ? ನನ್ನಾಣೆಯಿದೆ ನೋಡು. ನಿನ್ನಕ್ಕನ ಆರೈಕೆಯಿಂದ ನಾನಿಲ್ಲಿ ನೆಮ್ಮದಿಯಾಗಿದ್ದೇನೆ. ಇನ್ನೂ ಕೆಲವು ದಿನ ಇಲ್ಲಿಯೇ ಉಳಿಯಬೇಕೆಂದಿದೆ ನನಗೆ. ಕೊನೆಯ ಪಕ್ಷ ನಿನ್ನಣ್ಣ ರಾಮನಾಥ ಬರುವ ವರೆಗಾದರೂ ಈ ಸುದ್ದಿ ಬಹಿರಂಗವಾಗದೇ ಇರಲಿ.

"ಹಾ, ನಾನೇಕೆ ಹೇಳಲಿ, ಅಣ್ಣ ಬಂದ ಮೇಲೆ ಎಲ್ಲ ತಾನೇ ಗೊತ್ತಾಗುವದು."

ಅದೊಂದು ವಿಕೃತ ಪರಿಸ್ಥಿತಿಯಿಂದಾಗಿ ಶ್ರೀನಾಥನೆಷ್ಟು ಕಳೆಗೆಟ್ಟು ಹೋಗಿದ್ದಾನೆ. ಸಾವಿತ್ರಿಗೆ ತುಂಬ ವ್ಯಥೆಯಾಯಿತು. ಅಷ್ಟು ಹೊತ್ತಿಗೆ ಬಟ್ಟೆ ಒಗೆಯಲು ಹೊಳೆಗೆ ಹೋಗಿದ್ದ ಪದ್ಮೆಯು ಬಂದುಬಿಟ್ಟಳಾದ್ದರಿಂದ ಆಕೆ ಅಲ್ಲಿಂದ ಎದ್ದು ಒಳಮನೆಗೆ ನಡೆದಳು.

## ೧೭

"ಚಿಕ್ಕವರಿದ್ದಾಗ ಅಣ್ಣ-ತಮ್ಮಂದಿರು. ಬೆಳೆದ ಮೇಲೆ ದಾಯಾದಿಗಳು." ಹೀಗೆ ಗಂಡಸರ ಬಗ್ಗೆ ನಮ್ಮಲ್ಲಿ ಒಂದು ಗಾದೆ ರೂಢವಾಗಿದೆ. ಆದರೆ ಹೆಣ್ಣು ಜಾತಿಯ ವಿಷಯದಲ್ಲಿ ಹೀಗೆ ಹೇಳಲು ಬರುವದಿಲ್ಲ. ಅವರು "ಬಾಲ್ಯದಲ್ಲಿ ಅಕ್ಕ-ತಂಗಿಯರು. ದೊಡ್ಡವರಾದಾಗ ಗೆಳತಿಯರು" ಪದ್ಮೆ-ಸಾವಿತ್ರಿಯರ ವಿಚಾರವಾಗಿ ಹೇಳುವದಾದರೆ ಅವರೀಗ ಬರೀ ಗೆಳತಿಯರು ಮಾತ್ರವಲ್ಲ, ಜೀವದ ಗೆಳತಿಯರು. ಅವರು ಅನ್ಯೋನ್ಯವಾಗಿ ಹೇಳಿಕೊಳ್ಳಲಾರದ ರಹಸ್ಯದ ಮಾತು ಒಂದೂ ಇಲ್ಲ.

ಮನೆಯ ಹಿತ್ತಲಿಗೆ ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಆಲದ ಮರ ವಿದೆ. ಅಂತಃಕರಣದ ಮಾತುಗಳನ್ನು ಆಡಿಕೊಳ್ಳುವುದಕ್ಕೆ ಅಕ್ಕ-ತಂಗಿಯರು ಆಗಾಗ ಆ ಮರದ ಬುಡದಲ್ಲಿ ಸೇರುತ್ತಾರೆ. ಅಂದು ಮಧ್ಯಾಹ್ನವೂ ಹೊತ್ತು ತಿರುಗಿದಾಗ ಅವರು ಅಲ್ಲಿಯೇ ಕುಳಿತು ತಮ್ಮ ಸುಖ-ದುಃಖಗಳನ್ನು ತೋಡಿ ಕೊಳ್ಳುತ್ತಿದ್ದರು. ಅಂದು ಬೆಳಗಿನ ವೇಳೆ ನೆರೆಮನೆಯ ಜಗುಲಿಯಲ್ಲಿ ಬಂ ಮಾತುಗಳನ್ನೆಲ್ಲ ಸಾವಿತ್ರಿ ಒಂದೂ ಬಿಡದೆ ಅಕ್ಕನೊಡನೆ ಹೇಳಿದಳು. ಕೇಳ ತ್ತಿದ್ದ ಹಾಗೆಯೇ ಪದ್ಮೆಯ ಮೋರೆ ಇಳಿದುಹೋಗಿದೆ.

"ಸಾತೂ, ನಾನೂ ನಾಳೆ ಬನವಾಸಿಗೆ ಬಂದುಬಿಡುತ್ತೇನೆ. ಅವ ನಾಲ್ಕು ದಿನ ಇಲ್ಲಿ ನೋಡಿಕೊಳ್ಳಲಿ. ಉಪಾಧ್ಯಾಯರಿಗೆ "ನೀವು ಇಲ್ಲಿಂ

ಹೊರಟುಹೋಗಿ" ಎಂದು ಸ್ಪಷ್ಟವಾಗಿ ಹೇಳಲಾಗುವದೇ ? ಸಾವಿತ್ರಿಗೆ ಅಕ್ಕನ ಅಭಿಪ್ರಾಯ ತಿಳಿಯಿತು.

"ಹೌದು. ನೀನಿಲ್ಲದಿದ್ದರೆ ಒಂದು ಗಳಿಗೆ ಸಹ ಅವರು ಇಲ್ಲಿ ನೆಮ್ಮದಿಯಾಗಿ ನಿಲ್ಲಲಾರರು. ನಿನ್ನ ಹೊರತು ಇನ್ನಾರ ಪರಿವೆಯೂ ಅವರಿಗೆ ಇದ್ದಂತೆ ಕಾಣುವದಿಲ್ಲ."

ಮಾತು ಎಷ್ಟು ಸತ್ಯವಾದುದು, ಪದ್ಮೆಯ ಮುಖ ನಾಚಿಕೆಯಿಂದ ಆರಕ್ತವಾಯಿತು. ಅವಳೆಷ್ಟು ಹತ್ತಿಕ್ಕಲು ಯತ್ನಿಸಿದರೂ ಕಣ್ಣುಗಳಿಂದ ನೀರು ಹನಿ ಹನಿಯಾಗಿ ಉದುರಿತು.

"ಛೀ, ಇದೇನು ಕಣ್ಣೀರು ಅಕ್ಕಾ, ನೀನು ನನ್ನೊಡನೆ ಬರುವುದು ಬೇಡ. ಉಪಾಧ್ಯಾಯರು ಇನ್ನೂ ಹತ್ತು ವರುಷ ಇರಲಿ ಇಲ್ಲಿ. ನೆರೆಯವರ ನಂಜಿನ ನುಡಿಗಳಿಗೆಲ್ಲ ಹೀಗೆ ಮಹತ್ವ ಕೊಟ್ಟರೆ ನಾವು ಉಸಿರಾಡಿಸುವುದೂ ಪಾಪವೆಂದಾದೀತು ಮುಂದೆ! ಇನ್ನು ನೀನು ನನ್ನೊಡನೆ ಬಂದ ಮಾತ್ರಕ್ಕೆ ಎಲ್ಲ ಸರಿಹೋಗುವದೆಂದಿದ್ದೀಯೋ? ಅದನ್ನೇ ನಿಮಿತ್ತ ಮಾಡಿ ನಮ್ಮನ್ನು ಇನ್ನಷ್ಟು ಹವ್ಯಾಸಕ್ಕೆ ಗುರಿ ಮಾಡಿಬಿಡುತ್ತಾರೆ ಈ ಜನ!"

"ಸಾತೂ, ಇಷ್ಟರ ಮಟ್ಟಿಗೆ ನಾನು ಹೀಗಿದ್ದೇನೆ. ಮುಂದೆಯೂ ಹೀಗೆಯೇ ಎಂದು ಹೇಳಲಾಗುವದಿಲ್ಲ".

ಪದ್ಮೆ ಕಣ್ಣೊರಸಿಕೊಂಡಳು.

"ಸಾಕು, ಏನೆಲ್ಲ ಆಲೋಚಿಸೋದು ಅಕ್ಕಾ. ನಾನು ನಿನ್ನನ್ನು ಅರಿಯನೇ? ಉಪಾಧ್ಯಾಯರದೂ ನನಗೆ ಗೊತ್ತು. ಉತ್ತಮರ ಒಡನಾಟ ನಮಗೆ ಲಭಿಸಿತಲ್ಲ, ಎಂದು ಇಲ್ಲಿಯ ಜನಕ್ಕೆ ನಮ್ಮ ಮೇಲೆ ಅಸೂಯೆ ಅಷ್ಟೇ! ಹಾ, ನಮ್ಮಲ್ಲಿಗೆ ಬರುವದಾದರೆ ಉಪಾಧ್ಯಾಯರನ್ನೂ ಕರೆದುಕೊಂಡು ಬರುವಿಯಂತೆ".

ಪದ್ಮೆಗೆ ತಂಗಿಯ ಮೇಲೆ ವಾತ್ಸಲ್ಯಮಯಿಯಾದ ತಾಯಿಗಿಂತಲೂ ಹೆಚ್ಚಿನ ಆದರ ಬಂದುಬಿಟ್ಟಿತು. ಆದರೂ ತನಗಿಂತ ಚಿಕ್ಕವಳು ತನ್ನನ್ನು ದಯೆಯಿಂದ ಕಾಣುವಂತಾಯಿತಲ್ಲ ಎಂಬ ತಳಮಳ ಅವಳಿಗೆ ಇಲ್ಲದೆ ಇಲ್ಲ.

"ಸದ್ಯ ಆ ಮಾತು ಬೇಡ ಸಾತೂ! ನೀನು ಉಪಾಧ್ಯಾಯರೊಡನೆ ಏನೇನೋ ಕೇಳುತ್ತಿದ್ದೆಯಲ್ಲವೇ ಬೆಳಗ್ಗೆ."

"ಅದನ್ನೆಲ್ಲ ನೀನು ಕೇಳದಿರುವದೇ ಒಳಿತು. ಒಟ್ಟಿನಲ್ಲಿ ಅವರು ವ್ಯಾಧಿಯಾಗಿದ್ದಾರೆ. ಉಳಿದ ಸಂಗತಿ ಅಣ್ಣ ಬಂದ ಮೇಲೆ ಹೇಳುತ್ತಾನೆ. ಡೆ, ಈಗ ಕೊಟ್ಟಿಗೆಗೆ ದನ ಬರುವ ಹೊತ್ತಾಯಿತೇನೋ!"

ಏಳುವಾಗ ಸಾವಿತ್ರಿ ಅದೇನನ್ನು ನೆನಪು ಮಾಡಿಕೊಂಡಳೋ, ಒಮ್ಮೆ ೀ ನಗಹತ್ತಿದಳು. ಕೈ ಅಡ್ಡಹಾಕಿದರೂ ಆ ನಗೆಯನ್ನು ನಿಲ್ಲಿಸಲಾಗಲಿಲ್ಲ. ದ್ಮೆಗೆ ವಿಸ್ಮಯವಾಯಿತು!

"ಯಾಕೆ ನಗುತ್ತೀಯೋ?"

ನಗೆಯ ತೆರೆಗಳಲ್ಲಿ ಆಕೆ ತೇಲಾಡುತ್ತಿದ್ದಾಳೆ. ಮೈ ಜೋಲಿ ತಪ್ಪಿ ೀಳುವ ಹಾಗಾಯಿತು. ಆಲದ ಕೊಂಬೆಯೊಂದು ಅವಳಿಗೆ ಆಧಾರ ಾಯಿತು."

"ಏನಿಲ್ಲ".

ಅವಳಿನ್ನೂ ನಗೆಯನ್ನು ಬಿಗಿಹಿಡಿಯಲಾರಳು.

"ಏನು ಸಾತೂ, ನನ್ನನ್ನು ಅಣಕಿಸುತ್ತಿದ್ದೀಯೋನೋ?"

"ಇಲ್ಲ ಅಕ್ಕಾ, ನೀನು ಸಂತೋಷಪಡುವದಾದರೆ ಹೇಳುತ್ತೇನೆ."

"ಏನು ಹೇಳು?" ಪದ್ಮೆಗೆ ಕುತೂಹಲ.

"ನೋಡು, ನಿನ್ನೆ ಒಂದು ಸ್ವಪ್ನ ಕಂಡೆ. ಹೀಗೆಯೇ ನಾನೂ ನೀನೂ ಉಪಾಧ್ಯಾಯರೂ ಮೂವರೇ ಕುಳಿತಿದ್ದೆವು. ನಾನು ಮಲ್ಲಿಗೆಯ ಮಾಲೆಯೊಂದನ್ನು ಕಟ್ಟಿದ್ದೆ. ಅದನ್ನು ನೀನು ಕೈಗೆತ್ತಿಕೊಂಡು ಎದುರು ಕುಳಿತ್ತಿದ್ದ ಉಪಾಧ್ಯಾಯರ ಕೊರಳಿಗೆ ಹಾಕಿದೆ" ಸಾವಿತ್ರಿಗೆ ಇನ್ನೂ ನಗೆ.

"ಛೀ, ಛೀ, ಎಂಥ ಹುಚ್ಚು. ಸಂತೋಷಪಟ್ಟುಕೊಳ್ಳಬೇಕಾದ ಮಾತೇ ಇದು? ಇಲ್ಲದ್ದನ್ನು ಹೇಳುವದೆಂದರೆ ನಿನಗೆ ಮೋಜು."

ಪದ್ಮೆಗೆ ಸಂತೋಷವಾಯಿತೋ, ದುಃಖವಾಯಿತೋ ಅವಳಿಗೇ ಗೊತ್ತು. ಹಾದಿಯುದ್ದಕ್ಕೂ ಮುಖವನ್ನು ಕಿವಿಯ ಹತ್ತಿರತ್ತಿರ ಒಯ್ದು ಅಕ್ಕ-ತಂಗಿಯರು ಪಿಸುಮಾತಿನಲ್ಲಿ ಅದೆಷ್ಟೋ ವೇಳೆ ಕಳೆದರು.

೧೮

ಗಾಡಿಯು ಹೊರಡುವಾಗ ಸಾವಿತ್ರಿಯು ಶ್ರೀನಾಥನಿಗೆ ನಮಸ್ಕಾರ

ಮಾಡಿದಳು. “ಉಪಾಧ್ಯಾಯರೇ, ಇಲ್ಲಿ ನಿಮ್ಮೊಡನೆ ಒಡನಾಡಿದ ದಿನಗಳು ಎಷ್ಟು ಸೊಗಸಾಗಿ ಕಳೆದವು. ಒಮ್ಮೆ ಪುರಸತ್ತು ಮಾಡಿ ನೀವು ನಮ್ಮಲ್ಲಿಗೆ ಬರಬೇಕು.” ಸುಬ್ಬಯ್ಯನ ತಾಯಿಯೂ “ಹುಡುಗ ದಡ್ಡ. ನಿಮ್ಮಿಂದಲೇ ಅವ ಏನಾದರೂ ಬೆಳಕು ಕಾಣಬೇಕು” ಎಂದಳು. ಇಬ್ಬರಿಗೂ ಶ್ರೀನಾಥ ತಲೆ ಅಲ್ಲಾಡಿಸಿದ. ಪದ್ಮೆಯು “ಹೊಳೆಯು ತನಕ ಬಿಟ್ಟು ಬರೋಣ ಬನ್ನಿ” ಎಂದು ಹೇಳಲು “ಆಗಲಿ ನಡೆ” ಎನ್ನುತ್ತ ಶ್ರೀನಾಥನೂ ಪದ್ಮೆಯೊಡನೆ ಗಾಡಿಯನ್ನು ಹಿಂಬಾಲಿಸಿದ. ಗಾಡಿ ಒಂದು ಫರ್ಲಾಂಗು ದೂರ ಹೋಗುವದರೊಳಗೆ ಹೊಳೆ ಬಂತು. ಹೊಳೆ ಅಷ್ಟು ದೊಡ್ಡದಾಗಿಲ್ಲ. ಗಾಡಿಯು ಅದನ್ನು ದಾಟಿದ ನಂತರ ಗಾಡಿಕಾರ ಎತ್ತುಗಳನ್ನು ನೊಗದಿಂದ ಬಿಡಿಸಿ ನೀರು ಕುಡಿಯಬಿಟ್ಟ. ತಿರುಗಿ ಅವು ಸಿದ್ಧವಾದಾಗ ಸಾವಿತ್ರಿಯು ಇನ್ನೊಮ್ಮೆ ಶ್ರೀನಾಥನಿಗೆ ಕೈಮುಗಿದಳು.

“ಇನ್ನು ನೀವು ನಿಲ್ಲಿ ಉಪಾಧ್ಯಾಯರೇ. ಅಕ್ಕಾ, ಇವರನ್ನು ಒಮ್ಮೆ ನಮ್ಮ ಮನೆಗೆ ಕರೆದುಕೊಂಡು ಬಾ. ನಾನು ಸಮಯ ನೋಡಿ ಗಾಡಿ ಕಳುಹುವೆ. ಎರಡು ದಿವಸ ಇದ್ದು ಬರಬಹುದು. ಹಾ, ನಾನು ಬರುತ್ತೇನೆ.”

ಪದ್ಮೆಯೂ ಶ್ರೀನಾಥನೂ ಕಣ್ಮರೆಯಾಗುವ ವರೆಗೂ ಗಾಡಿಯು ಕಡೆಗೆ ಹಾಗೆಯೇ ನೋಡುತ್ತ ನಿಂತರು. ಸೂರ್ಯನು ಪಶ್ಚಿಮಕ್ಕೆ ಸರಿಯುತ್ತಿದ್ದ. ಪದ್ಮೆಯು ಸಮೀಪದ ಹಾಸುಗಲ್ಲಿನ ಮೇಲೆ ಶ್ರೀನಾಥನಿಗೆ ಕೂಡ್ರಲು ಹೇಳಿ ಹೊಳೆಯ ಅಂಚಿನಲ್ಲಿ ಹಬ್ಬಿದ್ದ ಕೇದಿಗೆಯ ಮಟ್ಟಿಯಿಂದ ತುಂಡಿಗೆಯೊಂದನ್ನು ಕಿತ್ತಲು ಅಣಿಯಾದಳು. ಗಾಳಿಯು ಹೊಳೆಯ ತಿಳಿಯಾದ ನೀರಿನ ಮಂದ ಪ್ರವಾಹದಲ್ಲಿ ಚಕ್ಕಳುಗುಳಿಯನ್ನುಂಟು ಮಾಡುತ್ತ ಕೇದಿಗೆಯ ಮುಳ್ಳು ಎಲ್ಲಿ ಮೈಗೆ ತೆರೆಯುವದೋ ಎಂಬ ಎಚ್ಚರಿಕೆಯಲ್ಲಿ ತಪ್ಪು ಹೆಜ್ಜೆ ಇಟ್ಟು ನಡೆಯುವ ಹಳ್ಳಿಯ ಹುಂಬ ಹುಡುಗನ ಹಾಗೆ ಉತಾವಳಿತನವನ್ನು ತೋರುವ ಭಂಗಿಯಲ್ಲಿ ಅಲೆಯುತ್ತಿದೆ. ಆಸುಪಾಸಿನ ಗುರಿಗೆಯ ಹೂವುಗಳ ಸುವಾಸನೆ ಅಲ್ಲಿಯ ಹವೆಯನ್ನು ಪರಿಮಳಿತವನ್ನಾಗಿ ಮಾಡಿದೆ. ಎಲೆಗಳು ಅಲುಗಿದಾಗ ಸಂದುಗಳಿಂದ ನುಸುಳಿಕೊಂಡು ಬರುವ ಸೂರ್ಯನ ಕೊನೆಯ ಕಿರಣಗಳು ಹೊಳೆಯ ನೀರಿನಲ್ಲಿ ಪ್ರತಿಫಲಿಸಿ, ಪ್ರಿಯನಾದ ಅತಿಥಿಯು ತಾನು ಹೊರಟು ಹೋಗುವ ಮೊದಲು ಮನೆಯವರನ್ನೆಲ್ಲ ಬೀಳ್ಕೊಂಡು, ಯಜಮಾನನ ಚಿಕ್ಕ ಹುಡುಗಿಯ ಗಲ್ಲವನ್ನೊಮ್ಮೆ ಕೊನೆಯ ಸಲ

ಅಲುಗಿಸಿದ ಆಭಾಸ ಹುಟ್ಟುವುದು. ಒಟ್ಟಿನಲ್ಲಿ ಆ ಸನ್ನಿವೇಶ ತುಂಬ ಮನೋಹರವಾಗಿತ್ತು.

ಶ್ರೀನಾಥನು ಹಾಸುಗಲ್ಲಿನ ಮೇಲೆ ಕುಳಿತು ಪದ್ಮೆಯು ಬರವನ್ನು ನೋಡುತ್ತಿದ್ದಾನೆ. ಆಕೆ ಕೇದಿಗೆಯು ಎಸಳನ್ನು ಬಿಡಿಸುತ್ತ ಸಮೀಪಕ್ಕೆ ಬಂದಳು. ಹೇಗೋ, ಶ್ರೀನಾಥನಿಗೆ ಬಾಲ್ಯದಲ್ಲಿ ಓದಿದ ಸಪ್ತಸಮುದ್ರಗಳನ್ನು ದಾಟಿ ಹೋಗಿ ಗಂಧರ್ವ ಕನ್ನೆಯನ್ನು ಮದುವೆಯಾದ ರಾಜಕಿರೀಟನ ಕಥೆ ನೆನಪಿಗೆ ಬಂತು.

"ಏನು ಶ್ರೀನಾಥ? ಇನ್ನೂ ಸ್ವಲ್ಪ ಹೊತ್ತು ಕುಳಿತುಕೊಳ್ಳೋಣವೇ?"

ಶ್ರೀನಾಥನು ಅವಳ ಮಾತನ್ನು ಗಮನಿಸುತ್ತಿಲ್ಲ. ಕೇದಿಗೆಯನ್ನು ಮುಡಿಯಲ್ಲಿ ಸಿಕ್ಕಿಸಿಕೊಳ್ಳುತ್ತಿದ್ದ ಪದ್ಮೆಯ ಆ ತೆರೆದ ತೋಳು, ತುಂಬಿದ ವಕ್ಷಸ್ಥಳ, ಆಗಿನ ಆಕೆಯ ಕೊಂಕುಗೊರಲು, ಆ ಚಂಚಲವಾದ ಕುಡಿಗಣ್ಣುಗಳ ವಿಕ್ಷೇಪ- ಇವೆಲ್ಲ ಆತನಿಗೆ ದಿಗ್ಭ್ರಮೆಯನ್ನುಂಟು ಮಾಡಿವೆ. ಆ ಉದ್ಭ್ರಾಂತ ಸ್ಥಿತಿಯಲ್ಲಿ ಹೊಳೆಯು ಸಮುದ್ರದಂತೆಯೂ, ಪದ್ಮೆ ಗಂಧರ್ವ ಕನ್ಯೆಯಾಗಿಯೂ ಕಾಣಿಸುತ್ತಿರಲು, ತನ್ನ ಹೃದಯದ ಹೊಯ್ದಾಟವನ್ನು ಒಂದು ವ್ಯವಸ್ಥೆಗೆ ತರಲು ಆತ ಸಮರ್ಥನಾಗಲಿಲ್ಲ. ಪದ್ಮೆಯ ಅಂಗಾಂಗಗಳನ್ನು ಬಟ್ಟು ಅಚೆ-ಈಚೆ ಸರಿದಾಡದಾಗಿವೆ. ಪದ್ಮೆಯು ಸೀರೆಯ ನೆರಿಗೆಗಳನ್ನು ಕಾಲ್ತೊಡಕಾಗದಂತೆ ಸಾವರಿಸಿಕೊಳ್ಳುತ್ತ ಸಮೀಪ-ಅತಿ ಸಮೀಪ ಕುಳಿತಳು.

"ಈ ದೃಶ್ಯ ಚೆನ್ನಾಗಿದೆಯಲ್ಲವೇ ಶ್ರೀನಾಥ?"

"ಪದ್ಮಾ, ನನಗೆ ನಿನ್ನ ಈ ಮೋಹನ ರೂಪವಲ್ಲದೆ ಇಲ್ಲಿ ಇನ್ನೇನೂ ಕಾಣುವದಿಲ್ಲ. ಈ ರೂಪಶಿಖೆಯ ಝಳದಲ್ಲಿ ನಂದನದ ಕಲ್ಪವಲ್ಲಿಯೂ ಕಮರಿಹೋಗುವದೇ ಸರಿ".

ಶ್ರೀನಾಥ ಅವಳ ಹೆಗಲ ಮೇಲೆ ಕೈಯಿಡಹೋದ.

"ನಿನಗೇಕೋ ಭ್ರಾಂತಿ ಹಿಡಿದಿದೆ ಇಂದು. ನಡೆ ಸಂಜೆಯಾಗುತ್ತ ಬಂತು. ಈಗ ಮನೆಗೆ ಹೋಗೋಣ."

ಪದ್ಮೆ ಹಿಂದಕ್ಕೆ ಸರಿದು ನಿಂತಳು. ಶ್ರೀನಾಥನಲ್ಲಿ ಈಗ ಲೇಶವೂ

ತಾಳ್ಮೆ ಉಳಿದಿಲ್ಲ. ಆತ ಆಕೆಯ ಕೈಹಿಡಿದು ಜೋರಿನಿಂದ ಜಗ್ಗಿದ. ಪದ್ಮೆಯು ಕುಸಿದು ಕುಳಿತಳು.

"ಪದ್ಮಾ, ನನ್ನೆದೆಯಲ್ಲಿ ಅದೆಂತಹ ಉತ್ಪಾತ ನಡೆದಿದೆಯೆಂಬುದನ್ನು ನೀನು ತಿಳಿಯಲಾರೆ. ಹಾ, ಒಂದೇ ಬಾರಿ........ ನಾನೇನೂ ನಿನ್ನನ್ನು ತಿನ್ನುವದಿಲ್ಲ. ಒಂದು ನಿಮಿಷ ನನ್ನೀ ಬಾಳಿನ ಶೂನ್ಯವನ್ನು ಎಂದೆಂದಿಗೂ ಖಾಲಿಯಾಗದಂತೆ ತುಂಬಿಕೊಳ್ಳುತ್ತೇನೆ. ಹೂ ಇದೊಂದೇ ಸಲ......."

"ಛೀ, ಇದೆಂತಹ ವರ್ತನೆ! ಬಿಡು ಅಂದರೆ?"

ಶ್ರೀನಾಥನು ತನ್ನ ಎಲ್ಲ ಬಲವನ್ನೂ ಒಟ್ಟುಗೂಡಿಸಿ ಆಕೆಯನ್ನು ತೋಳಿನ ಮಧ್ಯೆ ಸೆಳೆದುಕೊಳ್ಳುತ್ತ ಕಪೋಲವನ್ನು ಚುಂಬಿಸಲು ಸಾಹಸಪಟ್ಟ. ಪದ್ಮೆ ಅವನ ಅಪ್ಪುಗೆಯಿಂದ ತಪ್ಪಿಸಿಕೊಳ್ಳಲು ವಿಶ್ವಪ್ರಯತ್ನ ಮಾಡಿದಳು.

"ತಡೆ ಪದ್ಮಾ, ಒಮ್ಮೆ ಈ ದಾಹ ಇಲ್ಲದಂತಾಗಲಿ. ನೋಡು, ನನ್ನ ಈ ಹಣೆಯ ಬೆವರು ನಿನ್ನೀ ಕುಂಕುಮಕ್ಕಾಗಿ ನೀರಡಿಸಿಕೊಂಡಿವೆ."

ಶ್ರೀನಾಥನ ತುಟಿ ಅವಳ ಕೆನ್ನೆಯನ್ನು ಸೋಂಕಿತು.

"ಶ್ರೀನಾಥ, ಈ ಕುಂಕುಮಕ್ಕೆ ನನಗೆ ಬಾಧ್ಯತೆ ಇಲ್ಲ. ಬಿಡು."

ಪದ್ಮೆಯು ಬಿಕ್ಕುತ್ತಿದ್ದಳು. ಅವಳ ಕೆನ್ನೆ ಕಣ್ಣೀರಿನಿಂದ ತೊಯ್ದು ಹೋಯಿತು. ಶ್ರೀನಾಥನ ಆಸುರೀ ಆವೇಗ ಒಮ್ಮೆಲೇ ಮಾಯವಾಯಿತು. ಆತನ ತೋಳಿನ ತೆಕ್ಕೆ ತನ್ನಷ್ಟಕ್ಕೆ ಸಡಲಿಸಿತು.

"ಇದೇನು ಅಳು ಪದ್ಮಾ. ಮದುವೆಯ ಮಾತನ್ನು ಅಪೇಕ್ಷಿಸಿಕೊಂಡಿರುವೆಯೇನೋ? ನಮ್ಮ ಜನಕ್ಕೆ ಇಂಥ ಮದುವೆಯೆಂದರೆ ಅದೊಂದು ಭೀಭತ್ಸ. ಅದೊಂದು ಅಕ್ಷಮ್ಯ ಪಾಪಾಚಾರ. ಈ ಭಾವನೆ ತೊಲಗಬೇಕು. ಇಲ್ಲವಾದರೆ ಸತಿ ಹೋಗುವ ಘೋರಕ್ಕಿಂತ ಇದೇನೂ ಕಡಿಮೆಯಾಗುವದಿಲ್ಲ. ಅಲ್ಲಿ ಹೆಣ್ಣೊಂದೇ ಸುಟ್ಟುಕೊಂಡು ಸತ್ತರೆ ಇದೋ, ಗಂಡು-ಹೆಣ್ಣು ಇಬ್ಬರಿಗೂ ಬಂತು. ಅಲ್ಲಿಯ ಸಾವು ಹೆಚ್ಚೆಂದರೆ ಒಂದು ತಾಸಿನದು; ಇಲ್ಲಿ ಬದುಕಿರುವ ಸಮಯವೆಲ್ಲ ಸತ್ತಹಾಗೆಯೇ ಇರಬೇಕು. ಈ ಒಡನಾಟ ಅತಿರೇಕವಾಗಿ ಬಿಟ್ಟಿತು. ಸಾಕು!"

"ನಿಜ ಶ್ರೀನಾಥ, ನೀನು ಹೇಳಿದುವೇ ಸತ್ಯ. ನಮಗಿದು ಹೆಚ್ಚು. ಅಂತಹ ಸಂಬಂಧ ಹಾಳಾಗಲಿ, ನಡೆ ಇನ್ನು ಮನೆಗೆ ಹೋಗೋಣ."

ಪದ್ಮೆಯು ಈಗ ಶ್ರೀನಾಥನ ಕೈಯನ್ನು ತಾನಾಗಿಯೇ ಹಿಡಿದು ಕೊಂಡು ಮೇಲಕ್ಕೆ ಎದ್ದಳು. ಒಂದು ಕ್ಷಣದ ಹಿಂದೆ ಅಳುತ್ತಿದ್ದ ಆಕೆಯ ಮೋರೆಯಲ್ಲಿ ಈಗ ಯಾವ ಕೊರಗೂ ಇಲ್ಲದಂತಿದೆ. ಇಬ್ಬರೂ ಮನೆಯ ಹಾದಿ ಹಿಡಿದರು. ಪದ್ಮೆಯು ಎಡಬಲ ಪಾರ್ಶ್ವಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ ಯಾರೂ ಇಲ್ಲವೆಂದು ಮನಸ್ಸಿಗೆ ಸಿದ್ಧಾಂತವಾದ ಮೇಲೆ ಶ್ರೀನಾಥನನ್ನು ಹತ್ತಿರಕ್ಕೆ ಕರೆದು "ಮನಸ್ಸಿಗೆ ಹಚ್ಚಿಕೊಂಡೆಯೇನು, ಶ್ರೀನಾಥ? ನನ್ನ ಅಳುವಿಗೆ ಅರ್ಥವೇ ಇಲ್ಲ. ನನ್ನ ಕಣ್ಣೀರು ಬರಿನೀರು. ಈಗ ಕೇಳು. ನಾನು ನಿನ್ನನ್ನು ಅಂತಃಕರಣದಿಂದ ಪ್ರೀತಿಸುತ್ತೇನೆ. ಇಷ್ಟು ಸಾಲದೇ?" ಎಂದು ಮುಖದಲ್ಲಿ ಕಣ್ಣಿಟ್ಟು ಹೇಳಿದಳು.

"ಪದ್ಮಾ, ನಾನಿಷ್ಟು ಭಾಗ್ಯಶಾಲಿಯೋ? ನಿನ್ನ ಬಾಯಿಂದ ಈ ಮಾತು ಬಂದ ಮೇಲೆ ನನಗೆ ಜಗತ್ತಿನಲ್ಲಿ ಇನ್ನಾವುದೂ ಬಯಕೆ ಇಲ್ಲ. ಇಂದಿನ ಈ ಆನಂದ ಈ ಜನ್ಮದಲ್ಲಿಯೇ ಹಿರಿದು. ಎಂದು ನಾನು ತಿಳಿಯುತ್ತೇನೆ."

ಎಮ್ಮೆ ದನಗಳು ಕೊಟ್ಟಿಗೆ ಸೇರುವ ಸಮಯವಾದ್ದರಿಂದ ಇಬ್ಬರೂ ಬೇಗ ಬೇಗನೇ ಹೆಜ್ಜೆ ಹಾಕುತ್ತ ಮನೆಗೆ ಮುಟ್ಟಿಕೊಂಡರು.

## ೧೮

ಶ್ರೀನಾಥನದು ವಿಚಿತ್ರ ಪ್ರಕೃತಿ. ತಾಸು ಹೊತ್ತು ಏರಿದರೂ ಆತ ಹಾಸಿಗೆ ಬಿಡುವದಿಲ್ಲ. ಆದರೂ ಒಮ್ಮೊಮ್ಮೆ ನಸುಕಿನಲ್ಲಿಯೇ ಎದ್ದು, ಹಿಂದಿನ ರಾತ್ರಿ ತಾನು ರಚಿಸಿದ ಶ್ಲೋಕವನ್ನೋ, ಕವನವನ್ನೋ ಕಾಗದ ತೆಗೆದು-ಕೊಂಡು ಬರೆಯುವದೂ ಉಂಟು. ಈ ದಿನವೂ ಆವನು ತೀರ ನಸುಕಿನಲ್ಲಿ ಎದ್ದು ಕಾಗದಕ್ಕಾಗಿ ಹುಡುಕಾಡಿದ. ನಡುಮನೆಯ ಕಡೆ ಹಣಿಕಿ ನೋಡಿದಾಗ ನಾಗಂದಿಗೆಯ ಸಂದಿನಲ್ಲಿ ಒಂದು ಕಾಗದದ ತುಂಡು ಸಿಕ್ಕಿಸಿಕೊಂಡಿತ್ತು. ಅದನ್ನೇ ತೆಗೆದುಕೊಂಡ. ಒಂದು ಮಗ್ಗಲು ಖಾಲಿಯಿದೆ. ಅಂದೇ ರಚಿಸಿದ ಶ್ಲೋಕವನ್ನೂ, ಭಾವಾರ್ಥವನ್ನೂ ಸರ ಸರ ಬರೆದ. ಪದ್ಮೆಯು ಅದನ್ನು ಕೇಳಿದರೆ ಎಷ್ಟು ಸಂತೋಷಪಟ್ಟುಕೊಂಡಾಳು? ಆ ಶ್ಲೋಕವನ್ನು ಅವಳೆದುರಿಗೆ ಎಷ್ಟು ಹೊತ್ತಿಗೆ ಓದಿಹೇಳುವೆನೋ ಎಂಬ ಲವಲವಿಕೆ ಆತನಿಗೆ.

ಹಿಂದಿನ ದಿನದ ಮಧುರ ಘಟನೆಯಿಂದುಂಟಾದ ಮನಃಪ್ರಸಾದದ ಆಧಿಕ್ಯ ಅವನ ಮೋರೆಗೆ ಹೊಸ ಕಳೆಯನ್ನು ಕೊಟ್ಟಿದೆ. ಅಂದಿನ ಮುಂಜಾವು ಹೊಸದೊಂದು ತೇಜವನ್ನು ಹಿಡಿದುಕೊಂಡಂತಿದೆ. ಆ ಸಮಯ ಅವನ ಕಣ್ಣಿಗೆ ಬಿದ್ದ ವಸ್ತುಗಳೆಲ್ಲ ನವೀನವಾಗಿಯೂ, ಆನಂದಕರವಾಗಿಯೂ ಕಾಣುತ್ತಿವೆ.

ಇದ್ದಕ್ಕಿದ್ದ ಹಾಗೆಯೇ ಶ್ರೀನಾಥನ ದೃಷ್ಟಿ ಕಾಗದದ ಇನ್ನೊಂದು ಮಗ್ಗುಲಿಗೆ ಹೊರಳಿತು. ಸ್ವಲ್ಪ ಮಟ್ಟಿಗೆ ಮಸುಕಾಗಿದ್ದರೂ ಮುದ್ದಾದ ಅಕ್ಷರಗಳ ಪಂಙ್ತಿ. ಹೀಗೆ ಬರೆದಿದೆ ಅಲ್ಲಿ !

ಡಾ|........ರಿಗೆ ವಂದನೆಗಳು.

ಪ್ರಿಯರೇ !

ನೀವು ಇಲ್ಲಿಂದ ಹೊರಟು ಹೋದಂದಿನಿಂದ ಇಲ್ಲಿ ನನಗೆಷ್ಟು ಕಷ್ಟವಾಗುತ್ತಿದೆಯೆಂಬುದನ್ನು ದೇವರು ಬಲ್ಲ ! ಆ ಕಾಯಿಲೆಯಲ್ಲಿ ನೀವು ನನಗೇಕೆ ಸಾಯಲು ಬಿಡಲಿಲ್ಲವೋ ! ನಿಮ್ಮ ಹೆಂಡತಿ ತೀರಿಕೊಂಡಳೆಂದು ಅಣ್ಣ ಬರೆದಿದ್ದಾನೆ. ನಿಮಗಾದ ಅಗಲಿಕೆಯ ನೋವಿನಿಂದ ನೀವು ನನ್ನದನ್ನು ಸ್ವಲ್ಪ ಮಟ್ಟಿಗಾದರೂ ಊಹಿಸಬಲ್ಲಿರಲ್ಲವೇ ? ಈಗ ನಿಮಗೆ ಹೆಣ್ಣಿನ ಅವಶ್ಯಕತೆ ಇದೆ. ನನ್ನನ್ನು ನೀವು ದಾಸಿಯೆಂದು ತಿಳಿದರೂ ಸರಿಯೇ. ಒಮ್ಮೆ ಇಲ್ಲಿಗೆ ಬಂದು ಕರೆದುಕೊಂಡು ಹೋಗಿ. ಕೊನೆಯದಾಗಿ ಒಂದು ಕಾಗದ ಬರೆದರೂ ನಾನು ನೀವಿದ್ದಲ್ಲಿಗೆ ಬಂದುಬಿಡುತ್ತೇನೆ. ನನಗೀ ಬಾಳು ಸಾಕಾಗಿದೆ. ಈ ಪತ್ರ ಬರೆಯುವ ಹುಚ್ಚು ನನಗೇಕೆ ಬಂತೋ ? ನನ್ನಾಸೆ ಸಫಲವಾಗಬಹುದೇ ?

ಇತಿ

ನಿಮ್ಮವಳಾಗಬಯಸುವ,

ಪದ್ಮಾ

ಅಕಸ್ಮಾತ್ತಾಗಿ ಎಲ್ಲಿಂದಲೋ ಗುಂಡೊಂದು ಎದೆಗೆ ಬಡಿದಂತಾಯಿತು. ಕಣ್ಣುಗಳಿಗೆ ಕತ್ತಲೆ ಕವಿಯಿತು. ಒಂದು ಕ್ಷಣ ಚೈತನ್ಯ ಉಡುಗಿದಂತಾಗಿ ಆತ ಅಲ್ಲಿಯೇ ಗೋಡೆಗೆ ಆತುಕೊಂಡ. ಚಲವಿಚಲಿತವಾದ ಹೃದಯದ ಕ್ಷೋಭೆಯನ್ನು ತಣಿಸಿಕೊಳ್ಳುವುದು ಆಗಿನ ಸ್ಥಿತಿಯಲ್ಲಿ ಶ್ರೀನಾಥನಿಗೆ ಸಾಧ್ಯವೇ ?

"ಪದ್ಮೆಯ ನಡತೆಯನ್ನು ವಿಚಾರಿಸುವ್ರಪಕ್ಕೆ ನಾನು ಯಾರು? ನನ್ನಲ್ಲಿ ಲೇಶಮಾತ್ರವೂ ಆ ಯೋಗ್ಯತೆಯಿಲ್ಲ. ನಾನು ಹುಚ್ಚ. ಆದರೂ ಈ ಕಳವಳವನ್ನು ಹೋಗಲಾಡಿಸುವದೇ? ಛೇ, ಇಲ್ಲ. ಇದೊಂದು ಜ್ವಾಲಾಮುಖಿ. ನಿನ್ನೆ ಅವಳೇಕೆ ಅತ್ತಳು? ಸುಭಾಷಿತಕಾರ ಹೇಳಿದುದು ಸುಳ್ಳಲ್ಲವೇನೋ? ಸ್ತ್ರೀಯಶ್ಚರಿತ್ರಂ........ ದೇವೋ ನ ಜಾನಾತಿ. ಹಾಯ್, ಹೀಗಿದ್ದರೂ ನಾನು ಪದ್ಮೆಯನ್ನು ತಿರಸ್ಕಾರದಿಂದ ನೋಡುವುದು ಶಕ್ಯವೇ? ಇಲ್ಲ. ಅದು ಅಸಂಭವ."

ಹೀಗೆ ಏನೇನೋ ಅಂದುಕೊಳ್ಳುತ್ತಿದ್ದಾನೆ ಶ್ರೀನಾಥ! ಆತನ ವಿಚಾರದ ಇನ್ನೊಂದು ಬದಿ ಇನ್ನಷ್ಟು ಸ್ವಾರ್ಥಮಯವಾಗಿತ್ತು. "ಪದ್ಮೆಯ ಚಾರಿತ್ರ್ಯವನ್ನು ನಾನು ಊಹಿಸುವದಕ್ಕಿಂತಲೂ ಹೆಚ್ಚು ಹೊಲಸಾಗಿ ಮಾಡುವ ಇನ್ನೂ ನೂರಾರು ಅಪ್ರಿಯವಾದ ಅಸಹ್ಯವಾದ ಇಂಥ ಮಾತುಗಳು ಎದೆಯಲ್ಲಿ ಅದೆಷ್ಟು ಘೋರವಾದ ಯಾತನೆಯನ್ನು ಉಂಟು ಮಾಡಿದರೂ ವಜ್ರದಿಂದ ಕೆತ್ತಿದಂತೆ ನಿನ್ನೆಯ ಪದ್ಮೆಯ ಆ ಅಮೃತವಾಣಿ "ನಾನು ನಿನ್ನನ್ನು ಪ್ರೀತಿಸುತ್ತೇನೆ. ಇಷ್ಟು ಸಾಲದೇ?" ಎನ್ನುವ ಆ ಸುಧೆಯ ಸೆಲೆ ಎಂದಿಗೂ ಆರಲಾರದು. ಆ ಕೆನ್ನೆಯ ಸೋಂಕು, ಅದೊಂದು ಸ್ಪರ್ಶಮಣಿಯ ಕೈವಾಡ, ನನ್ನ ಹೀನ ಬಾಳನ್ನು ಬಂಗಾರವಾಗಿರಿಸಿದೆ. ಇನ್ನು ಇಲ್ಲಿ ಉಳಿದು ಆ ಆನಂದದ, ಆ ತೃಪ್ತಿಯ ಅಮೂಲ್ಯತೆಯನ್ನು ಕಡಿಮೆ ಮಾಡಲಾರೆ. ನನಗಿಷ್ಟು ಸಾಕು."

ಮೊದಲಿನಿಂದಲೂ ಅಧೀರ ಪ್ರಕೃತಿಯವನಾದ ಶ್ರೀನಾಥನಿಗೆ ಒಂದು ಕ್ಷಣ ಸಹ ಅಲ್ಲಿರುವುದು ಈಗ ಅಸಹ್ಯವಾಯಿತು. ಕಾಗದವನ್ನು ಇದ್ದ ಜಾಗೆಯಲ್ಲಿಯೇ ಇಟ್ಟು ಸಾಮಾನುಗಳನ್ನೆಲ್ಲ ಹೇಗೆ ಹೇಗೋ ಬೇಗಿನಲ್ಲಿ ತುರುಕಿ ಆತ ಅಲ್ಲಿಂದ ಹೊರಡಲು ಸಿದ್ಧನಾದ. ಪದ್ಮೆಯನ್ನೊಮ್ಮೆ ಕೊನೆಯ ಸಾರೆ ಮರೆಯಲ್ಲಿ ನಿಂತಾದರೂ ನೋಡಬೇಕೆನ್ನಿಸಿತು. ಆದರೆ ಆಕೆ ತೋಟಿಗೆಯ ಕಡೆ ಹೋಗಿದ್ದಾಳೆ. ಹುಡುಗ ಸುಬ್ಬಯ್ಯನು ಮುಖಮಾರ್ಜನ ಮಾಡಿ ಹಣೆಗೆ ವಿಭೂತಿ ಹೊಸೆದುಕೊಂಡು ಪಾಠ ಸುರುವು ಮಾಡುವುದಕ್ಕಾಗಿ ಪುಸ್ತಕ ಬಿಚ್ಚಿದ್ದ. ಶ್ರೀನಾಥ "ಸುಬ್ಬೂ, ಅಗತ್ಯದ ಕೆಲಸವಿದೆ. ಹೋಗಬೇಕು. ಅಕ್ಕನಿಗೂ, ಅಪ್ಪನಿಗೂ ನಾನು ಕೆಲವು ದಿವಸಗಳಲ್ಲಿ ಮತ್ತೆ ಬರುವದಾಗಿ ಹೇಳು" ಎಂದ.

ಆ ಅವತಾರ ನೋಡಿ ಸುಬ್ಬಯ್ಯ ಕಕ್ಕಾಬಿಕ್ಕಿಯಾಗಿ ಹೋದ.

"ಇದೇನು ಉಪಾಧ್ಯಾಯರೇ, ಈಗ ಕಾಫಿ ತಯಾರಾಗುವದು. ಇನ್ನೊಂದು ಕ್ಷಣಕ್ಕೆ ತೋಟದಿಂದ ಬರುತ್ತಾನೆ. ಸ್ವಲ್ಪ ತಡೆಯಿರಿ."

ಹುಡುಗನ ಮಾತನ್ನು ಶ್ರೀನಾಥ ಲಕ್ಷಿಸಲಿಲ್ಲ. ಸಾಧ್ಯವಿದ್ದಷ್ಟು ತೀವ್ರ ಗತಿಯಿಂದ ಆತ ತಿರುಗಿ ನೋಡದೆ ಹೊರಟುಹೋದ.

## ೨೦

"ಅಕ್ಕ, ಉಪಾಧ್ಯಾಯರು ಹೋದರು."

ಕೊಟ್ಟಿಗೆಯಿಂದ ಬರುತ್ತಿದ್ದ ಪದ್ಮೆಯ ಕೈಯೊಳಗಿನ ಹಾಲತಂಬಿಗೆ ನೆಲಕ್ಕೆ ಬಿತ್ತು. ಹುಡುಗ ಸುಬ್ಬಯ್ಯನ ಸ್ವರವು ವೇದನೆಯಿಂದ ವಿಕೃತವಾಗಿತ್ತು.

"ಆँ, ಎಲ್ಲಿಗೆ ಹೋದರು?" ಪದ್ಮೆಯ ಮೋರೆ ಗಾಬರಿಯಿಂದ ವಿರೂಪವಾಗಿ ಹೋಗಿದೆ.

"ಅದನ್ನು ಹೇಳಲಿಲ್ಲ. ಕಾಫಿ ಕುಡಿದು ಅಪ್ಪನನ್ನು ಕಂಡು ಹೋಗಿರೆಂದು ನಾನು ಹೇಳಿದೆ. ಅವರು ಲಕ್ಷಿಸಲಿಲ್ಲ. ಅಗತ್ಯದ ಕೆಲಸವಿದೆ. ಸ್ವಲ್ಪ ದಿವಸಗಳಲ್ಲಿ ತಿರುಗಿ ಬರುವೆನೆಂದು ಹೇಳುತ್ತಲೆ ತಿರುಗಿ ಕೂಡ ನೋಡದೆ ಹೊರಟುಹೋದರು.

"ಓಡು, ಓಡು, ನಡೆ. ಅವರನ್ನು ಬಿಡಬೇಡ. ನಾನು ಕರೆದೆನೆಂದು ಹೇಳು."

ಪದ್ಮೆಯು ಆಕ್ರೋಶ ಮಾಡಿದಳು. ಸುಬ್ಬಯ್ಯ ಓಡಿದ. ಅವಳಿಗೆ ತಾನೂ ಓಡಬೇಕೆಂದೆನ್ನಿಸಿತು. ಆದರೆ ಕಾಲುಗಳು ಏಳುವದಿರಲಿ; ಬುಡದ ನೆಲ ಕಳಚಿಹೋಯಿತೋ ಎಂಬಂತಾಗಿ ಆಕೆ ಆ ಧೂಳಿನಲ್ಲಿಯೇ ಕುಸಿದು ಕುಳಿತಳು. ಚಲ್ಲಿಹೋದ ಹಾಲು ಆ ನೆಲದಲ್ಲಿ ಕೆಸರು ಹುಟ್ಟಿಸಿದೆ. ಪದ್ಮೆಗೆ ಅದರ ಪರಿವೆಯೆಲ್ಲಿ?

ವಿಶ್ವನಾಥಯ್ಯನು ತೋಟದಿಂದ ಬಂದ.

"ಅಪ್ಪಾ, ನಾಲ್ಕು ಆಳುಗಳನ್ನು ಆಸುಪಾಸು ಹುಡುಕಿಕೊಂಡು ಬರುವಂತೆ ಕಳುಹಿಸು. ಉಪಾಧ್ಯಾಯರಿಗೆ ಅಕಾಸ್ಮಾತ್ತಾಗಿ ಅದೆಂಥ ವಿಕಾರ ತಾಗಿತೋ? ನಡೆ, ನಿಲ್ಲಬೇಡ."

ಯಾರಿಗೆ ಹುಚ್ಚು ಹಿಡಿದದ್ದು? ವಿಶ್ವನಾಥಯ್ಯನಿಗೆ ಮಗಳ ಆಗಿನ

ಆಕಾರ ನೋಡಿ ' ನಿಜವಾಗಿ ಇವಳೀಗ ಹುಚ್ಚಿ ' ಎಂಬ ಭಾವನೆ ಬಂತು. ಸುಬ್ಬಯ್ಯನು ತೇಕುತ್ತಲೇ ಬಂದ.

" ಅವರು ಕೈಗೆ ಸಿಗಲಿಲ್ಲ. ನಾನು ಅದೆಷ್ಟು ಓಡಿದೆ. "

ಹುಡುಗನಿಂದ ವಿಶ್ವನಾಥಯ್ಯ ಎಲ್ಲವನ್ನೂ ನಿದಾನವಾಗಿ ಕೇಳಿಕೊಂಡ.

" ಅಯ್ಯೋ, ಅವನೇಕೆ ಹೇಳದೆ ಹೋದ. ಎರಡು ದಿನದ ಮಟ್ಟಿಗಾದರೂ ಖರ್ಚಿಗೆ ಅವನಲ್ಲಿ ಹಣವಿದೆಯೋ ಇಲ್ಲವೋ ? ಕೊಟ್ಟಾದರೂ ಕಳುಹುತ್ತಿದ್ದೆ. " ವಿಶ್ವನಾಥಯ್ಯ ವಿಷಾದದಿಂದ ಹೇಳಿದ.

ಅಂದು ಯಾರೂ ಬೆಳಗಿನ ಕಾಫಿ ತೆಗೆದುಕೊಳ್ಳಲಿಲ್ಲ. ಒಂಬತ್ತು ತಾಸು ದಾಟಿದರೂ ಶ್ರೀನಾಥನ ಗೊತ್ತು ಹತ್ತಲಿಲ್ಲ. ಆಳುಗಳು ಸುತ್ತು ನಾಲ್ಕಾರು ಮೈಲು ತಿರುಗಿ ಪ್ರಯೋಜನವಾಗದೆ ಬಂದರು. ಕೊನೆಗೆ ಎಲ್ಲರೂ ನಿರಾಶರಾದರು. ಪದ್ಮೆಯು ಇಡೀ ದಿನ ಊಟ ಮಾಡದೆ ಕಣ್ಣೀರು ಸುರಿಸುತ್ತಲೇ ಇದ್ದಳು. ವಿಶ್ವನಾಥಯ್ಯನಿಗೂ ಅಂದು ಏನೂ ಸೇರದು. ಹುಡುಗ ಸುಬ್ಬಯ್ಯನ ಅವಸ್ಥೆ ಕೂಡ ನೋಡಿದವರಿಗೆ ಕಸಿವಿಸಿ ಹುಟ್ಟಿಸುವಂತಿತ್ತು.

ಪದ್ಮೆಯು ಮತ್ತೊಮ್ಮೆ ತಮ್ಮನನ್ನು ' ಶ್ರೀನಾಥ ಏನು ಹೇಳಿದ ' ಎಂದು ಕೇಳಿದಳು.

" ಇನ್ನೇನೂ ಇಲ್ಲ. 'ನಿನಗೂ ಅಪ್ಪನಿಗೂ ತಾನು ಸ್ವಲ್ಪ ದಿವಸಗಳಲ್ಲಿ ಬರುವದಾಗಿ ತಿಳಿಸು' ಎಂದು ಹೇಳಿದರು, ಇಷ್ಟೇ. ಉಪಾಧ್ಯಾಯರು ನಸುಕಿನಲ್ಲಿಯೇ ಎದ್ದರು. ಕಾಗದವನ್ನು ತೆಗೆದುಕೊಂಡು ನಾಲ್ಕು ಪಂಕ್ತಿ ಬರೆದಂತೆ ಮಾಡಿದರು. ಹಾಗೆಯೇ ಬೇಗಿನಲ್ಲಿ ಸಾಮಾನು ತುಂಬಿದರು. ನನ್ನ ಮಾತಿಗೆ ಅವರು ಕಿವಿಗೊಡಲೂ ಇಲ್ಲ. ಬೇಗ ಬೇಗ ಹೆಜ್ಜೆ ಹಾಕುತ್ತ ಒಮ್ಮೆ ಸಹ ತಿರುಗಿ ನೋಡದೆ ಹೋಗಿಬಿಟ್ಟರು."

ಸುಬ್ಬಯ್ಯ ಅಳುವ ಸ್ವರದಲ್ಲಿ ಹೇಳಿದ. ಪದ್ಮೆಗೆ ಒಂದೂ ಅರ್ಥವಾಗಲಿಲ್ಲ. ಅವಳು ಒಂದೆಡೆ ಅವಸಾನಗುಂದಿದವಳಾಗಿ ಬಿದ್ದುಕೊಂಡಳು.

## ೨೧

ಮರುದಿವಸ ಪದ್ಮೆಯ ಅಣ್ಣನ ಪತ್ರ ಬಂತು. " ಶ್ರೀನಾಥನನ್ನು ಚೆನ್ನಾಗಿ ನೋಡಿಕೊಳ್ಳುವದಾಗಿಯೂ ತಾನು ಇನ್ನು ಹದಿನೈದು ದಿನಗಳ

ಒಳಗೆ ಊರಿಗೆ ಬರುವದಾಗಿಯೂ" ಬರೆದಿದ್ದ. ಕಾಗದ ಓದಿಕೊಂಡು ವಿಶ್ವನಾಥಯ್ಯ "ಅಯ್ಯೋ, ಶ್ರೀನಾಥ? ಎಲ್ಲಿಗೆ ಹೋದೆಯಪ್ಪಾ!" ಎಂದು ಹಣೆ ಹಣೆ ಬಡಿದುಕೊಂಡ. ಹುಡುಗ ಸುಬ್ಬಯ್ಯನು "ಅಪ್ಪಾ, ಉಪಾಧ್ಯಾಯರು ಇನ್ನು ಇಲ್ಲಿಗೆ ಬರುವದಿಲ್ಲವೇನು? ಅವರೇ ಬಂದು ಪಾಠ ಹೇಳುವದಾದರೆ ನಾನು ಓದುತ್ತೇನೆ. ಇಲ್ಲವಾದರೆ ನನಗೀ ಮಂತ್ರಪಾಠ ಸಾಕು" ಎಂದು ಗೋಗರೆದ. ಪದ್ಮೆಗೆ ಈಗ ಪ್ರಪಂಚವೇ ಶೂನ್ಯವಾಗಿ ಕಾಣುತ್ತಿದೆ.

ಅಂದು ಮಧ್ಯಾಹ್ನ ಪದ್ಮೆ ಹೊಳೆಯ ಕಡೆ ಹೋಗಿ ಹಾಸುಗಲ್ಲಿನ ಮೇಲೆ ಕುಳಿತು ಕಣ್ಣೀರು ಕರೆದಳು. ನಿಂದ್ಯವೆಂದಾದರೂ ಪ್ರಿಯವಾದ ಶ್ರೀನಾಥನ ವರ್ತನೆಯನ್ನು ನೆನೆಯುತ್ತಿದ್ದಂತೆ "ಈ ಬಂಡೆಗಲ್ಲಿಗೆ ನೆರೆಯುವರ ಬಾಯಿ ಬಂದು ಬಿಟ್ಟರೆ?" ಎಂಬ ಕಲ್ಪನೆ ಬಂದು ಅವಳು ನಡುಗಿ ಹೋದಳು. ಮತ್ತೆ ಅಲ್ಲಿ ನಿಲ್ಲುವುದು ಸಾಧ್ಯವಾಗದೆ ಹಾಗೆಯೇ ಅವಳು ಮನೆಗೆ ಬಂದುಬಿಟ್ಟಳು.

ಪ್ರತಿ ಸೋಮವಾರವೂ ಅವಳು ಒಪ್ಪತ್ತು ಊಟ ಮಾಡುತ್ತಾಳೆ. ಶ್ರೀನಾಥನು ಇರುವಾಗಲೆಲ್ಲ ರಾತ್ರಿ ಕಾಲಕ್ಕೆ ಅವನೂ ಒಂದು ಚೂರು ತಿನ್ನುತ್ತಾನೆಂದು ಆಕೆ ಗೋದಿಯ ಪುರಿ ಮುಂತಾದ ತಿಂಡಿ ಮಾಡುತ್ತಿದ್ದಳು. ಈಗ ಪದ್ಮೆ ಸೋಮವಾರ ಬಂದಾಗ ಮೊದಲಿನಂತೆ ಬರೀ ಬಿಸಿ ನೀರು ಸ್ವಲ್ಪ ಹಾಲು ಬೆರಿಸಿಕೊಂಡಾಗಲಿ, ಹಾಗೆಯೇ ಆಗಲಿ ಕುಡಿಯುತ್ತಾಳೆ.

ಮತ್ತೆ ನಾಲ್ಕಾರು ದಿನ ಕಳೆಯಿತು. ಘಟ್ಟದ ತಳದ ಕೂಲಿಯ ಹೆಣ್ಣು "ಅಮ್ಮಾ, ಈಗಿತ್ತ ನೀವೇಕೆ ಹಣೆಗೆ ಕುಂಕುಮ ಹಚ್ಚಿಕೊಳ್ಳುವದಿಲ್ಲ?" ಎಂದು ಪದ್ಮೆಯನ್ನು ಕೇಳಿದಳು.

ಹಾಯ್, ಜಗತ್ತಿನಲ್ಲಿ ಇಂಥ ಕಟುವಾದ ವಿಡಂಬನೆಯೂ ಇದೆ. ಸಾಮಾನ್ಯಳಾದ ಕೂಲಿಯ ಹೆಂಗುಸಿಗೂ ಇಂದು ಪದ್ಮೆ ಹಗುರಾಗಿ ಬಿಟ್ಟಿದ್ದಾಳೆ.

"ಹಾ, ಶ್ರೀನಾಥನಿನ್ನೂ ಸತ್ತಿರಲಾರನು".

ಪದ್ಮೆಗೆ ತಾನೆಲ್ಲಿ ಶ್ರೀನಾಥನಿಗಾಗಿ ಅಮಂಗಲ ಕರೆಯುತ್ತಿರುವೆನೋ ಎಂಬ ಹೆದರಿಕೆ ಬಂದು ಆಗಲೇ ಆಕೆ ಒಳಮನೆಗೆ ಹೋಗಿ ಕುಂಕುಮವನ್ನು ಹಣೆಗೆ ಹಚ್ಚಿಕೊಂಡಳು.

## ೧೧

ಪದ್ಮೆಯ ಅಣ್ಣ ರಾಮನಾಥನು ಮನೆಗೆ ಬರುತ್ತಲೇ “ಶ್ರೀನಾಥನಿಗೇನಾಗಿತ್ತು? ಅವನನ್ನೇಕೆ ಹೋಗಗೊಟ್ಟಿರಿ? ನನಗೆ ಸಮಾಚಾರ ತಿಳಿಸಲಿಲ್ಲವೇಕೆ? ಆತ ಹೋಗಿ ಎಷ್ಟು ದಿನಗಳಾದವು?” ಹೀಗೆ ಪ್ರಶ್ನೆಯ ಸುರಿಮಳೆಯನ್ನೇ ಕರೆದ. ಯಾರಿಗೂ ಮಾತೇ ಬರದು. ವಿಶ್ವನಾಥಯ್ಯನೇ ಧೈರ್ಯ ಮಾಡಿಕೊಂಡು ಮಾತೆತ್ತಿದ.

“ನಿನ್ನ ಕಾಗದ ಬರುವ ಹಿಂದಿನ ದಿನವೇ ಶ್ರೀನಾಥ ಬೆಳಗಿನ ಕಾಫಿ ಸಹ ಕುಡಿಯದೆ ಯಾರಿಗೂ ಹೇಳದೆ ಒಮ್ಮಿಂದೊಮ್ಮೆ ಹೊರಟುಹೋದ. ಇಲ್ಲಿಗೆ ಬರುವ ಮೊದಲು ಅವನು ರೋಗಿಯಂತಿದ್ದ. ಇಲ್ಲಿ ಅವನ ಆರೋಗ್ಯ ಸುಧಾರಿಸಿತು. ಒಂದೆರಡು ವಾರಗಳಲ್ಲಿಯೇ ಮಾನಸಿಕ ಅಸ್ವಾಸ್ಥ್ಯ ಕೂಡ ಇಲ್ಲದಂತಾಗಿ ಈಗಿತ್ತ ಅವನು ತುಂಬಾ ಉಲ್ಲಾಸದಿಂದ ಇರುತ್ತಿದ್ದ. ಈ ಮಧ್ಯೆ ಏನು ವಿಚಾರ ಬಂತೋ? ಕಾರಣ ಅವನಿಗೇ ಗೊತ್ತು. ಹೊರಟು ಹೋದ. ಇಷ್ಟೇ! ಅವನು ಹೋದಂದಿನಿಂದ ಮನೆಯಲ್ಲಿ ಕಣ್ಣೀರು ಹಾಕದ ದಿನವಿಲ್ಲ. ನೋಡು ನಿನ್ನೆ ಮೊನ್ನಿನ ವರೆಗೂ ಆಳುಗಳಿಂದ ಅವನನ್ನು ಹುಡುಕಿಸುತ್ತಲೇ ಇದ್ದೇನೆ. ಎಲ್ಲ ನಿಷ್ಪ್ರಯೋಜನವಾಯಿತು. ನೀನು ಹೇಗೂ ಬರುವೆಯಾದ್ದರಿಂದ ಕಾಗದ ಬರೆಯಲಿಲ್ಲ. ಅವನಿಲ್ಲದ ಸಂಗತಿ ನಿನಗೆ ತಿಳಿದುದು ಹೇಗೆ! ರಾಮೂ?”

ರಾಮನಾಥ ಹೇಳತೊಡಗಿದ.

“ಬರುವಾಗ ಡಾ|| ಗೋವರ್ಧನರಾಯರನ್ನು ಭೆಟ್ಟಿಯಾಗಲು ಹೋಗಿದ್ದೆ. ಅವರು ಶ್ರೀನಾಥನೆಂಬವನು ಚಿಕಿತ್ಸೆಗಾಗಿ ಬಂದಿದ್ದನೆಂದೂ ನಿಮ್ಮ ಮನೆಯಲ್ಲಿ ಉಳಿದ ಸಂಗತಿಯನ್ನು ಹೇಳಿದನೆಂದೂ ಹೇಳಿದರು.”

“ಏನು? ಗೋವರ್ಧನರಾಯರಲ್ಲಿಯೇ? ಯಾವಾಗ ಬಂದಿದ್ದನಂತೆ. ಅವನಿಗೇನಾಗಿತ್ತು?” ತಂದೆ ವಿಶ್ವನಾಥಯ್ಯ ಗಾಬರಿಯಿಂದ ಕೇಳಿದ. ಪದ್ಮೆಯ ಮೈಯೊಳಗಿನ ರಕ್ತ ಬತ್ತಿಹೋದಂತೆ ಆಗಿ ಆ ಮುಖ ಬಿಳಚಿಕೊಂಡಿದೆ. ರಾಮನಾಥ ಕಥೆಯನ್ನು ಮುಂದರಿಸಿದ.

“ನಾಲ್ಕೇ ದಿನದ ಹಿಂದಿನ ಮಾತು. ಎಲ್ಲಿಯೋ ರಾತ್ರಿ ಕಗ್ಗತ್ತಲೆಯಲ್ಲಿ ಹೋಗುವಾಗ ಮಾರ್ಗದ ಅಂಚಿನ ಕಾಲುವೆಯಲ್ಲಿ ಬಿದ್ದ. ಎದೆಗೆ ಪೆಟ್ಟು

ಹತ್ತಿದೆಯೆಂದು ಹೇಳಿದನಂತೆ! ಕ್ರಮವಾಗಿ ನಮ್ಮ ಮನೆಯಲ್ಲಿ ಉಳಿದ ಸಂಗತಿಯನ್ನು ಡಾಕ್ಟರರು ತಿಳಿದುಕೊಂಡರು. ಅವರೀಗ ಮತ್ತೊಂದು ಮದುವೆ ಮಾಡಿಕೊಂಡಿದ್ದಾರೆ. ಉದ್ಯೋಗವೂ ಚೆನ್ನಾಗಿ ನಡೆದಿದೆ. ತಮಗೂ ಇಲ್ಲಿಯ ಪರಿಚಯವಿರುವದಾಗಿ ಹೇಳಿ ಶ್ರೀನಾಥನಿಗೆ ನೋವು ವಾಸಿಯಾಗುವವರೆಗೆ ತಮ್ಮ ಮನೆಯಲ್ಲಿಯೇ ಉಳಿಯಲು ಆಗ್ರಹ ಮಾಡಿದರಂತೆ. ಆದರೆ ಆ ದುರ್ದೈವಿ ಏನು ನೆನೆದುಕೊಂಡನೋ? "ಇಲ್ಲ, ಇಲ್ಲ. ನಾನು ಅದಕ್ಕಾಗಿ ಬರಲಿಲ್ಲ" ಎಂದು. ಹುಚ್ಚನಂತೆ ಏನೇನೋ ಬಡಬಡಿಸುತ್ತ ಅಲ್ಲಿಂದ ಹೊರಟುಹೋದನಂತೆ. ಧಾರವಾಡದಲ್ಲಿ ಅವನನ್ನು ಹುಡುಕಲು ನಾನು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಕೊನೆಗೂ ಸಾಧ್ಯವಾಗದೆ ಹೋಯಿತು. ಶ್ರೀನಾಥನಂತಹ ಸಾಧು ಪ್ರಾಣಿ! ನಾನು ಹೋದ ಸಲ ದಸರೆಯ ಉತ್ಸವ ನೋಡಲು ಮೈಸೂರಿಗೆ ಹೋದಾಗ ಅಲ್ಲಿಯ ಸಂಸ್ಕೃತ ಪಾಠಶಾಲೆಯಲ್ಲಿ ಇರುವ ನನ್ನೊಬ್ಬ ಮಿತ್ರನನ್ನು ಕಾಣಲು ಹೋಗಿದ್ದೆ. ಅಲ್ಲಿ ಶ್ರೀನಾಥನ ಪರಿಚಯವಾಯಿತು. ಮೈಸೂರಿಂದ ನಾಲ್ಕಾರು ಮೈಲು ದೂರದಲ್ಲಿ ಒಂದು ಅಗ್ರಹಾರವಿದೆ. ಅದೇ ಆತನ ಊರು. ಅಜ್ಜನು ವೈದಿಕ ವೃತ್ತಿಯಿಂದಾಗಿ ತುಂಬಾ ಗಳಿಸಿ ಇಟ್ಟಿದ್ದಾನೆ. ಶ್ರೀನಾಥನ ತಂದೆಯವರೂ ಒಂದೆರಡು ಕಡೆ ಸೋಮಯಾಗದಲ್ಲಿ ಅಧ್ವರ್ಯ ಮಾಡಿದ್ದಾರಂತೆ. ಅವರು ಘನವಿದ್ವಾಂಸರು. ಸದ್ಯ ಆ ವೃತ್ತಿಯಿಂದಲೇ ಜೀವಿಸಬೇಕಾದ ಆವಶ್ಯಕತೆ ಇಲ್ಲದ್ದರಿಂದಲೂ, ಶ್ರೀನಾಥನಿಗೆ ಅಷ್ಟಾಗಿ ಅದರಲ್ಲಿ ಮನಸ್ಸು ಇಲ್ಲವಾದ್ದರಿಂದಲೂ ಹೀಗೇ ಸಂಸ್ಕಾರದ ಮಟ್ಟಿಗೆ ವೇದ ಓದಿದ್ದಾನಂತೆ. ಅವನಿಗೆ ಸಂಸ್ಕೃತದಲ್ಲಿ ತುಂಬಾ ಪರಿಶ್ರಮವಿದೆ. ಒಂದೆರಡು ಖಂಡ ಕಾವ್ಯ ಬರೆದಿದ್ದಾನೆ. ಹದಿನಾರನೇ ವಯಸ್ಸಿನಲ್ಲಿಯೇ ದೊಡ್ಡ ಮನೆತನದ ಹೆಣ್ಣನ್ನು ತಂದು ಮದುವೆ ಮಾಡಿದರು, ಹಿರಿಯರು. ಹೆಣ್ಣು ಕುರೂಪಿಯೇನೂ ಅಲ್ಲವಾದರೂ ಶ್ರೀನಾಥನಿಗೆ ಮನಸ್ಸಿರಲಿಲ್ಲವಂತೆ. ಹೇಗೋ ಆಗಿಹೋದ ಮದುವೆಗಾಗಿ ಬೇಜಾರುಪಟ್ಟುಕೊಂಡು ಸಂಸ್ಕೃತ ಓದುವ ನೆವ ಮಾಡಿ ಪಟ್ಟಣ ಸೇರಿದ. ಇಲ್ಲಿಗೆ ಬರುವ ಮೊದಲು ಊರಿಗೆ ಹೋಗಿ ಶೋಭನಪ್ರಸ್ಥ ತೀರಿಸಿಕೊಂಡು ಬಂದಿದ್ದಾನೆ. ಮನೆಯಲ್ಲಿ ತಂದೆ-ತಾಯಿ, ಅಣ್ಣ-ಅತ್ತಿಗೆ ಎಲ್ಲ ಇದ್ದಾರೆ. ಮನೆ ಬಿಟ್ಟು ಬರುವಾಗ ಯಾರಿಗೂ ಸುದ್ದಿ ಹೇಳಲಿಲ್ಲ. ಧಾರವಾಡದಲ್ಲಿ ನಾನು ಸಿಗದಿದ್ದರೆ ಇನ್ನೆಲ್ಲಿಗೆ ಹೋಗುತ್ತಿದ್ದನೋ? ಹಳ್ಳಿಯ ಪ್ರಸನ್ನ ವಾತಾವರಣದಲ್ಲಿ ತುಸು ನೆಮ್ಮದಿ

ಹುಟ್ಟಬಹುದು ! ಎಂದು ಕಳಿಸಿಕೊಟ್ಟೆಷ್ಟೆ. ಆತನ ತಂದೆಗೂ ಹಾಗೆಯೇ ಪತ್ರ ಬರೆದಿದ್ದೆ. ಅವರು ಕೃತಜ್ಞತೆಯನ್ನು ವ್ಯಕ್ತ ಮಾಡಿ ಮಗನಿಗೆ ಅಲ್ಲಿ ಸುಖವಾದರೆ ನಾಲ್ಕು ತಿಂಗಳು ಇಟ್ಟುಕೊಳ್ಳಬಹುದು. ಎಂದು ಉತ್ತರ ಬರೆದಿದ್ದರು. ಉಪಾಯವಿಲ್ಲ. ಶ್ರೀನಾಥನ ದುರ್ದೈವ ಅವನನ್ನು ಇಲ್ಲಿಯೂ ಇರಗೊಡಲಿಲ್ಲ."

ಉದ್ದಕ್ಕೆ ಕಥೆ ಹೇಳುತ್ತಲೇ ಆ ಕೋಮಲಾಂತಃಕರಣದ ತರುಣ ಉಸುರ್ಗರೆದ.

" ನೀನಂದದ್ದು ನಿಜ ರಾಮೂ, ಶ್ರೀನಾಥ ದುರ್ದೈವಿ ! ಇಲ್ಲಿಗೆ ಬಂದ ಮೇಲೆ ಕೂಡ ಅವನು ಆಹಾರ ವಿಹಾರಗಳಲ್ಲಿ ಒಂದು ದಿನವಾದರೂ ಆತ್ಮಾಸಕ್ತಿಯನ್ನು ತೋರಲಿಲ್ಲ. ದೇವರಂತಹ ಸ್ವಭಾವ ಆತನದು."

ವಿಶ್ವನಾಥಯ್ಯ ತನಗಾದ ವಿಷಾದವನ್ನು ವ್ಯಕ್ತ ಮಾಡಿದ.

## ೨೩

ಅಣ್ಣನು ಡಾ॥ ಗೋವರ್ಧನರಾಯರ ಸುದ್ದಿಯನ್ನು ಮಧ್ಯದಲ್ಲಿ ಎತ್ತಿದ್ದರಿಂದ ಪದ್ಮೆಗೆ ತಾನು ಹಿಂದೆ ಅತನನ್ನು ಉದ್ದೇಶಿಸಿ ಬರೆದ ಕಾಗದದ ನೆನಪು ಬಂತು. ಎಷ್ಟೋ ದಿನಗಳಿಂದ ನಾಗಂದಿಗೆಯ ಸಂದಿನಲ್ಲಿ ಮಸಕು ಹಿಡಿದು ಬಿದ್ದಿದ್ದ ಆ ಕಾಗದವನ್ನೊಮ್ಮೆ ನೋಡಬೇಕೆಂದೆನ್ನಿಸಿತು. " ಅದು ಎಲ್ಲಿಯಾದರೂ ಇತರರ ಕೈಗೆ ಸಿಕ್ಕರೆ? ಹಾ. ಅದನ್ನು ಸುಟ್ಟು ಹಾಕಬೇಕು."

ಹೊಳೆಯ ದಂಡೆಯಲ್ಲಿ ಶ್ರೀನಾಥನು ಮದುವೆಯ ಬಗ್ಗೆ ಹೇಳುವಾಗ ಅವಳಿಗೆ ಡಾಕ್ಟರರ ಸ್ಮರಣೆ ಬಂದಿತ್ತು. ಆದರೆ ಅದು ಒಂದೇ ನಿಮಿಷ. ಪದ್ಮೆಯ ಅನುರಾಗದ ಹೊಳೆ ಶ್ರೀನಾಥನೆಡೆಗೆ ಹರಿದು ಹೋಗುವಾಗ ಆ ಸ್ಮೃತಿ, ಅದೊಂದು ಕ್ಷುದ್ರವಾದ ಮಣ್ಣುಗುಪ್ಪೆಯಂತೆ ಕರಗಿಹೋಗಿತ್ತು.

ಪದ್ಮೆಯು ಕಾಗದವನ್ನು ಕೈಗೆತ್ತಿಕೊಂಡಳು. ಆಶ್ಚರ್ಯ. ಅದರ ಮಗ್ಗುಲಿಗೆ ಇನ್ನೂ ಏನೋ ಬರೆದಂತಿದೆ. ಅವಳು ಲಕ್ಷವಿಟ್ಟು ಓದಿದಳು.

ಅಧಿಕ್ಷೇಪ ರೂಕ್ಷಾನ್ ಕಟಾಕ್ಷಾನ್ ಅನಾಯೇ ।<br>
ವಚಾಂಸ್ಯಸ್ಯಮುಷ್ಮಿನ್ ಅನೌದಾರ್ಯವಂತಿ ।<br>
ಭವೇಸ್ತ್ವಂ ಪುರಸ್ತಾತ್ ಸುಪನ್ನಾಹಯಂತೀ ।<br>
ಪದ್ಮೈವಾಸ್ಯ ಪದ್ಮೇ, ತತೋಽಪ್ಯಸ್ಮಿ ಧನ್ಯಃ ॥

"ಭರ್ತ್ಸನಾ ವ್ಯಂಜಕವಾಗಿದ್ದರೂ ನಿನ್ನಾ ಕಟಾಕ್ಷಗಳನ್ನೂ ಬಿರುಸುಗೊಂಡಿದ್ದರೂ ನಿನ್ನಾ ನುಡಿಗಳನ್ನೂ ಅನಾರ್ಯನಾದ ಈತನಲ್ಲಿ ಸಜ್ಜುಗೊಳಿಸುತ್ತಿರುವವಳಾಗಿ ಪದ್ಮೆ, ನೀನು ನಿರಂತರವೂ ಎದುರು ಇರುವಿಯಾದರೆ ಅಷ್ಟರಿಂದಲೇ ನಾನು ಧನ್ಯ."

"ಶ್ಲೋಕವು ಶ್ರೀನಾಥನದೇ." ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಹೋಗುವ ದಿನವೇ ಅದನ್ನವನು ಬರೆದಿದ್ದಾನೆಂಬುದೂ ಕೆಳಗೆ ಬರೆದ ಮಿತಿಯಿಂದ ಸ್ಪಷ್ಟವಾಗಿತ್ತು.

ಆ ಕ್ಷುದ್ರವಾದ ಕಾಗದ ಇಷ್ಟು ಘೋರವಾದ ದುರಂತವನ್ನು ನಿರ್ಮಿಸುವದೆಂದು ಪದ್ಮೆ ಎಂದಾದರೂ ಊಹಿಸಿದ್ದಳೇನು? ಅದೊಂದು ವಿಷಮ ಮನಸ್ಥಿತಿಯಲ್ಲಿ ಬರೆದು ಆ ಕಾಗದದ ಮೇಲೆ ತನ್ನ ಅಕ್ಷರಗಳಿಂದ ಶ್ರೀನಾಥ ಪದ್ಮೆಯು ಕಲಂಕಿನಿಯೆಂಬುದನ್ನು ಹೊಸ ರೀತಿಯಿಂದ ವಿಡಂಬಿಸಿದಂತಾಗಿತ್ತು.

ಭ್ರಮರವು ಮಕರಂದವನ್ನಷ್ಟೇ ಹೀರದೆ, ಹೂವಿನ ಎಸಳುಗಳನ್ನೂ ಕಡಿ-ಕಡಿದು ಶತಚ್ಛಿದ್ರವನ್ನಾಗಿ ಮಾಡಿದೆ.

ಒಮ್ಮೆಲೇ ಶೋಕ, ಸಿಟ್ಟು, ವಿಷಾದ ಇವು ಪದ್ಮೆಯ ಹೃದಯದ ಮೇಲೆ ತೀವ್ರವಾದ ಆಘಾತವನ್ನುಂಟು ಮಾಡಿದವು.

"ಹಾಯ್, ಶ್ರೀನಾಥ! ಏನು ನಿನ್ನ ಅಂತಃಕರಣ, ಏನು ನಿನ್ನ ಪ್ರೀತಿ. ಈ ಕಾಗದವೇ ನಿನಗೆ ಇಲ್ಲಿಂದ ಹೊರಟುಹೋಗುವದಕ್ಕೆ ಪ್ರೇರಣೆ ಕೊಟ್ಟಿದ್ದರೆ ಮತ್ತೆ ಈ ವ್ಯಂಗ ಯಾಕೆ ಬೇಕಿತ್ತು! ಉಫ್, ನೀನೂ ಒಬ್ಬ ಗಂಡಸು."

ಪದ್ಮೆಗೆ ಆ ಕಾಗದ ಚೂರು ಚೂರು ಮಾಡಬೇಕು ಎಂದೆನ್ನಿಸಿತು. ಆದರೆ ಆ ಕೋಮಲ ಮನಸ್ಸು ತಿಳಿಯಾದಾಗ ಅವಳು ಭಾವಿಸಿದ ರೀತಿ ಬೇರೆಯದಾಗಿತ್ತು.

"ಹಾಂ, ಶ್ರೀನಾಥನ ಅಂದಿನ ವರ್ತನೆ ನೆನೆದರೆ ನಾನೀ ಕಾಗದಕ್ಕೆ ಎಷ್ಟು ಕೃತಜ್ಞಳಾದರೂ ಕಡಿಮೆಯೇ. 'ನೀನು ಇಲ್ಲಿಂದ ಹೊರಟು ಹೋದರೆ ಒಳಿತು' ಎಂದು ಆತನಿಗೆ ಹೇಳುವ ಕಷ್ಟ ತಪ್ಪಿತು. ಇನ್ನು ಶ್ರೀನಾಥ ಇಲ್ಲಿಯೇ ಇದ್ದಿದ್ದರೆ ನನ್ನ ಮಾತು ಹಾಗಿರಲಿ, ಆತನ ಗೌರವ ಹಾಳಾಗುತ್ತಿತ್ತಲ್ಲದೆ ಎಂತೆಂತಹ ಗಂಡಾಂತರಗಳನ್ನು ಎದುರಿಸಬೇಕಾದ ದುರ್ಘಟ

ಪ್ರಸಂಗ, ಆ ಅಧೀರ ಪ್ರಕೃತಿಯ ಅಕರ್ಮಣ್ಯ ಪ್ರಾಣಿಗೆ ಒದಗುತ್ತಿತ್ತೋ ? ಆತ ಬದುಕಿದ. ನಾನೂ ಉಳಿದುಕೊಂಡೆ. ನನ್ನ ಈ ಹೀನವಾದ ಬದುಕಿಗೆ ವಿಡಂಬನೆಯೇ ಆಗಲೊಲ್ಲದೇಕೆ ? ಈ ಉಪಹಾರ ಹೆಚ್ಚಾಯಿತು ”.

ಪದ್ಮೆಯು ಆ ಕಾಗದವನ್ನು ತನ್ನ ಹಣೆಗೆ ಒತ್ತಿಕೊಂಡಳು.

— ಸಂಪೂರ್ಣ —



# ಕೈತುತ್ತು ಬಾಯಿಗಿಲ್ಲ!

## ೧

ಹೆಣ್ಣು ಗಂಡು ಒಬ್ಬರನ್ನೊಬ್ಬರು ಪ್ರೀತಿಸುವ ರೀತಿಯಲ್ಲಿಯೇ ಇನ್ನೊಂದು ವಿಧವಾದ ಶಂಕೆಯನ್ನು- ತಪ್ಪು ಕಲ್ಪನೆಯನ್ನು ತಂದುಕೊಂಡು, ಸುಖಮಯವಾಗಬೇಕಾಗಿದ್ದ ಸಂಸಾರವನ್ನು ತೀರ ವಿರಸ ಮಾಡಿಕೊಂಡು, ಜೀವನವಾಸವೆಲ್ಲ ಕಳವಳ ಪಶ್ಚಾತ್ತಾಪಗಳಿಂದ ನರಳುವ ಸಂದರ್ಭಗಳನ್ನು ನಾವೆಷ್ಟೋ ಕಾಣುತ್ತೇವೆ

ನನ್ನ ಸ್ನೇಹಿತ ರಾಮಯ್ಯ ಇಂತಹ ಸಂದೇಹ ಜೀವಿಗಳಲ್ಲಿ ಒಬ್ಬ! ಅವನ ಹೆಂಡತಿ ದೇವಮ್ಮನೂ, ಒಳ್ಳೆಯ ಸ್ವಭಾವದವಳು. ರೂಪು ನಡತೆ ಎಲ್ಲಾ ಇರುವವಳು. ಅಡಿಗೆ ಮಾಡುವುದರಲ್ಲಿ ಅವಳ ನೈಪುಣ್ಯ ಹಿರಿದು. ಆಕೆ ಮಾಡಿದ ತಿಂಡಿ-ಊಟಗಳನ್ನು ಸೇವಿಸುವ ಸುಯೋಗವನ್ನು ರಾಮಯ್ಯನ ಮಿತ್ರರು ನಿರಂತರವೂ ಹಾರಯಿಸುತ್ತಿರುವರು. ರಾಮಯ್ಯನೂ ತಿನಸುಗೂಳಿ! ಹೀಗಾಗಿ ವಾರದಲ್ಲಿ ಮೂರು ದಿನವಾದರೂ ಆತನ ಮನೆಯಲ್ಲಿ 'ಮೇಜವಾನಿ' ಇದ್ದೇ ಇರುವುದು.

ಮೊದ ಮೊದಲು ರಾಮಯ್ಯ ತುಂಬ ಉದ್ಯೋಗಶೀಲನಾಗಿದ್ದ. ನಾಲ್ಕಾರು ಖಂಡಿ ಅಡಿಕೆ ಹುಟ್ಟುವಳಿಯಿರುವ ತೋಟ, ಇಪ್ಪತ್ತು ಖಂಡುಗ ಭತ್ತ ಬೆಳೆಯುವ ಹೊಲ ಇವೆ. ಚಳಿಗಾಲದಲ್ಲಿ ರಾಮಯ್ಯ ಕಬ್ಬು ಬೇರೆ ಬೆಳೆಯುತ್ತಾನೆ. ಗಂಡ ಹೆಂಡತಿ ಇಬ್ಬರ ನಿರ್ವಾಹಕ್ಕೆ ಯಥೇಷ್ಟವಾಗಿದೆ ಅವನ ದುಡಿಮೆ.

ಹೆಂಡತಿ ದೇವಮ್ಮ ಮನೆಗೆ ಬಂದ ಮೇಲೆ, ಐದಾರು ತಿಂಗಳುಗಳವರೆಗೂ ರಾಮಯ್ಯನಲ್ಲಿ ಯಾವ ವಿಧದ ಬದಲಾವಣೆಯೂ ಆಗಿರಲಿಲ್ಲ! ಮುಂದೆ ಸಾಧಾರಣವಾಗಿಯೇ ಮೊದಲ ಹರೆಯದಲ್ಲಿ ಬರಬಹುದಾದ ಆ ಸ್ವಭಾವ, ಆ ಭ್ರಮೆ ಅವನಲ್ಲಿಯೂ ಹುಟ್ಟಿಕೊಳ್ಳಬೇಕೆ? ಇದರಿಂದ ರಾಮ

ಯ್ಯನಿಗೆ ಉದ್ಯೋಗದಲ್ಲಿ ಆಸಕ್ತಿ ಕಡಿಮೆಯಾಯಿತು. ಹಗಲೂ ಇರುಳೂ ಹೆಂಡತಿಯ ಬೆನ್ನು ಕಾಯುವುದೊಂದೆ ಅವನ ಕೆಲಸವಾಯಿತು. ಹಿತ್ತಲು ಕಡೆಗೆ ಹೋಗಿದ್ದರೆ ಅಲ್ಲಿ ನೆರಮನೆಯ ಭೀಮಣ್ಣ– ಉಂಡು ಕೈ ತೊಳೆಯಲು ಬಂದವನು–ಕೆಮ್ಮಿದಂತೆ ಭಾಸವಾಗುವದು. ಹೊರ ಜಗುಲಿಗೆ ಬಂದರೆ ಅಲ್ಲಿ, ಉಪ್ಪರಿಯಿಂದ ಓದಿಕೊಂಡು ಬಂದಿದ್ದ ಪಾದಿಮನೆ ವೆಂಕಟ್ರಮಣಯ್ಯ 'ಏನು, ದೇವಮ್ಮಾ, ತಾಂಬೂಲದ ಬಟ್ಟಲು ಎಲ್ಲಿ?' ಎಂದು–ಸಹಜವಾಗಿಯೇ ಎನ್ನುವಂತೆ— ಪೇಟೆಗೆ ಹೋಗುವವನು ಮಧ್ಯದಲ್ಲಿಯೇ ನಿಂತು ಕೇಳುತ್ತಾನೆ. ಅಂತೂ ರಾಮಯ್ಯನಿಗೆ ನೆಮ್ಮದಿಯಿಲ್ಲ! ಅವನ ದುರದೃಷ್ಟಕ್ಕೆ ಆ ಹೆಂಡತಿ ಬೇರೆ ರೂಪವನ್ನು ತಂದಿದ್ದಾಳೆ. ತನ್ನದೋ?, ಗುಂಡು ಗುಂಡಗಾದ ಕಪ್ಪು ಬಣ್ಣದ ಕೂದಲುಗಟ್ಟಿದ ಆಕಾರ! ಮಾತಾಡುವಾಗ ಉಗ್ಗು ಬೇರೆ ಬರುವದು ತನ್ನಲ್ಲಿ ಹೆಂಡತಿಯನ್ನು ವಿಧೇಯಳನ್ನಾಗಿ ಇರಿಸಿಕೊಳ್ಳುವ ಯಾವ ಸಾಮಗ್ರಿಯೂ ಇಲ್ಲ! ಸೌಜನ್ಯದಿಂದಲೂ ಜೀವ್ವನ್ನು ಒಲಿಸಿಕೊಳ್ಳಬಹುದೆಂಬುದು, ಆತನ ಮನಸ್ಸು–ಬುದ್ಧಿಗಳಿಗೆ ನಿಲುಕದ ಮಾತು! ರಾಮಯ್ಯ ಆಗ ಅವಲಂಬಿಸಿದ ನೀತಿಯೊಂದೆ ತಾಡನೆಯೊಂದೇ! ಹೆಣ್ಣನ್ನು ದಾರಿಗೆ ತರಲು ಇದೇ ಮದ್ದು! ಹೊಡೆಯುವ ಹಕ್ಕು ಗಂಡನಾದ ತನಗಿದೆ; ಆ ಹಕ್ಕನ್ನು ಉಪಯೋಗ ಮಾಡಿಕೊಂಡರೆ ಅಭ್ಯಂತರವೇನು?

ಸ್ನೇಹಿತ ರಾಮಯ್ಯನ ಈ ವರ್ತನೆಯನ್ನು ನೋಡಿ ನನ್ನಂತವನಿಗೆ ಕಳವಳವಾಗುವದು ಸಹಜ; ಒಂದೆರಡು ಬಾರಿ ಬುದ್ಧಿವಾದ ಹೇಳಿದೆ; ಆದರೆ ಅದೇನೂ ಉಪಯೋಗವಾಗಲಿಲ್ಲ. ಹಾಗೆ ನಾನು ಉಪದೇಶ ಹೇಳಿದ ದಿನ ಆ ದುರ್ದೈವಿಯಾದ ಹೆಂಗುಸಿಗೆ ಇನ್ನೆರಡು ಪ್ರಹಾರ ಹೆಚ್ಚು ತಿನ್ನಬೇಕಾಗುತ್ತಿತ್ತು. ಆ ಸಮಯದಲ್ಲಿ ರಾಮಯ್ಯ, ಸಂಪನ್ನನಾದ ತಾನು ಅನನ್ಯಗತಿಕನಾಗಲಾರೆನೆಂಬ ಒಣ ಜಂಭ ಬೇರೆ ಬೀರುತ್ತಾನೆ.

## ೨

ಬರುಬರುತ್ತ ರಾಮಯ್ಯನ ಆದಾಯ ಕಡಿಮೆಯಾಯಿತು. ಮಿತ್ರರ ಮೋಜವಾನಿಯಿಂದಾಗಿ ಖರ್ಚು ಬೆಳೆಯಿತು ಒಮ್ಮೆ ತೀರ್ಥಹಳ್ಳಿಯಿಂದ

ವೆಂಕೋಬರಾಯರೆಂಬುವರು ರಾಮಯ್ಯನ ಮನೆಗೆ ಬಂದರು. ತೀರ್ಥಹಳ್ಳಿ ನಮ್ಮೂರಿಗೆ ನಾಲ್ಕು ಮೈಲು ದೂರದಲ್ಲಿದೆ. ರಾಯರು ಅಲ್ಲಿ ದೊಡ್ಡ ಕಿರಾಣಿ ಅಂಗಡಿ ಇಟ್ಟಿದ್ದಾರೆ. ನಾವೆಲ್ಲ ಅವರಲ್ಲಿಯೇ ಸಾಮಾನು ಕೊಳ್ಳುತ್ತೇವೆ. ಒಳ್ಳೆ ಪ್ರಾಮಾಣಿಕರು; ಅಲ್ಲದೆ ಉದಾರಿಗಳು. ರಾಮಯ್ಯನು ಅವರಿಗೆ ಇನ್ನೂರು ರೂಪಾಯಿ ಕೊಡಬೇಕಾಗಿತ್ತು. ಎರಡು ವರ್ಷಗಳಿಂದ ಬಡ್ಡಿಯ ಹಣ ಕೂಡ ಕೊಡಲಾಗಿರಲಿಲ್ಲ! ಅವರು ಈಗ ವಸೂಲಿಗೆ ಬಂದಿದ್ದಾರೆ. ದೇವಮ್ಮನು ಅಂದು ರಾಯರಿಗಾಗಿ ಒಳ್ಳೊಳ್ಳೆಯ ತಿನಿಸನ್ನು ಅಳವಡಿಸಿದ್ದಳು. ರಾಯರು ರುಚಿಕರವಾದ ತಿಂಡಿಯನ್ನು ತಿಂದು, ಕಾಫಿ ಕುಡಿದು, ತಮಗಾವ ತೃಪ್ತಿಯನ್ನು ಮುಖಭಾವದಿಂದಲೇ ವ್ಯಕ್ತ ಮಾಡಿದರು.

ಸಂದರ್ಭ ನೋಡಿ ರಾಮಯ್ಯ ಹೇಳಿದ—

‘ಸಾಹುಕಾರರೆ, ಅಡಿಕೆಯಿನ್ನೂ ಮಾರಾಟವಾಗಿಲ್ಲ ಧಾರಣೆ ತೀರಾ ಇಳಿದಿದೆ. ಹುಟ್ಟುವಳಿ ಮೊದಲಿನಂತಿಲ್ಲ! ನೀವು ಸ್ವಲ್ಪ ಹಣ ಬಿಡಬೇಕಾಗುವುದು!’

ದೇವಮ್ಮ ಬಾಗಿಲುಪಟ್ಟಿಯನ್ನು ಹಿಡಿದು ನಿಂತಿದ್ದಾಳೆ. ರಾಯರು ಅವಳ ಆತಿಥ್ಯದಿಂದ ಸಂತುಷ್ಟರಾಗಿದ್ದಾರೆ

‘ಹಾಂ, ಆಗಲಿ ರಾಮಯ್ಯನವರೇ, ಈ ಸಾಲಿನ ಅಡಿಕೆ ಕೊಟ್ಟವರು ನನ್ನ ಸಾಲ ತೀರಿಸಿಬಿಡಿರಿ. ನೂರಾಐವತ್ತು ರೂಪಾಯಿ ಒಂದೇ ಸಲ ಕೊಟ್ಟಲ್ಲಿ ಚುಕ್ತಾ ಮಾಡಿಕೊಂಡು ಬಿಡುತ್ತೇನೆ. ಆಗದೇ! ಬಡ್ಡಿಯು ಮಾತ್ರೇ ಬೇಡ!’

‘ನಿಮ್ಮಂಥವರು ದಯೆಮಾಡದೇ ಇನ್ನಾರು ಮಾಡಬೇಕು? ಆಗಲಿ, ನಾನು ತಿಂಗಳೊಪ್ಪತ್ತಿನಲ್ಲಿ ಪೇಟೆಗೆ ಬರುತ್ತೇನೆ. ಆಗ ಎಲ್ಲ ವ್ಯವಸ್ಥೆ ಮಾಡುತ್ತೇನೆ!’

‘ಸರಿ!’ ಏಳುವಾಗ ರಾಯರು ದೇವಮ್ಮನನ್ನೊಮ್ಮೆ ನೋಡಿದರು.

'ಏನಮ್ಮಾ? ಮಾಸಲು ಬಟ್ಟೆ ಉಟ್ಟಿದ್ದೀಯಲ್ಲ! ಒಂದು ಒಳ್ಳೆಯ ಸೀರೆ ತರಿಸಿಕೊಡಲು ಯಜಮಾನರಿಗೆ ಹೇಳಬಾರದೇ? ರಾಮಯ್ಯನವರೇ, ಪೇಟೆಗೆ ಬಂದವರು ನನ್ನನ್ನು ಎಚ್ಚರಿಸಿ! ಜವಳೀ ಪದ್ಮನಾಭಯ್ಯನಲ್ಲಿ ಒಳ್ಳೆಯ ಸೀರೆ ಬಂದಿವೆ; ವಿಚಾರಿಸೋಣ!

ರಾಯರನ್ನು ಬಿಡಲು ರಾಮಯ್ಯ ಹೊರಬಾಗಿಲಿಗೆ ಬಂದ; ಅವರು ಮತ್ತೊಮ್ಮೆ ತಿರುಗಿ, "ಬರುತ್ತೇನೆ. ನಿಮ್ಮಲ್ಲಿಯ ಆತಿಥ್ಯವನ್ನು ನಾನೆಂದೂ ಮರೆಯುವಂತಿಲ್ಲ!" ಎಂದು ಮುಗುಳು ನಗೆಯಿಂದ ಹೊರಬಿದ್ದರು. ಅವರು ಮನೆ ದಾಟುತ್ತಲೇ, ಅಷ್ಟು ಹೊತ್ತಿನ ವರೆಗೂ ತಡೆದು ನಿಂತಿದ್ದ ರಾಮಯ್ಯ ಹೆಂಡತಿಯನ್ನು ಗದ್ದರಿಸಿದ.

'ನಾಚಿಕೆಯಿಲ್ಲದವಳು! ಯಾರು ಬಂದರೂ ಬಾಗಿಲಿಗೆ ಹೀಗೆ ಮೈ ತೆರೆದುಕೊಂಡು ನಿಲ್ಲುವುದು! ಇಂದು ಇದು ಏನೆಲ್ಲಾ ತಿಂಡಿ ತಿನಿಸು! ಥುತ್! ನಾನು ಮನೆ ಇಟ್ಟುಕೊಳ್ಳುವಂತೆಯೇ ಇಲ್ಲ!'

ಮಾತಿನೊಡನೆಯೇ ರಾಮಯ್ಯ, ಕೈಗೆ ಸಿಕ್ಕಿದ ಬಿದಿರು ದಬ್ಬೆಯಿಂದ ಪಶುವಿಗೆ ಬಡಿದಂತೆ ಬಡಿದ. ಪಾಪ! ದೇವಮ್ಮನು ಮಾಡಿದ ಉಪಚಾರದಿಂದಾಗಿ ರಾಯರು ಐವತ್ತು ರೂಪಾಯಿ ಕೊಟ್ಟು ಬಿಡಲು ಸಿದ್ಧರಾದರು. ರಾಮಯ್ಯ ಅದಕ್ಕೆ ಬೇರೆಯೇ ಅರ್ಥ ಮಾಡಿದ. ದಿನದ ಬಡಿತಕ್ಕಿಂತ ಇಂದಿನದರಲ್ಲಿ ಕಸುವು ಹೆಚ್ಚಾಗಿದ್ದುದರಿಂದ, ದೇವಮ್ಮ ತಡೆಯಲಾರದೆ ಬವಳಿ ಬಂದಂತಾಗಿ ನೆಲಕ್ಕೆ ಬಿದ್ದಳು.

೩

ರಾಮಯ್ಯನ ಮನೆಯಲ್ಲಿ ಮಿತ್ರರ ಮೇಜವಾನಿ ಎಂದಿನಂತೆಯೆ ನಡೆದಿತ್ತು. ಹೆಚ್ಚಾಗಿ ವೆಚ್ಚದ ಹೊರೆ ಬೀಳುವದು ರಾಮಯ್ಯನ ಮೇಲೆಯೆ. ಈಗಿತ್ತ ಅವನು ಸ್ವಲ್ಪಮಟ್ಟಿಗೆ ಸಾಲ ಮಾಡಿಕೊಂಡಿದ್ದರಿಂದ, ನಾನೇ ಸರತಿಯಂತೆ ವೆಚ್ಚ ವಹಿಸಿಕೊಳ್ಳಬೇಕೆಂದು ಮಿತ್ರರಲ್ಲಿ ಕಟ್ಟು ಮಾಡಿದ್ದೆ. ಹೀಗೆಯೆ ಒಂದು ಆದಿತ್ಯವಾರ ನನ್ನ ಪಾಳಿ ಬಂದಿತು. ನಮ್ಮ ತೋಟದಲ್ಲಿ

ಒಕ್ಕಲಿಯ ಬೇರುಹಲಸಿನಕಾಯಿ ಬೆಳೆದುಕೊಂಡಿತ್ತು. ಚೆನ್ನಾದವುಗಳನ್ನೇ ಆರಿಸಿ, ನಾಲ್ಕು ಕಾಯಿ ಕೊಯಿಸಿದೆ!

ಮನೆಗೆ ನಾನು ಹೋದಾಗ ರಾಮಯ್ಯನು ತೋಟಕ್ಕೆ ಹೋಗಿದ್ದ. ದೇವಮ್ಮ ಬಚ್ಚಲು ಮನೆಯಲ್ಲಿ ಮುಸುರೆ ಪಾತ್ರೆ ತಿಕ್ಕುತ್ತಿದ್ದಳು.

“ದೇವಮ್ಮಾ, ಸ್ವಲ್ಪ ಮಾತಾಡಬೇಕು!” ಎಂದೆ.

ಆಕೆ ತಿರುಗಿ ನೋಡಿದಳು; ಆ ಮೋರೆ ಅತ್ತಂತಿತ್ತು.

‘ನೋಡು, ನಾಳೆಯ ಖಪಾತಿಗೆ (ಮೋಜವಾನಿಗೆ ನಾವು “ಖಪಾತು” ಎಂದು ಸಂಕ್ಷೇಪಿಸಿಟ್ಟುಕೊಂಡಿದ್ದೆವು.) ವಡೆ ಮಾಡಬೇಕು. ಬೇರು ಹಲಸಿನ ಕಾಯಿ ತರುತ್ತೇನೆ. ಕಡಲೆ ಹಿಟ್ಟು ಎಷ್ಟು ಬೇಕಾದೀತು, ಕೇಳೋಣ.... ಎಂದು ಬಂದೆ.”

“ಏ, ಶ್ರೀನಿವಾಸ, ನಿಮ್ಮ ಖಪಾತು ಗಿಪಾತು ಎಲ್ಲಾ ಹಾಳಾಗಲಿ! ನೀವಾರೂ ಇನ್ನು ಮುಂದೆ ನಮ್ಮ ಮನೆಗೆ ಬರಬೇಡಿ! ನನಗೆ ಸಾಕಾಯಿತು!”

ದೇವಮ್ಮನು ಅಷ್ಟು ಅನಾದರವಾಗಿ ಮಾತನಾಡುತ್ತಾಳೆ, ಎಂದು ನಾನು ಊಹಿಸಿರಲಿಲ್ಲ!

“ಯಾಕೆ ದೇವಮ್ಮಾ, ಏನಾಯಿತು?”

“ಏನಿಲ್ಲ! ನೀವೆಲ್ಲ ಗಂಡಸರಾಗಿ ಹುಟ್ಟಬಾರದಿತ್ತು!”

“ಹಾಂ, ನಿನ್ನ ಗಂಡನಿಗೆ ಬುದ್ಧಿಯಿಲ್ಲ! ಅವನೊಬ್ಬ ಪಶು! ನೀನೂ ಸ್ವಲ್ಪ ಬಿರುಸಾಗಬೇಕು, ನೋಡು! ಅಂದರೇ ಹಾದಿಗೆ ಬರುತ್ತಾನೆ!”

“ಎಲ್ಲ ನೋಡಿಯಾಯಿತು ಶ್ರೀನಿವಾಸ! ಈ ಜೀವ ಯಾಕೆ ಹೋಗುವದಿಲ್ಲ ಎನ್ನುವಂತಾಗಿದೆ ನನಗೆ! ಹೂಂ. . . ನಮ್ಮವರು ಬರುವ ಹೊತ್ತಾಯಿತು, ನಡೆ ಆಚೆಗೆ! ಇನ್ನು ಮಾತು ಬೇಡ!”

ದೇವಮ್ಮ ನನ್ನನ್ನು ಕಣ್ಣೆತ್ತಿ ನೋಡದೆ, ಮತ್ತೆ ತನ್ನ ಕೆಲಸದಲ್ಲಿ ಮಗ್ನಳಾದಂತಾಗಿ ಬಿಟ್ಟಳು. ನಾನು ಅವಮಾನಿತನಾದಂತೆ ಹಾಗೆಯೆ ತಿರುಗಿದೆ.

ಹಾದಿಯಲ್ಲಿ ರಾಮಯ್ಯ ಸಿಕ್ಕಿದ.

“ಸಾಕು ಮಹಾರಾಯಾ, ಇನ್ನು ನಿಮ್ಮ ಮನೆಗೆ ಬರುವುದೇ ಉಳಿಯಲಿಲ್ಲ! ಆ ಪ್ರಾಣಿಯನ್ನು ಯಾಕೆ ಅಷ್ಟು ಗೋಳು ಹೊಯ್ದುಕೊಳ್ಳುತ್ತೀಯೆ? ಇನ್ನಾದರೂ ಬಿಡು ಈ ಹುಚ್ಚು!”

ನನ್ನ ಗದ್ದರಿಕೆಗೆ ರಾಮಯ್ಯ ಅಳುಕಲಿಲ್ಲ!

“ಏನು ಶ್ರೀನಿವಾಸ! ಆ ಸೋಗಲಾಡಿ ಹೇಳಿದ್ದೆಲ್ಲ ನಿಜವೆಂದು ನಂಬುತ್ತೀಯೋ ನೀನು?”

ರಾಮಯ್ಯನ ತಾಳ್ಮೆ ಹೋಗಿ ಎಷ್ಟೋ ದಿನಗಳಾಗಿವೆ. ಈಗ ಎಲ್ಲಿಯೋ ಇರಲಿ. ಹೆಂಡತಿಯ ಬಗ್ಗೆ ದುರಾಲೋಚನೆ ಮಾಡುವುದೊಂದೇ ಆತನ ನಿತ್ಯದ ಉದ್ಯಮವೆಂಬುದು ಖಚಿತವಾಯಿತು. ಇನ್ನು ಅವನೊಡನೆ ಮಾತನಾಡುವುದರಲ್ಲಿ ಅರ್ಥವಿರಲಿಲ್ಲ. ನಾನು ಬಾಯಿ ಬಿಡದೆ ಇದ್ದಿದ್ದರೆ ಅಂದಿನ ಮಟ್ಟಿಗಾದರೂ ಆಕೆ ಹೊಡೆತವಿಲ್ಲದೇ ಇರುತ್ತಿದ್ದಳೇನೋ! ರಾಮಯ್ಯ ಹಾಗೆಯೆ ಬಿಡುವಂತಿಲ್ಲ!

ನನ್ನ ಕೃತಿಗೆ ನಾನೇ ಪಶ್ಚಾತ್ತಾಪ ಪಟ್ಟುಕೊಳ್ಳುವಂತಾಯಿತು.

೪

ಇಲ್ಲಿ ನನ್ನದೊಂದು ರೀತಿಯನ್ನು ಸ್ವಲ್ಪ ಹೇಳಬೇಕಾಗಿದೆ. ರಾಮಯ್ಯನ ಕಥೆಗೂ ನನ್ನ ಕಥೆಗೂ ಭೇದವಿಷ್ಟೇ; ಅಲ್ಲಿ ಗಂಡು ಹೆಣ್ಣನ್ನು ಅನುಮಾನದಿಂದ ನೋಡುತ್ತಿದೆ. ಇಲ್ಲಿಯೋ ಅದಕ್ಕೆ ವಿರೋಧವಾಗಿ ಹೆಣ್ಣಿನ ಅನುಮಾನ ನನಗೆ ಗಂಟುಬಿದ್ದಿದೆ.

ನೆರೆಹೊರೆಯ ಯಾವಳೊಬ್ಬ ಹೆಣ್ಣಿನೊಡನೆ ಮಾತನಾಡಿದರೂ ಬಂತು ಮನೆಯಲ್ಲಿ ವರ್ಷಾಕಾಲ! ಈಗೊಬ್ಬ ಕ್ರಿಶ್ಚನ್ ಮೇಸ್ತ್ರಿ ಶಹರದಿಂದ ಬಂದಿದ್ದಾನೆ. ಸಂಗಡ ಹದಿನೈದೋ ಹದಿನಾರೋ ವಯಸ್ಸಿನ ಮಗಳು ಇದ್ದಾಳೆ. ನನಗೆ ಒಂದೆರಡು ಕಪಾಟು, ಕಿಡಕಿ, ಬಾಗಿಲುಪಟ್ಟಿ ಮೊದಲಾದದ್ದನ್ನು ಮಾಡಿಸುವದಿತ್ತು. ಆತ ನಮ್ಮ ಮನೆಯ ಹತ್ತಿರವೇ ಬಿಡಾರ ಹೂಡಿದ್ದು ಆ ಮಗಳು ಆಗಾಗ ನಾನಿರುವಲ್ಲಿ ಬರುತ್ತಾಳೆ. "ಏನಾದರೂ ಓದಲು ಕೊಡಿ" ಎಂದು ಕೇಳುತ್ತಾಳೆ. ನಾನು ಅಂತಹ ಸಮಯದಲ್ಲೆಲ್ಲ ಆ ಹುಡುಗಿಯೊಡನೆ ಒಳ್ಳೆ ಸಲುಗೆಯಿಂದ ಮಾತನಾಡುತ್ತಿದ್ದೆ.

ನನ್ನಲ್ಲಿ ಅಂತಹ ದುರುದ್ದೇಶವೇನೂ ಇರಲಿಲ್ಲ ಆದರೂ ಅಂದು ನಾನು ಕ್ರಿಶ್ಚನ್ ಬಾಲಿಕೆಯೊಡನೆ ನಡೆದುಕೊಂಡ ರೀತಿ, ನನ್ನಾಕೆಗೆ ಅದೇಕೊ ವಿಪರೀತವಾಗಿ ಕಂಡಿತು. ಸರಿ, ತಡಮಾಡಲೇ ಇಲ್ಲ! "ನಿನಗೆ ಇಲ್ಲೇನು ಕೆಲಸ? ಹೀಗೆ ನೀನು ಪದೇ ಪದೇ ನಮ್ಮ ಮನೆಗೆ ಬಂದರೆ ನೋಡು!" ಎಂದು ಆ ಹುಡುಗಿಯನ್ನು ಗದರಿಸಿಯೇ ಬಿಟ್ಟಳು. ತನ್ನ ಮಾನಸಿಕ ದೌರ್ಬಲ್ಯವನ್ನು ಹತ್ತಿಕ್ಕಿಕೊಳ್ಳಲಾಗದೆ, ಮನೆ ಬಾಗಿಲಿಗೆ ಬಂದವರಿಗೂ ಅಪಮಾನ ಮಾಡಲು ಹೇಸುವುದಿಲ್ಲ ಈ ಪ್ರಾಣಿ!" ನನಗೆ ತಲೆ ಕಾಯ್ದು ಹೋಯಿತು. ಅಂದು ಮಧ್ಯಾಹ್ನ ಹೇಗೆ ಊಟ ಮಾಡಿದೆನೋ! ಒಂದೆಡೆ ಮುಸುಕು ಹಾಕಿ ಮಲಗಿ ಬಿಟ್ಟೆ!

ಮೂರು ಘಂಟೆಯ ಸುಮಾರಿಗೆ ನನಗೆ ! ಕಣ್ಣು ತೆರೆಯುವಂತಾಯಿತು. ಹೊರಗೆ ಬಿಸಿಲು ರಣಗುಡುತ್ತಿತ್ತು. ಅದೇಕೋ, ಈಗಿತ್ತ ನಮ್ಮ ಮನೆಯ ಕಡೆಗೆ ಸುಳಿಯದಿದ್ದ ರಾಮಯ್ಯ, ಆ ಬಿಸಿಲಿನಲ್ಲಿಯೇ ಆಕಸ್ಮಾತ್ತಾಗಿ ಬಂದ ನನಗೆ ಆಶ್ಚರ್ಯ! ಅಲ್ಲದೆ ಈತನ ನಿಮಿತ್ತವಾಗಿಯಾದರೂ ಮಧ್ಯಾಹ್ನದ ಕಾಫಿಗೆ ನನ್ನಾಕೆ ಸೊನ್ನೆ ಹಾಕಲಾರಳೆಂದು ಸ್ವಲ್ಪ ಮಟ್ಟಿಗೆ ಸಮಾಧಾನವೂ ಆಯಿತು.

"ಏನು ರಾಮಯ್ಯಾ, ಬಹಳ ಅಪರೂಪ! ಬಿಸಿಲಿನಲ್ಲಿ ಬಂತಲ್ಲ ಸವಾರಿ?"

"ಹೀಗೇ ಮನಸ್ಸಿಗೆ ಬೇಸರವಾಯಿತು; ಬಂದು ಬಿಟ್ಟೆ!"

"ಮನೆಯಲ್ಲಿ ಮತ್ತೇನಾದರೂ ಅನಾಹುತ ಬಂತೇನು?"

"ಎಂದು ಕಡಿಮೆಯಾಗಿದೆ ಹೇಳು ಶ್ರೀನಿವಾಸ! ಆ ಬಜಾರಿಗೆ ಜಾತ್ರೆಗೆ ಹೋಗಬೇಡವೆಂದು ಎಷ್ಟು ಹೇಳಿದೆ! ಥ..ತ್! ಮರ್ಯಾದೆಯಿಲ್ಲದವಳು. ಇಂಥ ಹೆಣ್ಣು ಸತ್ತರೇನು ಹಾಳು!"

"ಏನು ಒಬ್ಬಳೇ ಹೋದಳೇ?"

"ಇಲ್ಲ! ಅಣ್ಣ ಕರೆಯಲು ಬಂದಿದ್ದ! ಅವನೆದುರಿಗೆ ಸೌಜನ್ಯ ಬಿಡಲಾಗುವದೋ? ಅವಳು ಬಂದರೆ ಕರೆದುಕೊಂಡು ಹೋಗು! ಎಂದೆ. ಹೊರಟೇ ಬಿಟ್ಟಳು, ಗಂಡುಬೀರಿ!"

"ಇದರಲ್ಲಿ ಅನಾಹುತವೇನು ಬಂತು ರಾಮಯ್ಯಾ? ಹೇಗೂ ಅಣ್ಣ ಸಂಗಡ ಇರುತ್ತಾನೆ!".

"ಛೀ, ನಿನಗೆ ತಿಳಿಯದೊ! ಇನ್ನು 'ನನ್ನ ಗಂಡ ಹಾಗೆ, ಹೀಗೆ! ಒಂದು ಆಭರಣ ಇಲ್ಲ! ಒಂದು ಸೀರೆ ಇಲ್ಲ! ಬರೇ ಹಿಂಸೆ ಕೊಡೋದು!" ಹೀಗೆ ನೂರು ದೂರು ಅಣ್ಣನೆದುರು ಹೇಳುತ್ತಾಳೆ. ಹಾಳಾದ ಜಾತಿ! ಥುತ್! ಆ ನೀಚಳ ಮುಸುಡು ನೋಡಲಾಗದು!"

"ತೋರಿಕೆಗೆ ರಾಮಯ್ಯ ಈ ಮಾತು ಹೇಳಿದನಾದರೂ ಮನಸ್ಸಿನಲ್ಲಿ ಅನುಮಾನಿಸಿಕೊಂಡಿದ್ದುದು ಬೇರೆಯೆ! ಇಷ್ಟು ಹೊತ್ತಿಗೆ ನನ್ನಾಕೆ ಹೊರಗೆ ಬಂದಳು. ಅವಳಿಗೆ ರಾಮಯ್ಯನೆಂದದ್ದು ಕೇಳಿಸಿರಬೇಕು

"ಸಾಕು ಸಾಕು ರಾಮಯ್ಯ! ನಿಮ್ಮದು ಒಳ್ಳೇ ಸಂಭಾವಿತ ಜಾತಿ! ಅಂಥಾ ಹೆಂಡತಿ ದೊರಕಿದ್ದು ನಿನ್ನ ಪುಣ್ಯ! ದಿನಾ ಆಕೆಯ ಪಾದ ತೊಳೆದು ನೀನು ತೀರ್ಥ ತೆಗೆದುಕೊಳ್ಳಬೇಕು!

ನನಗೆ ದಿಗಿಲಾಯಿತು... ಇನ್ನೂ ಏನೇನು ಹೇಳುತ್ತಾಳೆಯೋ ಎಂದು ರಾಮಯ್ಯನೆಂದ.

“ನೋಡು ಪದ್ದೂ, ನೀನಂದಂತೆ ನನಗೂ ಒಮ್ಮೊಮ್ಮೆ, ಅವಳು ಅಷ್ಟೇನೂ ದುರಾಚಾರಿಣಿಯಲ್ಲವೆಂಬ ಭಾವನೆ ಬರುತ್ತದೆ. ಒಂದೆರಡು ಬಾರಿ ಕಾಲು ಹಿಡಿದುಕೊಳ್ಳುವಷ್ಟು ಪಶ್ಚಾತ್ತಾಪ ಪಟ್ಟಿದ್ದೇನೆ.' ಆದರೆ ನೀನೇ ಹೇಳು, ಮನೆಯಲ್ಲಿ ಹೇಳಿದಂತೆ ಕೇಳಿಕೊಂಡು ಇರಲು ಏನಾಗುತ್ತದೆ ಇವಳಿಗೆ? ಈಗ ಜಾತ್ರೆಗೆ ಹೋಗದೆ ಇದ್ದರೆ ನಡೆಯುತ್ತಿದ್ದಿಲ್ಲವೋ?”

“ಇಷ್ಟು ಮಾತ್ರಕ್ಕೆ ಏನಾಯಿತು? ಚಾಪಲ್ಯ ಬಂತು, ಹೋದಳು; ಅಷ್ಟೇ!”

“ನೀನೂ ಹೆಣ್ಣು! ನಿನಗೆ ಚಾಪಲ್ಯವಿಲ್ಲವೋ! ನೀನೇಕೆ ಹೋಗಲಿಲ್ಲ ಪದ್ದೂ?”

“ನಿನ್ನಂತೆ ನಮ್ಮವರೂ ಕಡೆಹಾಕುವವರಾಗಿದ್ದರೆ ನಾನು ಎಷ್ಟೊಂದು ಕಡೆಗೆ ಹೋಗುವ ಮನಸ್ಸು ಮಾಡುತ್ತಿದ್ದೆನೋ! ಮನೆಯಲ್ಲಿ ನಾನು ಇದ್ದು ಬಿಟ್ಟು ತನ್ನ ಅನಾಚಾರ ಗೋಸ್ಕಾಗಿ ಹೋಗುತ್ತಿದೆಯಲ್ಲಾ... ಅಂತ ನಮ್ಮವರಿಗೆ! ಗಂಡಸರಿಗೆ ಹೆಚ್ಚಾಗಿದ್ದೇನಲ್ಲಾ ನಾನು!”.

ನನ್ನಾಕೆಯ ಕಣ್ಣುಗಳಿಂದ ಒಂದೆರಡು ಹನಿ ಉದುರಿತು. ರಾಮಯ್ಯ ನನ್ನನ್ನು ನೋಡಿದ!

“ಏನಯ್ಯ ಶ್ರೀನಿವಾಸ! ಇಂದು ನಿನ್ನ ಮನೆಯಲ್ಲಿಯೂ ಲಕ್ಷಣ ಚೆನ್ನಾಗಿಲ್ಲಾ... ಅಂತ ಕಾಣುತ್ತೆ!”

“ಎಲ್ಲ ಚೆನ್ನಾಗಿರುತ್ತೆ! ನೀನು ಹೇಳು ರಾಮಯ್ಯ, ಯಾರೋ ಕುಲಗೋತ್ರವಿಲ್ಲದ ಕಿರಸ್ತಾನರ ಹುಡುಗಿ! ಅವಳೊಡನೆ ಏನು ಮಾತು! ಏನು ನಗೆ! ಒಂದು ದಿನವಾದರೂ ಮನೆಯಲ್ಲಿ ಹಾಗೆ ಇದ್ದಿದ್ದರೆ ಆಣೆ!

ನನ್ನಾಕೆ ಒಮ್ಮೆ ದುರುಗುಟ್ಟಿಕೊಂಡು ನನ್ನನ್ನು ನೋಡಿದಳು. ಆ ಅವತಾರ ನೋಡುವಂತಿಲ್ಲ. ಮೋರೆಯಲ್ಲಿ ಅದೇನು ರೌದ್ರ! ಏನು ಕಣ್ಣೀರು! ಕೊರಳುಬ್ಬಿಸಿಕೊಂಡು ಬಿಡುವ... ಏನಾ ಬಿಸಿಯುಸಿರು! ಒಮ್ಮೆಲೇ ಸಿಡಿಲು, ಮಳೆ, ಗಾಳಿ, ಎಲ್ಲಾ ಒಂದು ಬಿಟ್ಟಿದೆ!

"ಹೀಗೊ...! ಮನೆಯಲ್ಲಿ ಇಷ್ಟು ದೊಡ್ಡ ತೂಫಾನು! ನನಗೆ ಬುದ್ಧಿ ಹೇಳುತ್ತಾನೆ ಬೃಹಸ್ಪತಿ!"

ರಾಮಯ್ಯ ಗಹಗಹಿಸಿದ. ನನ್ನ ಅವಸ್ಥೆ ಯಾರಿಗೂ ಬೇಡ!

"ಹಾಂ! ರಾಮಯ್ಯ, ನೀನೇ ತೀರ್ಮಾನ ಹೇಳು! ದನಕ್ಕೆ ಹೊಡೆದ ಹಾಗೆ ಹೊಡೆಯುತ್ತಿದ್ದೀಯಲ್ಲ ಹೆಂಡತೀನ! ಈಗ ನನ್ನಾಕೆಯ ಕೈಯಲ್ಲಿ ಒಂದು ದೊಣ್ಣೆ ಕೊಡು! ಏನು ಶಿಕ್ಷೆ ಆಗುತ್ತದೆಯೋ ಆಗಲಿ!" ನಾನೆಂದೆ.

"ಅದು ನಿಮ್ಮ ಜಾತಿಗೇ ಇರಲಿ! ನೀವು ಹೀಗೆಲ್ಲ ನಡೆದುಕೊಂಡರೆ, ನನಗೆ ಈ ಮನೆಯಲ್ಲಿ ಬಾಳುವೆ ಮಾಡುವುದು ಎಷ್ಟಕ್ಕೂ ಸಾಧ್ಯವಿಲ್ಲ!" ನನ್ನಾಕೆಯ ನಿರ್ಧಾರದ ನುಡಿ.

"ಹಾಗಿದ್ದರೆ ನಾನು ಕುತ್ತಿಗೆಗೆ ಕಲ್ಲು ಕಟ್ಟಿಕೊಂಡು ಬಾವಿಗೆ ಬೀಳುತ್ತೇನೆ. ಆ ಮೇಲೆ ಸಾಧ್ಯವಾಗಬಹುದು!" ನನಗೆ ಎಂದೂ ಇಲ್ಲದ ದಾರುಣ ಕೋಪ ಬಂದಿತ್ತು! ನನ್ನಾಕೆ ಹೆದರಿದಳು.

"ದಮ್ಮಯ್ಯ! ನಿಮ್ಮ ಕಾಲು ಬೀಳುತ್ತೇನೆ! ನಿಮ್ಮೊಡನೆ ಮಾತನಾಡಲಾರೆ! ಏನು ಬೇಕಾದದ್ದು ಮಾಡಿಕೊಳ್ಳಿ! ರಾಮಯ್ಯ, ತಡೆ ಹೋಗಬೇಡ! ಈಗ ಕಾಫಿಗೆ ಇಡುತ್ತೇನೆ!"

ನಾನಷ್ಟು ಬಿಮ್ಮಗೆ ವರ್ತಿಸದಿದ್ದರೆ ಆ ಚಂಡಿ ಕೇಳುತ್ತಿದ್ದಳೇ! ರಾಮಯ್ಯ ಕಾಫೀ ಕುಡಿದು ಹೊರಡುವಾಗ "ನನ್ನ ಮನೆಗೆ ಬರುವುದನ್ನು ನೀವೆಲ್ಲ ಬಿಟ್ಟೇಬಿಟ್ಟಿರಿ! ಅಂದಿನ ಮಾತು ಮರೆತು ಬಿಡು ಶ್ರೀನಿವಾಸ! ಇನ್ನು ಹಾಗಾಗಬಾರದು, ನಾಳೆ ಬಾ ಮತ್ತೆ!" ಎಂದು ಮೃದುವಾಗಿ ಹೇಳಿದ.

೫

ನನ್ನಾಕೆ ಪದ್ಮೆಯ ಮಾತಿನಿಂದ ರಾಮಯ್ಯ ಸ್ವಲ್ಪ ಮೆತ್ತಗಾಗಿದ್ದ! ಮೊದಲು ಸಹ ಆತ ಒಂದೆರಡು ಬಾರಿ ಪಶ್ಚಾತ್ತಾಪ ಹೊಂದಿ ಹೆಂಡತಿಯು

ಕಾಲು ಹಿಡಿದುಕೊಳ್ಳುವ ಮನಸ್ಸು ಮಾಡಿದ್ದೂ ನಿಜ ಎನ್ನಿ. ಆದರೆ ಆ ಬುದ್ಧಿ ಒಂದೇ ಕ್ಷಣ, ಮುಂದೆ ಆ ರೂಪ ಬೇರೆಯೇ. ಈಗಲೂ ಹಾಗೆ! ದಾರಿಯುದ್ದಕ್ಕೂ ರಾಮಯ್ಯನಿಗೆ ಒಂದೇ ಆಲೋಚನೆ "ತನ್ನ ಹೆಂಡತಿ ನನ್ನ ಇಚ್ಛೆಯಂತೆ ಒಂದು ದಿನವಾದರೂ ತನ್ನ ಬಗ್ಗೆ ಅನುಮಾನಪಡುವುದಿಲ್ಲವೇಕೆ....? ಅವಳಿಗೆ ತಾನು ಬೇಕಾಗಿಲ್ಲ! ತಾನೆಷ್ಟು ತಡೆ ಹಾಕಿದರೂ ಅವಳು ಅಣ್ಣನ ಬೆನ್ನು ಹತ್ತಿ ಜಾತ್ರೆಗೆ ಹೋದಳು. ಹಾಂ, ಅಲ್ಲಿ ಆ ವೆಂಕೋಬರಾಯನಿದ್ದಾನೆ. ಥೂತ್! ಹಾಳು ಮುಂಡೆ! ಮನೆಗೊಂದು ಬರಲಿ!"

ಕ್ಷಣ ಕ್ಷಣಕ್ಕೂ ಜ್ವಾಲೆ ಅವನ ಎದೆಯಲ್ಲಿ ಭುಗಿಲ್ ಎಂದು ಹೊತ್ತಿಕೊಳ್ಳುತ್ತಿದೆ.

* * * *

ದೇವಮ್ಮನ ಅಣ್ಣನು ಅವಳನ್ನು ಗಾಡಿಯಲ್ಲಿ ತಂದು ಬಿಟ್ಟುಹೋದ. ಬರುವಾಗ ಪದ್ಮನಾಭಯ್ಯನ ಅಂಗಡಿಯಿಂದ ಒಂದು ಸೀರೆ, ಹಾಗೂ ನಾಲ್ಕು ವಾರು ಸಿಲ್ಕು ಬಟ್ಟೆ ತೆಗೆಸಿಕೊಟ್ಟಿದ್ದಾನೆ ಆ ಪುಣ್ಯಾತ್ಮ! ರಾಮಯ್ಯನು ತನ್ನ ಭಾವ ಹೊರಟು ಹೋಗುವುದನ್ನೇ ಕಾಯುತ್ತಿದ್ದ. ಒಳಗೆ ದೇವಮ್ಮ ಮೊದಲಿನ ಪಂಕ್ತಿ ಎಂಜಲು ಸಾರಿಸಿ, ಈಗಷ್ಟೇ ಊಟಕ್ಕೆ ಕುಳಿತಿದ್ದಳು. ಅಡಿಕೆ ಪುಡಿ ಮಾಡುವ ನೆವ ಮಾಡಿ ರಾಮಯ್ಯ ಒಳಗೆ ಬಂದ! ಒರಳಿನ ಮೇಲೊಂದು ಉರುಟಾದ ಗುಂಡು ಇಟ್ಟಿತ್ತು. ಆತನ ಮೋರೆ ಈಗ ಕಾದ ಕಾವಲಿಯ ಹಾಗೆ— ಹೊಗೆ ಚಿಮ್ಮುತ್ತಿದೆ!

"ಕೊನೆಗೂ ನನ್ನ ಮಾತು ಕಸದ ಬುಟ್ಟಿಗೆ ಹಾಕಿದೆಯಲ್ಲವೇ? ತೀರ್ಥಹಳ್ಳಿ ಪೇಟೆಯಲ್ಲಿ ಎಷ್ಟು ಕಡೆಗೆ ತಿರುಗಾಡಿದೆ? ಆ ವೆಂಕೋಬರಾಯ, ಸೀರೆ-ಸಿಲ್ಕು ಇಷ್ಟೆಯೋ, ಇನ್ನೇನಾದರೂ ಕೊಟ್ಟನೋ?"

"ನಿಮ್ಮ ಭ್ರಾಂತಿ ಹಾಳಾಯಿತು! ಸೀರೆ ಅಣ್ಣ ತೆಗೆಸಿಕೊಟ್ಟಿದ್ದಾನೆ. ನಿಮ್ಮ ವೆಂಕೋಬರಾಯ ಯಾರೋ! ಏನೆಲ್ಲಾ ಆಲೋಚಿಸೋದು ಹೋಗಿ ಆಚೆ!"

"ಮುಚ್ಚು ಬಾಯಿ, ಮುಂಡೆ! ಸುಳ್ಳು ಬೇರೆ ಹೇಳೋದು. ವೆಂಕೋಬರಾಯನೆಂದರೆ ಗೊತ್ತಿಲ್ಲವೋ ನಿನಗೆ? ಐವತ್ತು ರೂಪಾಯಿ ಸೂಟು ಬಿಟ್ಟಿದ್ದನಲ್ಲ!"

"ಇರಬಹುದು. ಈಗ ನಾನು ಊಟ ಮಾಡಬೇಕೋ, ಹೀಗೆಯೇ ಏಳಬೇಕೋ? ಏನು ಹೇಳಿ!

"ಎದ್ದು ಹೋಗೋದು ಎಲ್ಲಿಗೆ? ಸಾಯಿ ಹಾಗೆಯೆ, ರಂಡೆ !

ಅಡಿಕೆಯನ್ನು ಪುಡಿಮಾಡಲೆಂದು ಎತ್ತಿ ಹಿಡಿದಿದ್ದ ಗುಂಡನ್ನು ಆ ರಾಕ್ಷಸ ಬೀಸಿ ಒಗೆದ! ಗುಂಡು ನೇರವಾಗಿ ದೇವಮ್ಮನ ಎದೆಗೆ ಬಡಿಯಿತು. "ಅಯ್ಯೋ, ಸತ್ತೆ" ಎನ್ನುತ್ತ ಆ ಬಡಪ್ರಾಣಿ ನೆಲಕ್ಕೆ ಬಿತ್ತು. ಕೈಯ್ಯೊಳಗಿನ ತುತ್ತು ಹಾಗೆಯೇ ಇತ್ತು. ಅದನ್ನು ಬಾಯೊಳಗೆ ಇಟ್ಟುಕೊಳ್ಳಲಿಕ್ಕೆ ದೇವಮ್ಮನ ಪ್ರಾಣ ಹೊರಟು ಹೋಯಿತು.

ಆ ಗುಂಡು ದೇವಮ್ಮನಿಗೆ ತಾಗಬೇಕೆಂದಾಗಲೀ, ಆಕೆ ಸಾಯಬೇಕೆಂದಾಗಲೀ ರಾಮಯ್ಯನಿಗೆ ಲೇಶವೂ ಅಪೇಕ್ಷೆ ಇರಲಿಲ್ಲ. ಆದರೇನು! ಎಲ್ಲ ಕೈ ಮೀರಿ ಹೋಯಿತು!

ರಾಮಯ್ಯ ತನ್ನ ಪ್ರಮಾದಕ್ಕಾಗಿ ಹೊಟ್ಟೆ ಹೊಟ್ಟೆ ಬಡಿದುಕೊಂಡು ಗೋಳಾಡಿದ. "ಅಯ್ಯೋ ದೇವಿ!... ಹೋಗಿಯೇ ಬಿಟ್ಟೆಯಾ... ನಾನು ಕೊಲೆಗಡುಕ! ಪತಿವ್ರತೆಯಾದ ನಿನ್ನನ್ನು ಕೊಂದೆ! ನನ್ನ ಮನೆ ಹಾಳು ಮಾಡಿಕೊಂಡೆ.....!" ಎಂದು ಬೊಬ್ಬಿಟ್ಟ!

ಪೋಲಿಸರಿಗೆ ವರದಿ ಹೋಗಿ ಪಂಚನಾಮೆ ಮುಂತಾದದ್ದು ನಡೆಯಬಾರದೆಂದು ನಾವೆಲ್ಲ ಸೇರಿ "ದೇವಮ್ಮನಿಗೆ ಒಮ್ಮೆಲೇ ಹೃದಯಕ್ರಿಯೆ ಬಂದಾಗಿ ಪ್ರಾಣಬಿಟ್ಟಳು!" ಎಂದು ಊರ ತುಂಬ ಹೇಳಿಕೊಂಡು ತಿರುಗಿದೆವು.

ಅಂತಹ ಭಂಗಾರದಂತಹ ಹೆಣ್ಣನ್ನು ಬಳಸಿಕೊಳ್ಳುವ ಭಾಗ್ಯ ರಾಮಯ್ಯನಿಗಿರಲಿಲ್ಲ! "ಕೈ ತುತ್ತು ಬಾಯಿಗಿಲ್ಲದೆ ಹೋಯಿತು."

# ಕರ್ನಾಟಕ ಗ್ರಂಥಭಂಡಾರ, ಗೋಕರ್ಣ.

ಇಲ್ಲಿ ಮರಾಠಿ ಗ್ರಂಥಗಳಲ್ಲದೆಯೂ ಮತ್ತು ಇತರ ಎಲ್ಲ ಗ್ರಂಥಗಳು
ಮಾರಾಟಕ್ಕೆ ಸಿಗುತ್ತವೆ

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ಕೊಡಲಾಗುವದು.

---

[illegible]

[illegible]

[illegible]

[illegible]

[illegible]

ಬೇಕಾದ ಎಲ್ಲ ಅಶಕ್ತತೆಗಳಿಗೆ ರಾಮಬಾಣ

## ಹೊನ್ನಾವರ ಫಾರ್ಮಸಿ, ಹೊನ್ನಾವರ.